ಮಹಾತ್ಯಾಗಿ ಲಕ್ಷ್ಮೀದೇವಿ

ಬೆಂಗಳೂರು ನಿರ್ಮಾಪಕ

ಮಾಗಡಿ ಕೆಂಪೇಗೌಡ

(ಐತಿಹಾಸಿಕ ನಾಟಕ)

ಮಹಾತ್ಯಾಗಿ ಲಕ್ಷ್ಮೀದೇವಿ

ಲೇಖಕರು

ನಂದಿ ಎನ್. ವೆಂಕಟೇಶಮೂರ್ತಿ ಎಂ.ಎ.ಡಿ.ಸಿ.ಟಿ.

ಪರಿಷ್ಕರಣ

ನಂದಿ ಎನ್. ವೆಂಕಟಸ್ವಾಮಿ ಎಂ.ಎ., ಬಿ.ಎಡ್.

ಮಾಗಡಿ ಕೆಂಪೇಗೌಡ ಇತಿಹಾಸ ಸಂಗ್ರಹಕರು ಮತ್ತು ಪ್ರಕಾಶಕರು

ಬಿ. ವಿ. ಲಕ್ಷ್ಮಣ್

(ಭದ್ರಾವತಿ ಕಲಾವಿದರು)

ಬಿ. ವಿ. ಲಕ್ಷ್ಮಣ್
ಮಾಗಡಿ ಕೆಂಪೇಗೌಡ ಇತಿಹಾಸ ಸಂಗ್ರಹಕಾರರು ಮತ್ತು ಪ್ರಕಾಶಕರು
ಮನೆ ನಂ. 10, 2ನೇ ಅಡ್ಡ ರಸ್ತೆ
ಗೋವಿಂದರಾಜನಗರ
ಬೆಂಗಳೂರು–560 040

ಬೆಲೆ ರೂ. 6–00

ಪ್ರಥಮ ಮುದ್ರಣ : 1986

ಕೆಂಪೇಗೌಡ ಕಥಾ ಕಾದಂಬರಿಯ ಸಂಪೂರ್ಣ ಹಕ್ಕು ಪ್ರಕಾಶಕರದು.
ಪ್ರಕಾಶಕರ ಅನುಮತಿಯಿಲ್ಲದೆ ಕಥಾವಸ್ತುವನ್ನು ಯಾರೂ ಬಳಸಕೂಡದು.

ಮುದ್ರಕರು ;
ಇಳಾ ಅಸೋಸಿಯೇಟ್ಸ್
181/183, ಮೂರನೇ ಮುಖ್ಯ ರಸ್ತೆ
ಚಾಮರಾಜಪೇಟೆ
ಬೆಂಗಳೂರು-560 018

ಆ ಶೀ ರ್ವ ಚ ನ

ಅನುಗಂತುಂ ಸತಾವರ್ತ್ಮ ಕೃತ್ಸ್ನಂಯದಿನ ಶಕ್ಯತೇ ।
ಸ್ವಲ್ಪ ಮನುಷ್ಯನುಗಂತವ್ಯಂ ಮಾರ್ಗಸ್ಥೋ ನಾವಸೀದತಿ ॥

"ಸಜ್ಜನರ ಮಾರ್ಗವನ್ನು ಪೂರ್ಣವಾಗಿ ಅನುಸರಿಸಲು ಸಾಧ್ಯವಾಗದೆ ಹೋದರೆ ಸ್ವಲ್ಪವನ್ನಾದರೂ ಅನುಸರಿಸಬೇಕು. ಋಜು ಮಾರ್ಗದಲ್ಲಿರುವವರು ನಾಶ ಹೊಂದುವುದಿಲ್ಲ" ಅದೇ ರೀತಿ ಮಹಾತ್ಯಾಗಿ ಲಕ್ಷ್ಮೀದೇವಿಯ ತ್ಯಾಗ ಗುಣವನ್ನು ನಮ್ಮ ಸಹೋದರಿಯರು ಸ್ವಲ್ಪವಾದರೂ ಅನುಸರಿಸಿದಲ್ಲಿ ನಮ್ಮ ಭಾರತ ಸಾಂಸ್ಕೃತಿಕವಾಗಿ ಶ್ರೀಮಂತಗೊಳ್ಳುವುದರಲ್ಲಿ ಸಂಶಯವಿಲ್ಲ.

ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿ

ನನ್ನ ಮನೆ ಬೆಳಗಿದ ಜ್ಯೋತಿ ಲಕ್ಷ್ಮಮ್ಮನ ಚಿರಸ್ಮರಣೆಗಾಗಿ
ಅರ್ಪಿಸಿದ ಕೃತಿ ಈ ಕಾದಂಬರಿ

ದಿ। ಲಕ್ಷ್ಮಮ್ಮನವರ ಭಾವಚಿತ್ರ



ಪತಿ ಚೆನ್ನಪ್ಪ

ಲಕ್ಷ್ಮಿ ಕಾಂಪ್ಲೆಕ್ಸ್, ನಂ. 391/42, 19ನೇ ಮುಖ್ಯರಸ್ತೆ,
1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560 010

ಮುನ್ನುಡಿ

ಮಹಾತ್ಯಾಗಿ "ಲಕ್ಷ್ಮಿದೇವಿ" ಪುಸ್ತಕ ಹೊರಬಂದಿದೆ. ಬಹು ಕಷ್ಟಪಟ್ಟು ಶ್ರೀ ಬಿ. ವಿ. ಲಕ್ಷ್ಮಣ್‌ರವರು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ಈ ಪುಸ್ತಕ ರಚನೆಯಾಗಿದೆ.

ಶ್ರೀ ನಂದಿ ವೆಂಕಟೇಶ್‌ಮೂರ್ತಿ ಇನ್ನಷ್ಟು ವಿಚಾರಗಳನ್ನು ಶ್ರೀ ಬಿ. ವಿ. ಲಕ್ಷ್ಮಣ್‌ರವರಿಂದ ಸಂಗ್ರಹಿಸಿ ಇನ್ನೂ ಅನೇಕ ಪುಸ್ತಕಗಳನ್ನು ಚಿತ್ರ ಸಹಿತ ಪ್ರಕಟಿಸುವುದು ಒಳ್ಳೆಯದು.

ಶ್ರೀ ಬಿ. ವಿ. ಲಕ್ಷ್ಮಣ್‌ರವರು ಎಲೆಯ ಮರೆಯ ಕಾಯಿಯಂತೆ ಕೆಂಪೇಗೌಡರ ರಾಜವಂಶದ ಬಗ್ಗೆ ಬಹಳಷ್ಟು ವಿಷಯ ಸಂಗ್ರಹಿಸಿದ್ದಾರೆ. ಅಪೂರ್ವ ದಾಖಲೆಗಳು ಅವರ ಬಳಿಯಿವೆ. ಇವುಗಳನ್ನು ಅಧ್ಯಯನಮಾಡಿ ವಿಶ್ಲೇಷಿಸಿ ಒಂದು ಬೃಹತ್ ಗ್ರಂಥವನ್ನು ರಚಿಸಬಹುದು. ಈ ಕೆಲಸವನ್ನು ನಂದಿ ವೆಂಕಟೇಶ್‌ಮೂರ್ತಿಯವರು ಆರಂಭಿಸಬಹುದು.

ಶ್ರೀ ಬಿ. ವಿ. ಲಕ್ಷ್ಮಣ್‌ರವರು ಸರಳಜೀವಿ. ಕಳೆದ 35 ವರ್ಷಗಳಿಂದ ಕೆಂಪೇಗೌಡ ರಾಜವಂಶದ ಬಗ್ಗೆ ಸಂಗ್ರಹ ಮಾಡಿರುವ ಸಂಗತಿಗಳು ಚರಿತ್ರೆಯ ಮೇಲೆ ಕಿರಣ ಬೀರುವುದರಲ್ಲಿ ಸಂದೇಹವಿಲ್ಲ. ಆದರೆ ಈ ಸಂಶೋಧನಾ ಕಾಯಕದ ಉಪಯೋಗ ಜನತೆ ಮಾಡಿಕೊಳ್ಳಬೇಕಾಗಿದೆ. ಈ ಕೆಲಸವನ್ನು ನಿರೀಕ್ಷಿಸಿದ ರೀತಿಯಲ್ಲಿ ಸರಕಾರ ಮಾಡಿಲ್ಲ. ಇದು ದುಃಖದ ವಿಷಯ.

ಈ ಬರಹವನ್ನು ಪರಿಷ್ಕರಿಸಿರುವ ನಂದಿ ವೆಂಕಟಸ್ವಾಮಿ ಮತ್ತು ಲೇಖಕರಾದ ಶ್ರೀ ವೆಂಕಟೇಶಮೂರ್ತಿಗಳಾದ ನಂದಿ ಸಹೋದರರು ಅಭಿ ನಂದನಾರ್ಹರು. ಈ ಪುಸ್ತಕ ಜನಪ್ರಿಯವಾಗಲಿ.

ಬಿ. ಎ. ಲಕ್ಷ್ಮಣ್‌ರವರಲ್ಲಿ ಮಾಹಿತಿಯ ಮಹಾಪೂರವಿದೆ. ಈ ಪುಸ್ತ ಒಂದು ಹನಿ ಮಾತ್ರ.

ಬಿ. ಎಸ್. ಚಂದ್ರಕಾಂ
ಸಂಪಾದಕ ಹಾಗೂ ಕಲಾವಿದರ
ಭದ್ರಾವ

ಲೇಖಕರ ನುಡಿ

ಮಹಾಲಕ್ಷ್ಮಿದೇವಿಯ ಐತಿಹಾಸಿಕ ಕಾದಂಬರಿಯನ್ನು ಬರೆಯಬೇಕೆಂದು ನನ್ನನ್ನು ಪ್ರೋತ್ಸಾಹಿಸಿದ ಬಿ. ವಿ. ಲಕ್ಷ್ಮಣ್‌ರವರು ಕನ್ನಡನಾಡಿನಾದ್ಯಂತ ಶ್ರಮಪಟ್ಟು ಸುತ್ತಾಡಿ ಕೆಂಪೇಗೌಡರ ವಂಶದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಕೆಂಪೇಗೌಡರು ಸ್ಥಾಪನೆ ಮಾಡಿದ ಬೆಂಗಳೂರು ನಗರದ ಬಗ್ಗೆ ಇತಿಹಾಸಕಾರರು ಅನೇಕ ವಿಚಾರಗಳನ್ನು ಬೆಳಕಿಗೆ ತಂದಿದ್ದಾರೆ. ಆದರೂ ಸಂಘಟನೆಗಳು ಇನ್ನೂ ಬೆಳಕಿಗೆ ಬರಬೇಕು. ಉದಾಹರಣೆಗೆ ಕೆಂಪೇಗೌಡರ ಸೊಸೆ ಮಹಾತ್ಯಾಗಿ ಲಕ್ಷ್ಮಿದೇವಿಯು ಬಾಳಿದ ಬಗ್ಗೆ ಯಾವ ವಿದ್ವಾಂಸರು ಬರೆದಿಲ್ಲ. ಆಕೆ ಕೋರಮಂಗಲದವಳೆಂದು ಮಾತ್ರ ಬರೆದಿದ್ದಾರೆ. ಆಕೆಯ ಜೀವನ ಚರಿತ್ರೆ ಆಕೆಯ ವಂಶಸ್ಥರ ಹೆಸರುಗಳು ಇತಿಹಾಸದಲ್ಲಿ ಕಣ್ಮರೆಯಾಗಿವೆ. ಬಿ. ವಿ. ಲಕ್ಷ್ಮಣ್ ಹಾಗೂ ನಮ್ಮ ಹಿರಿಯ ಸಹೋದರರಾದ ಎನ್. ವೆಂಕಟಸ್ವಾಮಿಗಳ ಸತತ ಪ್ರಯತ್ನದಿಂದ ಕೆಲವು ಸತ್ಯ ಘಟನೆಗಳನ್ನು ಸಂಗ್ರಹಿಸಿ ಶ್ರೀ ಆದಿ ಚುಂಚನಗಿರಿ ಮಠಾಧೀಶರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಅನುಗ್ರಹದಿಂದ ಈ ಕೃತಿಯನ್ನು ಬರೆದಿದ್ದೇನೆ.

ಈ ಕೃತಿಯನ್ನು ಮುದ್ರಿಸಲು ದೊಡ್ಡ ಮನಸ್ಸು ಮಾಡಿದ ಶ್ರೀ ಲಕ್ಷ್ಮೀ ಕಾಂಪ್ಲೆಕ್ಸ್ ಮಾಲೀಕರರಾದ ಚೆನ್ನಪ್ಪನವರಿಗೆ ದೇವರು ಇನ್ನೂ ಹೆಚ್ಚಿನ ಸಾಹಿತ್ಯ ಪ್ರೋತ್ಸಾಹ ಕೊಡಲೆಂದು ಹಾರೈಸುತ್ತೇವೆ.

ಈ ಕಾದಂಬರಿಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ "ಇಳಾ ಅಸೋಸಿಯೇಟ್ಸ್" ಮಾಲೀಕರಾದ ಶ್ರೀ ಎಂ. ಎಸ್. ರಾಮಮೋಹನ್‌ರವರಿಗೆ ನನ್ನ ಕೃತಜ್ಞತೆಗಳು.

ಹಾಗೂ ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡರ ಪ್ರಚಾರ ಸಮಿತಿಯ ಅಧ್ಯಕ್ಷರೂ ಮತ್ತು "ಮಯೂರ" ಬೇಕರಿಯ ಮಾಲೀಕರಾದ

ಶ್ರೀ ಎಂ. ಶಂಕರೇಗೌಡರವರು ಇನ್ನು ಮುಂದೆ ಕಥಾ ಸಂಗ್ರಹಕ್ಕೂ, ಉತ್ತಮ ಪ್ರತಿಗಳ ಮುದ್ರಣಕ್ಕೂ ಪ್ರೋತ್ಸಾಹದಾತರಾಗುತ್ತಾರೆಂದು ನಂಬಿ ದೇವಾನುದೇವ "ಭೈರವೇಶ್ವರನು" ಇನ್ನೂ ಹೆಚ್ಚಿನ ಶಕ್ತಿಯನ್ನು ಕರುಣಿಸ ಲೆಂದು ಹಾರೈಸುತ್ತೇವೆ.

ನಂದಿ ಸಹೋದರರು

ಎನ್. ವೆಂಕಟಸ್ವಾಮಿ, ಎನ್. ವೆಂಕಟೇಶಮೂರ್ತಿ





ಪ್ರಕಾಶಕರ ನುಡಿ

ಮೈಸೂರು ಪ್ರಾಂತ್ಯದಲ್ಲಿ ಗಣ್ಯಪ್ರಮಾಣದಲ್ಲಿರುವ ಒಕ್ಕಲಿಗ ಜನಾಂಗದವರ ಐತಿಹಾಸಿಕ, ಧಾರ್ಮಿಕ, ಸಾಮಾಜಿಕ ಜೀವನವನ್ನು ಗ್ರಂಥಗಳ ರೂಪದಲ್ಲಿ ಪ್ರಕಟಿಸಬೇಕು ಮತ್ತು ನಾಟಕದ ರೂಪದಲ್ಲಿ ಪ್ರದರ್ಶಿಸಬೇಕೆಂಬ ಸದಾಶಯವು ಬಾಲ್ಯಾರಂಭದಿಂದಲೂ ನನಗೆ ಇತ್ತು.

ಈ ನನ್ನ ನಾಟಕದ ಗೀಳು–ಕೆಂಪೇಗೌಡರ ಮೂಲಪುರಷರ ಕಥಾವಿಷಯಗಳ ಸಂಗ್ರಹದ ಕಡೆ ಒಯ್ಯಿತು. ಸುಮಾರು 40 ವರ್ಷಗಳ ಸತತ ಪ್ರಯತ್ನದ ಫಲವಾಗಿ ಲೇಖಕರಾದ ಶ್ರೀ ಎಸ್. ಕೆ. ಕರೀಂಖಾನರವರಿಂದ ಮಹಾಪ್ರಭು ಮಾಗಡಿ ಕೆಂಪೇಗೌಡ ಮತ್ತು ಬೆಂಗಳೂರು ನಿರ್ಮಾಪಕ ಮಾಗಡಿ ಕೆಂಪೇಗೌಡ ಎಂಬ ನಾಟಕಗಳನ್ನೂ, ಲೇಖಕಿಯರಾದ ಶ್ರೀಮತಿ ಎಸ್. ಎ. ಮಂಜುಳಾರವರಿಂದ ಉತ್ತರಿದುರ್ಗವೆಂಬ ಕೆಂಪೇಗೌಡರ ವಂಶಸ್ಥರ ಸಂಕ್ಷಿಪ್ತ ಜೀವನ ಚರಿತ್ರೆಯನ್ನು, ಶ್ರೀ ನಂದಿ ವೆಂಕಟೇಶಮೂರ್ತಿಯವರಿಂದ ಆವತಿನಾಡಪ್ರಭು ರಣಭೈರೇಗೌಡರ ನಾಟಕವನ್ನು, ಮಹಾತ್ಯಾಗಿ ಲಕ್ಷ್ಮೀದೇವಿಯ ಜೀವನಚರಿತ್ರೆಯನ್ನು ಒಕ್ಕಲಿಗರ ಇತಿಹಾಸ ಮತ್ತು ಪರಂಪರೆ ಎಂಬ ಕಿರುಹೊತ್ತಿಗೆಯನ್ನು ಹೊರತರಲಾಗಿದೆ. ಬಹಳ ಶ್ರಮಪಟ್ಟು ನನ್ನ ಮಾತಿಗೆ ಓಗೊಟ್ಟು ಅಧಿಕ ಶ್ರಮದಿಂದ ರಚಿಸಿದ ಶ್ರೀ ನಂದಿ ಎನ್.ವೆಂಕಟೇಶಮೂರ್ತಿಯವರಿಗೂ, ಮತ್ತು ಪರಿಷ್ಕರಣಗೊಳಿಸಿದ ಎನ್. ವೆಂಕಟಸ್ವಾಮಿಯವರಿಗೂ ಅನಂತಾನಂತ ವಂದನೆಗಳು.

ನನಗೆ ಸಕಾಲದಲ್ಲಿ ಎಲ್ಲಾರೀತಿಯಿಂದಲೂ ಯಾವ ಅಡಚಣೆಯಿಲ್ಲದೆ ಸಹಕಾರ ಮತ್ತು ಪ್ರೋತ್ಸಾಹ ಕೊಟ್ಟು ಆಶೀರ್ವದಿಸಿದ ಶ್ರೀ॥ ಶ್ರಿ॥ ಶ್ರೀ॥ ಬಾಲಗಂಗಾಧರನಾಥ ಸ್ವಾಮಿಗಳು, ಶ್ರೀಯುತರುಗಳಾದಂತ ರಾಷ್ಟ್ರಕವಿ ಕುವೆಂಪು, ಮಾನ್ಯ ದೇ॥ ಜವರೇಗೌಡರು, ಎಮ್. ಚಿನ್ನಸ್ವಾಮಿಯವರು. ಆರ್. ರಂಗಸ್ವಾಮಿಗಳು, ಎಚ್. ಆರ್. ದಾಸೇಗೌಡರು, ಬಿ. ಎಸ್. ಚಂದ್ರ ಕಾಂತ್. ವಿ. ಪಾಪಣ್ಣ. ಎಸ್. ಶಂಕರೇಗೌಡ, ವೀರಪ್ಪ, ದೇವಗಿರಿ ಪಾಂಡು ರಂಗ, ಟಿ.ಜಯರಾಂ ಹಾಗೂ ತೆರೆಮರೆಯಲ್ಲಿ ಪ್ರತ್ಯಕ್ಷವಾಗಿಯೂ, ಪರೋಕ್ಷ ವಾಗಿಯೂ ಸಹಾಯಮಾಡಿದ ಎಲ್ಲಾ ಮಹನೀಯರುಗಳಿಗೂ ನಾನು ಅಭಾರಿ ಯಾಗಿದ್ದೇನೆ.

ಶ್ರೀ ಲಕ್ಷ್ಮಿ ಕಾಂಪ್ಲೆಕ್ಸ್ ಮಾಲೀಕರಾದ ಶ್ರೀ ಚೆನ್ನಪ್ಪನವರು, "ಮಹಾ ತ್ಯಾಗಿ ಲಕ್ಷ್ಮಿದೇವಿ" ಎಂಬ ಈ ಕಾದಂಬರಿಯನ್ನು ಪ್ರಕಟಿಸಲು ಸಹಾಯ ಮಾಡಿರುತ್ತಾರೆ.

ಕಾದಂಬರಿಯನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ 'ಇಳಾ ಅಸೋಸಿಯೇಟ್ಸ್'ನ ಮಾಲಿಕರಾದ ಶ್ರೀ ರಾಮ ಮೋಹನರವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಬಿ. ವಿ. ಲಕ್ಷ್ಮಣ್

ನಾಲ್ಕು ಮಾತು

ಒಂದು ದೇಶದ ಇತಿಹಾಸ, ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಕಣ್ಮಿಂಚಿದ ವ್ಯಕ್ತಿಗಳ ಕೊಡುಗೆಗಳ ಮೇಲೆ ಮಾತ್ರ ನಿಂತಿರುವುದಿಲ್ಲ. ಹಾಗಿದ್ದ ಪಕ್ಷದಲ್ಲಿ ಆಗ್ನೇಯ ಏಷ್ಯಾದ ಚರಿತ್ರೆ ಇಂದು ಮಾನ್ಯತೆ ಪಡೆಯುತ್ತಿರಲಿಲ್ಲ. ಇತಿಹಾಸ ಎಲ್ಲಾ ಗುಂಪಿನ ವ್ಯಕ್ತಿಗಳ ಸಾಮಾಜಿಕ, ಆರ್ಥಿಕ ಬೆಳವಣಿಗೆಗಳನ್ನು ಒಳಗೊಂಡು ದಷ್ಟಪುಷ್ಟವಾಗಿ ಬೆಳೆಯಬೇಕು. ಅದರಲ್ಲೂ ರಾಜ್ಯವಾಳುವುದರಿಂದ ಹಿಡಿದು ಸಾಮಾನ್ಯರವರಿಗೆ ಸಲ್ಲುವ ಐತಿಹಾಸಿಕ ಕಾಣಿಕೆಗಳನ್ನು ಪಡೆಯಬೇಕು. ಅಂಥಹ ಭಾಗ್ಯ ಕರ್ನಾಟಕದ್ದಾಗಿದೆಯೆಂದರೆ ಆಶ್ಚರ್ಯ ಪಡಬೇಕಾಗಿಲ್ಲ.

ಮಯೂರ ವರ್ಮ, ಪುಲಿಕೇಶಿ, ನೃಪತುಂಗ, ವಿಕ್ರಮಾದಿತ್ಯ, ವಿಷ್ಣುವರ್ಧನ ಮುಂತಾದ ಕನ್ನಡನಾಡಿನ ಸುಪುತ್ರರ ಸಾಧನೆಗಳು ಜಗತ್ಪ್ರಸಿದ್ಧವಾಗಿರುವುದು ಸರ್ವಕಾಲಿಕ ಸತ್ಯ. ಕಾರಣಾಂತರದಿಂದ ನಾಡಿನಲ್ಲಿ ಛಿದ್ರತೆ ಕಾಣಿಸಿಕೊಂಡು ತುಂಡು ತುಂಡು ಪ್ರಾಂತ್ಯಗಳನ್ನು ಬೇರೆ ಬೇರೆಯಾಗಿ ಆಳಿದ ನಮ್ಮ ಪಾಳೆಯಗಾರರು ಸಹಾ ಆ ಮಹನೀಯರ ಜನಕಲ್ಯಾಣ ಕಾರ್ಯಗಳನ್ನು ತೊರೆಯಲಿಲ್ಲ, ಮರೆಯಲಿಲ್ಲವೆಂಬುದು ಐತಿಹಾಸಿಕವಾಗಿ ಕಂಡುಬಂದಿದೆ.

ಅಂತಹ ಪರಂಪರೆಗೆ ಸೇರಿದ ಶ್ರೇಷ್ಠ ಮಟ್ಟದ ಪಾಳೆಯಗಾರರಲ್ಲಿ ಆವತೀ ಪ್ರದೇಶದ ರಣಭೈರೇಗೌಡರ ವಂಶಸ್ಥರಾದ ಬೆಂಗಳೂರು ಕೆಂಪೇ ಗೌಡರು ಇಂದು ಕೇವಲ ಐತಿಹಾಸಿಕ ವ್ಯಕ್ತಿ ಮಾತ್ರವಾಗಿ ಉಳಿಯದೆ ಜಾನ ಪದ ಅದಕ್ಕೂ ಮಿಗಿಲಾಗಿ ಜನರ ಭಾವನಾತ್ಮಕ ಅಂಶಗಳ ನಾಯಕರಾಗಿ ದ್ದಾರೆ. ಇಂತಹ ಮಹಾಪುರಷರ ಸೊಸೆ ಮಹಾತ್ಯಾಗಿ ಲಕ್ಷ್ಮೀದೇವಿ.

ಕೋರಮಂಗಲದ ಸೊಣ್ಣೇಗೌಡರ ಮೊಮ್ಮಗಳು, ರಾಣಿ ಚೆನ್ನಾಂಬೆ, ಮತ್ತು ದೊರೆ ಕೆಂಪಭೂಪಾಲನ ನೆಚ್ಚಿನ ಸೊಸೆ ಹಾಗೂ ಚಿಕ್ಕಪ್ಪ ವೀರಣ್ಣ ಗೌಡರ ಅಚ್ಚುಮೆಚ್ಚಿನ ಕುವರಿ.

ಕೆಂಪೇಗೌಡರು ಬೆಂಗಳೂರು ನಿರ್ಮಾಣದ ಕಾಲದಲ್ಲಿ ಅದಕ್ಕೆ ರಕ್ಷಣಾ ತ್ಮಕ ಕೋಟೆ ಒಂದಿರಬೇಕು ಎಂದು ನಿರ್ಧಸಿದನಷ್ಟೆ. ಆದರೆ ಕೋಟೆಯ ದಕ್ಷಿಣದ ಬಾಗಿಲು ಎಷ್ಟುಸಾರಿ ಜೋಡಿಸಿದರೂ ನಿಲ್ಲದಿದ್ದಕ್ಕೆ ಅಂದಿನ ಸಾಮಾಜಿಕ ರೂಢಿಯಂತೆ ಜನ ಇದಕ್ಕೆ ನರಬಲಿ ಬೇಕೆಂದರು. ಕೆಂಪೇಗೌಡ ಇಂಥ ಸಲಹೆಗಳನ್ನು ಅವೈಚಾರಿಕವಾದವುಗಳೆಂದು ಮೌಢ್ಯದಿಂದ ಕೂಡಿದ ವೆಂದು ಹೀಗೆಳೆದರೂ, ಆತನ ಸೊಸೆ ಗರ್ಭಿಣೀ ಲಕ್ಷ್ಮಿದೇವಿ, ಪರಿಸ್ಥಿತಿಯನ್ನು ಅರಿತವಳಾಗಿ ತ್ಯಾಗ ಮನೋಭಾವದಿಂದ ದೈವಪ್ರೇರಣೆಯಿಂಬಂತೆ ಯಾರಿಗೂ ಹೇಳದೆ ಸ್ವಯಂಇಚ್ಛೆಯಿಂದ ಚೂರಿಯಲ್ಲಿ ಇರಿದುಕೊಂಡು ಕೋಟೆಯ ಬಾಗಿಲಿನ ಹತ್ತಿರ ಬಲಿಯಾದಳು.

ಕೋಟೆಯ ಬಾಗಿಲು ಕಾಕತಾಳಿಯವೆಂಬಂತೆ ನೆಲೆ ನಿಂತಿತು. ಲಕ್ಷ್ಮೀ ದೇವಿಯ ತ್ಯಾಗ ಅಮರವಾಯಿತು. ಇಂಥ ಪ್ರಸಂಗಗಳು ಕರ್ನಾಟಕ ಇತಿ ಹಾಸದ ಉದ್ದಅಗಲಕ್ಕೂ ಕಂಡುಬರುತ್ತವೆ. ವಿಷ್ಣುವರ್ಧನನ ರಕ್ಷಣಾ ಪಡೆಯ ಮುಂದಾಳು ಕುವರ ಲಕ್ಷ್ಮ ತನ್ನ ಸ್ವಾಮಿ ನಿಷ್ಠೆ ತೋರಿಸಿದ್ದೂ ಸಹಾ ಈ ರೀತಿಯಾಗಿ ತನ್ನನ್ನು ತಾನು ಸಮರ್ಪಿಸಿ ಕೊಳ್ಳುವುದರ ಮೂಲಕವೇ. ಅದಕ್ಕೂ ಹಿಂದೆ ತಲಕಾಡಿನ ಗಂಗರ ಕಾಲದಲ್ಲಿ 'ದಿವ್ಕ' ಎಂಬ ಒಂದು ಸಂಪ್ರದಾಯ ಆಚರಣೆಯಲ್ಲಿತ್ತು.

ರಾಜಾ ಅಥವ ರಾಷ್ಟ್ರ ಅಪಾಯ ಸ್ಥಿತಿಯಲ್ಲಿದ್ದಾಗ ನಿಷ್ಠಾವಂತ ಪ್ರಜೆ ಗಳು, ಪ್ರಾಣಾರ್ಪಣೆ ಮಾಡುವುದರ ಮೂಲಕ ಅಪಾಯ ಪರಿಹಾರವಾಗುವ ವಾಡಿಕೆ ಪ್ರಚಲಿತವಾಗಿತ್ತು. ಅದಕ್ಕೆ ಕರ್ನಾಟಕ ರಾಜ್ಯಾದ್ಯಂತ ಇಂಥಹದನ್ನು

ಹೇಳುವ ನೂರಾರು ವೀರಗಲ್ಲುಗಳೂ ಇಂದಿಗೂ ದೊರೆಯುತ್ತವೆ. ದೇಹ ದಂಡನೆಯಿಂದ ಮಾತ್ರ ಮೋಕ್ಷವೆಂಬ ಜೈನ ಸಿದ್ಧಾಂತದ ಪ್ರಾರಂಭಕಾಲದಲ್ಲಿ ಇಲ್ಲಿ ಪ್ರಭಾವ ಬೀರಿರಬೇಕು. ಆದರೆ 16-17ನೇ ಶತಮಾನಕ್ಕೆ ಇವೊಂದು ಸಂಪ್ರದಾಯಕ ಆಚರಣೆಯಾಗಿ ಸಾಕಷ್ಟು ಮೌಢ್ಯದಿಂದ ಕೂಡಿರುವುದಾಗಿ ಆಚರಣೆಗೆ ಯೋಗ್ಯವಲ್ಲವೆಂಬ ಅಂಶ ಜನಮನದಲ್ಲಿ ಮೂಡಿತು. ಆದ ಕ್ಕಾಗಿಯೇ ಪವಾಡ ಬೀರುವ 'ರಾಘವೇಂದ್ರರ', 'ಯಡಿಯೂರು ಸಿದ್ದಲಿಂಗ ಸ್ವಾಮಿಯವರ' ಕಥೆಗಳು ಆ ಕಾಲದಲ್ಲಿ ಜನಪ್ರಿಯವಾಗಿದ್ದವು.

ಸಣ್ಣ ಪ್ರಾಂತ್ಯದ ಒಡೆಯರಾಗಿದ್ದ ಈ ಪಾಳೆಯಗಾರರು ಎಂತಹ ಜನ ಹಿತ ಚಿಂತಕರಾಗಿದ್ದರೆಂಬ ಅಂಶವನ್ನು ಈ ಎಲ್ಲಾ ಆಚರಣೆಗಳ ಹಿಂದಿರುವ ಪ್ರಮುಖ ಅಂಶವೆಂಬುದೆನ್ನು ಗಮನಿಸುವುದು ಇಲ್ಲಿ ಮುಖ್ಯ. ಕೆಂಪೇಗೌಡನ ರಾಜ್ಯನಿರ್ಮಾಣ, ಅವನ ಸೊಸೆಯ ಬಲಿದಾನ, ಊರಿನವರ ಹತ್ತು ಹಲವು ವಿಧದ ಸಹಾಯ ಸಹಾನುಭೂತಿಗಳು ಆಧುನಿಕ ಕಾಲಕೂ ಮಾರ್ಗದರ್ಶನ ವಾಗಬೇಕಾದ ವಿಚಾರಗಳು.

ಕಾಲಗರ್ಭದಲ್ಲಿ ಹುದುಗಿಹೋಗಿದ್ದ ಮಹಾತ್ಯಾಗಿ ಲಕ್ಷ್ಮಿದೇವಿಯ ನೆನಪನ್ನು ಹೊರತೆಗೆದು ಅಚ್ಚುಕಟ್ಟಾಗಿ ನಮ್ಮ ಮುಂದಿರಿಸಲು ಅನುವಾದ ವರು ಶ್ರೀ ಬಿ. ವಿ. ಲಕ್ಷ್ಮಣ್ ಅವರು. ಶ್ರೀ ಬಿ. ವಿ. ಲಕ್ಷ್ಮಣ್‌ರವರು ಮಾಡುತ್ತಿರುವ ಕೆಲಸಗಳು ಹಾಗೂ ಈ ವಿಚಾರದಲ್ಲಿನ ಅವರ ಆಸಕ್ತಿಯನ್ನು ಗಮನಿಸಿದರೆ ಆಶ್ಚರ್ಯವಾಗುತ್ತವೆ. ಶುದ್ಧ ಖಾದಿಧಾರಿ, ಅಷ್ಟೇನು ವಿದ್ಯಾ ವಂತರಲ್ಲದ ಶ್ರೀ ಬಿ. ವಿ. ಲಕ್ಷ್ಮಣ್ ಗಂಭೀರವಾಗಿ ಕೆಲಸಮಾಡುವ ಅಪ ರೂಪದ ವ್ಯಕ್ತಿ.

ಅವರು ಶ್ರೀ ಎಸ್. ಕೆ. ಕರೀಂಖಾನ್‌ರವರಿಂದ ಬರೆಸಿದ ಮಹಾಪ್ರಭು ಮಾಗಡಿ ಕೆಂಪೇಗೌಡ, ಬೆಂಗಳೂರು ನಿರ್ಮಾಪಕ ಕೆಂಪೇಗೌಡ, ಲೇಖಕಿಯ ರಾದ ಶ್ರೀಮತಿ ಎಸ್. ಎ. ಮಂಜುಳಾರವರ ಉತ್ತರಿ ದುರ್ಗ, ಲೇಖಕ ಶ್ರೀ ಎನ್. ನಂದಿ ವೆಂಕಟೇಶ್ ಮೂರ್ತಿರವರಿಂದ ಒಕ್ಕಲಿಗರ ಇತಿಹಾಸ ಪರಂಪರೆ, ಆವತಿನಾಡಪ್ರಭು ರಣಭೈರೇಗೌಡ ಮತ್ತು ಮಹಾತ್ಯಾಗಿ ಲಕ್ಷ್ಮಿದೇವಿ ಎಂಬ ಲೇಖನಗಳನ್ನು ಬಹಳ ಶ್ರಮಪಟ್ಟು ರಚಿಸಿರುತ್ತಾರೆ. ಅವರು ರಚಿಸಿದ ಲೇಖನಗಳನ್ನು ಶ್ರೀ ಎನ್. ವೆಂಕಟಸ್ವಾಮಿಯವರು ಪರಿಷ್ಕರಿಸಿದ್ದಾರೆ. ಶ್ರೀ

ಬಿ. ವಿ. ಲಕ್ಷ್ಮಣ್‌ರವರು ಬರೆಸಿದ 'ಕೆಂಪೇಗೌಡ', 'ಉತ್ತರೀ ದುರ್ಗ' ಮೊದಲಾದ ನಾಟಕಗಳು ಅವರ ಸೃಜನಶೀಲ ಶಕ್ತಿಗೆ ಸಾಕ್ಷಿಗಳಾಗಿ ನಿಂತಿವೆ. ನೂರಾರು ಐತಿಹಾಸಿಕ ಕಥೆಗಳನ್ನು ಹೇಳುವಂತಹ ವೈವಿಧ್ಯಮಯವಾದ ದಾಖಲೆಗಳನ್ನು ಸಂಗ್ರಹಿಸಿರುವ ಅವರು ಕೇಳುವವರಲ್ಲಿ ಅಚ್ಚರಿ ಮೂಡಿಸುತ್ತಾರೆ. ಅವರಲ್ಲಿರುವ ಅಂಕೆಗೆ ನಿಲುಕದ ಉತ್ಸಾಹ, ಪರಿಮಿತ ವಿಚಾರಶಕ್ತಿ, ಇತರ ವಿಷಯಗಳನ್ನು ಜೀರ್ಣಿಸಿಕೊಂಡು ತುಲನೆ ಮಾಡುವ ಮೇಧಾಶಕ್ತಿ ಮೆಚ್ಚುವಂತಾದ್ದು.

ಕನ್ನಡಿಗರ ನಿರಭಿಮಾನತೆಯನ್ನು ತೊಡೆದುಹಾಕಿ, ಅವರಲ್ಲಿ ಕೆಚ್ಚು, ಆಸಕ್ತಿ ಹಾಗೂ ಸ್ವಾಭಿಮಾನ ಬೆಳೆಸುವಲ್ಲಿ ಶ್ರೀ ಲಕ್ಷ್ಮಣ್‌ರವರು ತಮ್ಮ ಕಾಯಕದ ಮೂಲಕ ಉಪಯುಕ್ತರಾಗುತ್ತಾರೆಂದು ನಿಸ್ಸಂಕೋಚವಾಗಿ ಹೇಳಬಹುದು. ಅದರಲ್ಲಿರುವ ಸಂಗ್ರಹ ಐತಿಹಾಸಿಕ ಕಾದಂಬರಿಗಳು ಆಧಾರವಾಗಬಲ್ಲದು.

ಶ್ರೀ ಲಕ್ಷ್ಮಣ್‌ರವರು ಒಂದು ಬಂಗಾರದ ಗಣಿಯಿದ್ದ ಹಾಗೆ ಇಚ್ಛೆಯುಳ್ಳವರು, ಸಾಮರ್ಥ್ಯವುಳ್ಳವರು, ಗಣಿಯಿಂದ ಬಂಗಾರ ತೆಗೆದು ತಮಗೆ ಬೇಕಾದ ನವೀನ ಆಭರಣಗಳನ್ನು ಮಾಡಿಸಿಕೊಳ್ಳಬಹುದು. ಆದ್ದರಿಂದ ಸಮೃದ್ಧಗಣಿಗೆ ನಷ್ಟವಿಲ್ಲ, ಅದಕ್ಕೆ ನಾನು ಬೇರೆಯವರ ಉಪಯೋಗಕ್ಕೆ ಆದನೆಂಬ ಸಂತೃಪ್ತಿ ಲಭಿಸುತ್ತದೆ. ಆದರೆ ಬಂಗಾರ ಕೊಳ್ಳುವವರು ಎಲ್ಲಾ ಕಾಲಕ್ಕೂ ಅಭಾವ ತಾನೇ ?

ಶ್ರೀ ನಂದಿ ವೆಂಕಟೇಶ ಮೂರ್ತಿಯವರು ಇನ್ನೂ ಹೆಚ್ಚಿನ ರೀತಿಯಲ್ಲಿ ಐತಿಹಾಸಿಕ ಕಾದಂಬರಿಗಳು ಮತ್ತು ನಾಟಕಗಳನ್ನು ಬರೆದು ಜನತೆಗೆ ಅರ್ಪಿಸಲೆಂದು ಆಶಿಸುತ್ತೇನೆ.

ಹೆಚ್. ಆರ್. ದಾಸೇಗೌಡ
ನಿರ್ದೇಶಕರು
ಕಾಲೇಜು ಅಭಿವೃದ್ಧಿ ಸಮಿತಿ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು

ಅರ್ಪಣೆ

ನನ್ನ ತಾಯಿ ದಿ॥ ತಿಮ್ಮಕ್ಕನವರಿಗೆ

ಮಹಾತ್ಯಾಗಿ ಲಕ್ಷ್ಮೀದೇವಿ

ಕೋರಮಂಗಲದ ಸೊಣ್ಣೇಗೌಡರ ಮನೆ

ಶಿವರಾತ್ರಿ ಹಬ್ಬದ ದಿನ, ಶಿವಭಕ್ತರೆಲ್ಲ ಶಿವನನ್ನು ಭಕ್ತಿಯಿಂದ ಭಜಿಸಿ, ಪೂಜಿಸಿ, ಜಾಗರಣೆ ಮಾಡಿ ಶಿವಾನುಗ್ರಹ ಪಡೆಯುವ ಪವಿತ್ರದಿನ, ಅಂದು ಕೋರಮಂಗಲದಲ್ಲಿ ಸಡಗರವೋ ಸಡಗರ, ಮನೆಗಳಿಗೆ ಸುಣ್ಣ ಬಣ್ಣಗಳನ್ನು ಬಳಿದು, ತಳಿರು–ತೋರಣಗಳನ್ನು ಕಟ್ಟಿ ಅಲಂಕರಿಸಿದ್ದಾರೆ. ಭಕ್ತರು ತಮಗೆ ಇಷ್ಟವಾದ ಶಿವದೇವಾಲಯಗಳಿಗೆ ಹೋಗಿ, ಸೋಮೇಶ್ವರ, ಭೈರವೇಶ್ವರ, ಗಂಗಾಧರೇಶ್ವರ ಇತ್ಯಾದಿ ದೇವರುಗಳಿಗೆ ಪೂಜೆಯನ್ನು ಸಲ್ಲಿಸುತ್ತಿದ್ದಾರೆ. ಬೀದಿಗಳಲ್ಲಿ ಸುಮಂಗಲೆಯರು ಪೂಜಾ ಮಂಗಳ ದ್ರವ್ಯಗಳಿಂದ ಕೂಡಿದ ತಟ್ಟೆಗಳನ್ನು ಹಿಡಿದು ಚಲಿಸುತ್ತಿದ್ದಾರೆ. ಇವರನ್ನು ನೋಡುತ್ತಾ ಕುಳಿತಿದ್ದ ಊರಿನ ಹಿರಿಯರಾದ ಸೊಣ್ಣೇಗೌಡರು ಆಳು ನಂಜಪ್ಪನನ್ನು ಕರೆದು ಎತ್ತಿನ ಗಾಡಿಯನ್ನು ಸಿದ್ಧಗೊಳಿಸಲು ಆಜ್ಞೆ ಮಾಡಿದರು. ಗಾಡಿ ಸಿದ್ಧವಾಗುವುದರೊಳಗೆ ಸೊಣ್ಣೇಗೌಡರ ಸೊಸೆ ಪಾರ್ವತಮ್ಮ, ಮೊಮ್ಮಗಳಾದ ಲಕ್ಷ್ಮಿ-ಇವರು ಪೀತಾಂಬರಗಳನ್ನುಟ್ಟು ಸರಸ್ವತಿ-ಲಕ್ಷ್ಮಿಯರಂತೆ ಬಂದು ಹಿರಿಯರ ಬಳಿ ನಿಂತರು. ಗೌಡರ ಪ್ರೀತಿ-ವಾತ್ಸಲ್ಯಗಳು ಉಕ್ಕಿದವು. ಕು॥ ಲಕ್ಷ್ಮಿಯ ತಲೆಯನ್ನು ನೇವರಿಸುತ್ತಾ "ತಾಯಿ, ನೀನು ನನ್ನ ವಂಶದ ಆಶಾ ಜ್ಯೋತಿಯಮ್ಮ ; ಅಲಸೂರಿನ ಶ್ರೀ ಸೋಮೇಶ್ವರ ದೇವಾಲಯಕ್ಕೆ ಹೋಗಿ ಬಾ ಮಗು ; ಆ ದೇವನನ್ನು ಮನಸಾರ ಪೂಜಿಸಿ ಬಾರಮ್ಮ" ಎಂದು ಹರಸಿದರು. ಲಕ್ಷ್ಮಿಯು ಹುಟ್ಟಿದಂದಿನಿಂದಲೂ ತಾತನ ತೊಡೆಯ ಮೇಲೆ ಅಕ್ಕರೆ-ಪ್ರೀತಿಗಳಿಂದ ಬೆಳೆದವಳು. ಈಕೆ ಚಿಕ್ಕಂದಿನಿಂದಲೇ ರಾಮಾಯಣ, ಮಹಾಭಾರತ ಕತೆಗಳನ್ನೂ, ಅನಸೂಯ, ಸತಿ ಸಾವಿತ್ರಿ ಮುಂತಾದ ಪತಿವ್ರತೆಯರ ಕತೆಗಳನ್ನು, ತನ್ನ ಪೂರ್ವಿಕರಾದ ಗಂಗರ ವೀರ–ಸಾಹಸಗಳ ಇತಿಹಾಸ ಕತೆಗಳನ್ನು ಯಣಮಂಜಿಪುತ್ತೂರಿನಿಂದ ಬಂದು ಆವತಿಯಲ್ಲಿ ನೆಲಸಿ, ರಾಜ್ಯ ಸ್ಥಾಪನೆ ಮಾಡಿದ ರಣಭೈರೇಗೌಡ ಮತ್ತು ಅವರ ಸಂತತಿಯ

ದೊಡ್ಡಾಂಬೆ ಕೆಂಪಾಜೆಯವರ ಬಗ್ಗೆ ಭಕ್ತಿಯುತ ಕತೆಗಳನ್ನೂ ತನ್ನ ಅಜ್ಜರಿಂದ ಕೇಳುವ ಭಾಗ್ಯವನ್ನು ಪಡೆದಿದ್ದಳು.

ಸಿಂಗರಿಸಲ್ಪಟ್ಟ ರೂಪಾಯಿ ಬಣ್ಣದ ಹಳ್ಳಿಕಾರಿ ಹೋರಿಗಳು ಗಾಡಿಯನ್ನು ಎಳೆಯುತ್ತಾ ಅಲಸೂರಿನ ಕಡೆ ಗಂಭೀರವಾಗಿ ನಡೆಯುತ್ತಿವೆ. ಅವುಗಳ ಕೊಂಬುಗಳಿಗೆ ಜೋಡಿಸಿದ್ದ ಬೆಳ್ಳಿಯ ಆಭರಣಗಳು ಸೂರ್ಯನ ಝಳಕ್ಕೆ ಫಳ ಫಳ ಹೊಳೆಯುತ್ತಿವೆ. ಈ ಮುದ್ದಾದ ಜೋಡಿ ಹೋರಿಗಳಿಗೆ ರಾಮ-ಲಕ್ಷ್ಮಣ ಎಂಬ ಪ್ರೀತಿಯ ಹೆಸರುಗಳನ್ನು ಲಕ್ಷ್ಮಿ ಇಟ್ಟಿದ್ದಳು. ಈ ಹೋರಿಗಳ ತಾಯಿ ಕಪಿಲೆ. ಸೊಣ್ಣೇಗೌಡರ ಮನೆಯ ಕಾಮಧೇನು ಆಗಿದ್ದಳು. ಸ್ವಂತ ಮಕ್ಕಳನ್ನು ಸಾಕುವಂತೆ ಈ ರಾಮ-ಲಕ್ಷ್ಮಣರನ್ನು ಬಹು ಪ್ರೀತಿ ಅಕ್ಕರೆಗಳಿಂದ ಸಾಕಿದ್ದಳು ಲಕ್ಷಿ. ಆಕೆ ಎಲ್ಲಿಯೇ ಇರಲಿ ಅಲ್ಲಿಗೆ 'ಅಂಬಾ' ಎಂದು ಕೂಗುತ್ತಾ ಓಡಿ ಬಂದು ನಿಲ್ಲುತ್ತಿದ್ದವು. ಚೆನ್ನಾಗಿ ಬೆಳೆದ ಇವು ಗಾಡಿಯನ್ನು ಎಳೆಯುತ್ತಿದ್ದರೆ ಈಶ್ವರನ ವಾಹನವಾದ ಬಸವನಂತೆ ಕಾಣುತ್ತಿವೆ. ತಮ್ಮ ಪ್ರೀತಿಯ ಒಡತಿ ಕುಳಿತಿರುವ ಗಾಡಿಯನ್ನು ಎಳೆಯುವುದು ಒಂದು ಹೆಮ್ಮೆಯ ಹಾಗೂ ಸಂತಸದ ಸೇವೆ ಎಂದೆನಿಸಿದೆ ಆ ರಾಮ–ಲಕ್ಷ್ಮಣರಿಗೆ.

ತನ್ನ ರಾಮ ಲಕ್ಷ್ಮಣರು ಹೋಗುತ್ತಿರುವ ರೀತಿ ಲಕ್ಷ್ಮಿಗೆ, ಹಿಂದಿನ ವರ್ಷದಲ್ಲಿ ನಡೆದ ಒಂದು ಘಟನೆ ಜ್ಞಾಪಕಕ್ಕೆ ಬಂದು ತುಟಿಗಳ ಮೇಲೆ ನಗು ಲಾಸ್ಯವಾಡಿತು. ಯಲಹಂಕದ ಯುವರಾಜ ಕಿರಿಯ ಕೆಂಪೇಗೌಡರು ಆಶ್ವಾರೋಹಿಗಳಾಗಿ ಕಿರಿದಾದ ಹೊಲಗದ್ದೆಗಳ ದಾರಿಯಲ್ಲಿ ಬರುತ್ತಿದ್ದರು. ರಾಮ-ಲಕ್ಷ್ಮಣರು ಅಡ್ಡವಾಗಿ ನಿಂತವು. ಇದನ್ನು ಕಂಡ ಕುದುರೆ ಹಿಂದಕ್ಕೆ ಹೋಗಲು ಪ್ರಯತ್ನಿಸಿತು. ಯುವರಾಜ ಕಡಿವಾಣವನ್ನು ಎಳೆದು ಕುದುರೆ ಇದನ್ನು ಪಾಲಿಸಲಿಲ್ಲ. ಕುಪಿತನಾದ ಯುವರಾಜ ಕುದುರೆಯಿಂದ ಇಳಿದರು. ಕಲ್ಲೊಂದನ್ನು ಹೋರಿಗಳ ಕಡೆ ಬೀಸಿ ಪಕ್ಕಕ್ಕೆ ಹೋಗುವಂತೆ ಸಂಜ್ಞೆ ಮಾಡಿದರು. ಅಪರಿಚಿತರೊಬ್ಬರು ತಮ್ಮ ಕಡೆ ಕಲ್ಲನ್ನು ಬೀಸಿದ ತಕ್ಷಣವೇ ಹೋರಿಗಳ ಕಣ್ಣು ಕೆಂಪಾದವು ಕಾಲಿನಿಂದ ಮಣ್ಣನ್ನು ಕೆರೆದು ಹೂಂಕರಿಸಿದವು. ಯುವರಾಜನ ಮೇಲೆ ಆಕ್ರಮಣ ಮಾಡಲು ನುಗ್ಗಿದವು. ರಾಜಕುಮಾರ ತನಗರಿವಿಲ್ಲದಂತೆ ಒರೆಗೆ ಕೈ ಹಾಕಿ ಖಡ್ಗವನ್ನು ಹೊರಕ್ಕೆ ಎಳೆದ.

ಅಷ್ಟರಲ್ಲಿ ಹೆಣ್ಣಿನ ಮಧುರ ವಾಣಿಯೊಂದು "ರಾಮು, ಲಕ್ಷ್ಮಣ" ಎಂದು ಕರೆಯಿತು. ಗಾರುಡಿಯುವನ ಪುಂಗಿಯ ನಾದಕ್ಕೆ ತಲೆತೂಗುವ ನಾಗಸರ್ಪದಂತೆ, ಹೆಣ್ಣಿನ ಕರೆಗೆ ಓಗೊಟ್ಟ ಹೋರಿಗಳು ಧ್ವನಿ ಬಂದ ಕಡೆ ಓಡಿದವು. ಆಶ್ಚರ್ಯಚಕಿತನಾದ ಯುವರಾಜ ಮತ್ತೆ ಕುದರೆಯನ್ನೇರಿ ಮುಂದೆ ಪಯಣಿಸಿದ. ಮುಂದೆ ಸ್ವಲ್ಪ ದೂರದಲ್ಲಿ ರಾಜಕುಮಾರನು ಕಂಡ ದೃಶ್ಯ ಕನಸು ಕಂಡತ್ತಿತ್ತು.

ರಾಮು-ಲಕ್ಷ್ಮಣರಿಬ್ಬರು ಒಂದು ಅಪೂರ್ವ ಯುವ ಸುಂದರಿ ಮುಂದೆ ನಿಂತಿವೆ. ತಪ್ಪುಮಾಡಿದ ಮಕ್ಕಳಂತೆ ಹೋರಿಗಳೆರಡೂ ತಲೆತಗ್ಗಿಸಿವೆ. ಆ ಸುಂದರಿಯು ದುಂಡು ಮುಖದಿಂದ ಕೂಡಿ, ತುಟಿಗಳು ಕೆಂಪಗಿದ್ದು ಹಣೆಯಲ್ಲಿ ವಿಭೂತಿ-ಕುಂಕುಮಗಳು ಶೋಭಿಸುತ್ತ, ಹಣೆಯ ಮೇಲಿನ ಗುಂಗುರು ಮುಂಗುರಳು ಮಂದಮಾರುತಕ್ಕೆ ಆಕಡೆ-ಈಕಡೆ ಹಾರಾಡುತ್ತ, ಹೇಳಿ ಮಾಡಿಸಿದ ಮೈಮಾಟದಿಂದ, ಕಣ್ಣು ಕೋರೈಸುವ ಸೌಂದರ್ಯದಿಂದ, ಅಪೂರ್ವ ದಿವ್ಯ ಅಪ್ಸರೆಯಂತೆ ಕಾಣುತ್ತಿದ್ದಾಳೆ. ಆಕೆಯನ್ನು ಕಂಡಕೂಡಲೇ ಯುವರಾಜ ಆಕೆಯಲ್ಲಿ ಅನುರಕ್ತನಾದ. ಮನಸ್ಸು ಆಕೆಯೊಡನೆ ಮಾತನಾಡಲು ತವಕಿಸಿತು. "ಈ ಮುದ್ದು ಹೋರಿಗಳು ನಿಮ್ಮವೇ ? ನೀವು ಯಾರ ಮಗಳು ?" ಎಂಬುದಾಗಿ ವಿವಿಧ ಪ್ರಶ್ನೆಗಳನ್ನು ಕೇಳಿದ. ಲಕ್ಷ್ಮಿಯು ಯಾವ ಪ್ರಶ್ನೆಗೂ ಉತ್ತರ ನೀಡದೆ ಮೌನವಾಗಿ ಗಂಭೀರವಾಗಿ ನಿಂತಳು. ಯುವರಾಜ ಮತ್ತೆ ಮುಂದುವರಿದು ತಾನು ಯಲಹಂಕನಾಡ ಯುವರಾಜನೆಂದೂ, ಕೋರಮಂಗಲ ಸೊಣ್ಣೇಗೌಡರ ಮನೆಗೆ ಹೋಗಬೇಕಾಗಿದೆಯೆಂದೂ ಹೇಳಿದ. ಅಪರಿಚಿತ ವ್ಯಕ್ತಿ ಯಲಹಂಕದ ಯುವರಾಜ ಎಂದು ಅರಿತ ಲಕ್ಷ್ಮಿ ನಾಚಿದಳು ಆಕೆಯ ಮೈ ನವರೇರಿತು. "ನಾನವರ ಮೊಮ್ಮಗಳು. ಅಜ್ಜ ಮನೆಯಲ್ಲಿದ್ದಾರೆ. ತಾವು ದಯವಿಟ್ಟು ಬನ್ನಿ" ಎಂದು ಚಿಗರೆಯಂತೆ ಜಿಗಿದು ಮನೆಗೆ ಓಡಿದಳು.

ದೇವಾಲಯಕ್ಕೆ ಹೋಗುತ್ತಿದ್ದ ಲಕ್ಷ್ಮಿಗೆ ಈ ಘಟನೆ ನೆನಪಿಗೆ ಬಂದು ತನ್ನಷ್ಟಕ್ಕೆ ತಾನೇ ನಕ್ಕಳು. ಮಗಳ ಈ ವರ್ತನೆಯನ್ನು ಗಮನಿಸಿದ ಪಾರ್ವತಮ್ಮ "ಏನಾಯಿತು ಲಕ್ಷ್ಮಿ ? ಅಲಸೂರು ಬಂದೇಬಿಟ್ಟಿತು. ಅಲ್ಲಿ ನೋಡು ಶ್ರೀ ಸೋಮೇಶ್ವರ ದೇವಾಲಯ ಎಷ್ಟು ಸೊಗಸಾಗಿ ಕಾಣುತ್ತಿದೆ!"

ಎಂದಳು. ದೇವಾಲಯುವನ್ನು ಸಮೀಪಿಸಿದ ಕೂಡಲೇ ತಾಯಿ-ಮಗಳು ಇಬ್ಬರೂ ಗಾಡಿಯಿಂದ ಇಳಿದು, ಕೈಕಾಲು ತೊಳೆದುಕೊಂಡು, ಭಕ್ತಿಯಿಂದ ಗುಡಿಯೊಳಗೆ ಪ್ರವೇಶಿಸಿದರು.

ಸೋಮೇಶ್ವರ ದೇವಾಲಯವು ಇರುವ ಸ್ಥಳ, ಪ್ರಾಚೀನಕಾಲದಲ್ಲಿ ಮಾಂಡವೀ ಮಹರ್ಷಿಗಳು ತಪಸ್ಸು ಮಾಡಿದ ಸ್ಥಳ. ಮಹರ್ಷಿಗಳು ತಮ್ಮ ಸ್ವಹಸ್ತದಿಂದಲೇ ಸೋಮೇಶ್ವರ ದೇವರನ್ನು ಪ್ರತಿಷ್ಠಾಪಿಸಿದರೆಂದು ಪ್ರತೀತಿ ಇದೆ. ಭಕ್ತರಿಗೆ ಅದೊಂದು ಅತಿ ಪವಿತ್ರ ಸ್ಥಳ. ಪೂರ್ವದಿಂದಲೂ ರಾಜ ಮಹಾರಾಜರುಗಳು ತಮ್ಮ ಮುಕುಟಗಳನ್ನು ಶ್ರೀ ಸೋಮೇಶ್ವರ ಸ್ವಾಮಿಯ ಪದತಲದಲ್ಲಿ ಇಟ್ಟು ಅರ್ಪಿಸಿದ ಸ್ಥಳ. ಮಾಂಡವೀ ಮಹರ್ಷಿಗಳ ನಂತರ ಆ ಸ್ಥಳ ದಟ್ಟ ಮಹಾರಣ್ಯದಲ್ಲಿ ಅಡಗಿ ಹೋಗಿತ್ತು. ಅವರು ಪೂಜಿಸಿದ ಶಿವಲಿಂಗ ಭೂಗತವಾಗಿತ್ತು. ಆವತಿನಾಡ ಪ್ರಭು ಧರ್ಮ ಪ್ರವರ್ತಕ ರಣಭೈರೇಗೌಡರು ತಮ್ಮ ರಾಜಧಾನಿಯನ್ನು ಯಲಹಂಕಕ್ಕೆ ಬದಲಾಯಿಸಿದ ಮೇಲೆ, ಅವರ ಮಗ ಜಯಗೌಡರು ಒಂದು ದಿನ ಬೇಟೆಯಾಡುತ್ತ ಮಾಂಡವೀ ಮುನಿ ತಪವನ್ನಾ ಚರಿಸುತ್ತಿದ್ದ ಸ್ಥಳಕ್ಕೆ ಬಂದರು. ಆಗ ಮಟಮಟ ಮಧ್ಯಾಹ್ನ. ಬಿಸಿಲಿನ ತಾಪಕ್ಕೆ ಬಳಲಿದ ಗೌಡರು ಅಲ್ಲಿನ ಮರದ ಕೆಳಗೆ ವಿಶ್ರಾಂತಿ ಪಡೆದರು. ಆಯಾಸದಿಂದ ಕಣ್ಣು ಮುಚ್ಚಲು ನಿದ್ರೆಯ ಜೊಂಪು ಹತ್ತಿತು. “ಪ್ರಾಚೀನ ಕಾಲದ ಮುನಿಗಳೊಬ್ಬರು ಭವ್ಯ ಶಿವಲಿಂಗವನ್ನು ಪೂಜಿಸುತ್ತಿರುವಂತೆಯೂ. ಕಾಲಕ್ರಮದಲ್ಲಿ ಅದು ಗಿಡ-ಮರಗಳಿಂದ ಆವರಿಸಲ್ಪಟ್ಟ ಹಾಗೆ” ಕನಸನ್ನು ಕಂಡರು. ತಟ್ಟನೆ ನಿದ್ರೆಯಿಂದ ಎಚ್ಚೆತ್ತು ಆ ಸುತ್ತಲ ಸ್ಥಳವನ್ನು ಪರೀಕ್ಷಿಸಿದರು. ಹತ್ತಿರದಲ್ಲೇ ಗಿಡ-ಮರಗಳಿಂದ ಮರೆಯಾಗಿದ್ದ ದೊಡ್ಡ ಹುತ್ತವೊಂದು ಕಂಡಿತು. ಹುತ್ತದಲ್ಲಿ ಶಿವಲಿಂಗವೊಂದು ನಸು ನಗುತ್ತಿದ್ದಂತೆ ಭಾಸವಾಯಿತು. ಗೌಡರಿಗೆ ಮೈ ಪುಳಕಿತವಾಯಿತು. ಬೇಟೆಯಾಡಲು ಬಂದಿದ್ದ ಪರಿವಾರವನ್ನು ಕರೆದು, ಹುತ್ತವನ್ನು ಅಗೆಯಲು ಆಜ್ಞಾಪಿಸಿದರು. ಪರಿವಾರವು ಅಗೆದು ತೆಗೆಯುತ್ತಿದ್ದ ಹೆಂಟೆಗಳನ್ನು ಜಯಗೌಡರೇ ತಮ್ಮ ಕೈಯಿಂದ ತೆಗೆದುಕೊಂಡು ಪಕ್ಕಕ್ಕೆ ಎಸೆಯುತ್ತಿದ್ದರು. ಹುತ್ತವನ್ನು ತಮ್ಮ ದಣಿಗಳು ಏಕೆ ಅಗೆಯಿಸುತ್ತಿದ್ದಾರೆ ಎಂಬುದು ಪರಿವಾರಕ್ಕೆ ಒಂದು ಒಗಟೇ ಯಾಗಿತ್ತು. ಸಂಧ್ಯಾ ಸಮಯ. ಪಶ್ಚಿಮಾಂಬುಧಿಯಲ್ಲಿ ಮುಳುಗುತ್ತಿದ್ದ

ಅರುಣದೇವನು ತನ್ನ ಹೊಂಗಿರಣಗಳನ್ನು ಧರೆಯ ಮೇಲೆ ಚೆಲ್ಲಿದ್ದನು. ವಿವಿಧ ಪಕ್ಷಿಗಳು ಕಿಲಕಿಲನಾದ ಮಾಡುತ್ತ ತಮ್ಮ ಗೂಡುಗಳಿಗೆ ಹಿಂದಿರುಗುತ್ತಿದ್ದುವು. ಗೋಧೂಳಿ ಸಮಯಕ್ಕೆ ಸರಿಯಾಗಿ, ಹುತ್ತದ ಗರ್ಭದಲ್ಲಿ ಶಿವಲಿಂಗ ದರ್ಶನವಾಯಿತು. ಪರಿವಾರವೆಲ್ಲಾ" 'ಹರ, ಹರ' ಮಹಾದೇವ, ಎಂದು ಜಯಘೋಷ ಮಾಡಿತು.

ಜಯ ಗೌಡರು ಶಿವಲಿಂಗ ಮೂರ್ತಿಯ ಮುಂದೆ ನಿಂತು, ಪ್ರಣಾಮ ಮಾಡುತ್ತಾ, ಧ್ಯಾನಾಸಕ್ತನಾಗಿ "ಪ್ರಭು, ಸರ್ವೇಶ್ವರ, ಶ್ರೀ ಸೋಮೇಶ್ವರ, ಅನೇಕ ವರ್ಷಗಳಿಂದ ಭೂಗರ್ಭದಲ್ಲಿ ಮರೆಯಾಗಿದ್ದ ನೀನು ಇಂದು ದರ್ಶನ ನೀಡಿ ಕರುಣಿಸಿದೆಯಾ, ಹೇ ಸ್ವಾಮಿ" ಎಂದು ಸುತ್ತಿಸಿದನು. ಅನಂತರ ತನ್ನ ಪರಿವಾರವನ್ನೂ ಅಲ್ಲಿಯೇ ಕಾವಲಿರಿಸಿ, ಯಲಹಂಕಕ್ಕೆ ಹೋದರು. ಮಂತ್ರಿ, ಪುರೋಹಿತರು, ರಾಣಿ ವಾಸದವರನ್ನು ಕರೆಯಿಸಿ, ಈ ಅದ್ಭುತ ವಿಚಾರವನ್ನು ತಿಳಿಸಿದರು. ಒಂದು ಶುಭದಿನದಂದು ಕಾಡನ್ನು ಕಡಿಸಿ ಒಂದು ಮಂಟಪವನ್ನೂ ಕಟ್ಟಿಸಿದರು. ಅದರಲ್ಲಿ ಪ್ರತಿಷ್ಠೆ ಮಾಡುವ ಸಲುವಾಗಿ, ಶಿವಲಿಂಗವನ್ನು ಹುತ್ತದಿಂದ ಮೇಲಕ್ಕೆತ್ತಿದರು. ಶಿವನಡಿಯಲ್ಲಿ ನವರತ್ನಗಳ ಧನರಾಶಿಯಿತ್ತು. ಜತೆಯಲ್ಲಿ ತಾಮ್ರ ಶಾಸನವೊಂದು ಸಿಕ್ಕಿತು. ಅದರಲ್ಲಿ ಮಾಂಡವ್ಯಮುನಿಗಳು ತಪಗೈದ ವಿಚಾರವನ್ನೂ ಬರೆಸಲಾಗಿತ್ತು. ಆ ನಿಧಿಯ ಸಹಾಯದಿಂದ ಅಲ್ಲಿ ಒಂದು ಅಗ್ರಹಾರವನ್ನು ಕಟ್ಟಿಸಿದರು. ದ್ವಿಜರಿಗೆ ದಾನ-ಧರ್ಮಗಳನ್ನೂ ಮಾಡಿ, ಆ ಅಗ್ರಹಾರಕ್ಕೆ 'ಅಲಸೂರು' ಎಂಬ ನಾಮಕರಣ ಮಾಡಿದರು. ಶ್ರೀ ಸೋಮೇಶ್ವರ ಸ್ವಾಮಿಗೆ ನಿತ್ಯ ಪೂಜೆಗಳು ನಡೆಯಲು ತಕ್ಕ ಏರ್ಪಾಡನ್ನು ಮಾಡಿದರು. ಜಯಗೌಡರ ನಂತರ ಅವರ ಮಗ ಗಿಡ್ಡಪ್ಪಗೌಡರು, ಅವರ ಮಗ ಕೆಂಪನಜೇಗೌಡರು ಅವರ ಮಗ ಹಿರಿಯ ಕೆಂಪೇಗೌಡರು, ಈ ದೇವರ ಸೇವೆಯನ್ನು ಸತತವಾಗಿ ಸಲ್ಲಿಸುತ್ತಾ ಬಂದರು.

ಶಿವರಾತ್ರಿಯ ದಿನ ಲಕ್ಷ್ಮಿ ಸೋಮೇಶ್ವರ ದೇವಾಲಯಕ್ಕೆ ಬರುವ ಕಾಲಕ್ಕೆ ಅಲಸೂರು ಒಂದು ದೊಡ್ಡ ಗ್ರಾಮವಾಗಿ ವಿವಿಧ ಜನರ ಮನೆಗಳಿಂದ ಕೂಡಿ, ಅಗ್ರಹಾರದ ಗುರುಕುಲವಾಸದಲ್ಲಿ ಉಚಿತ ಊಟ, ವಿದ್ಯಾಭ್ಯಾಸಗಳ ಏರ್ಪಾಡು ನಡೆದು, ಅದು ಒಂದು ಯಾತ್ರಾಸ್ಥಳವಾಗಿತ್ತು. ತನ್ನ ಪ್ರೀತಿಯ

ಅಜ್ಜನಿಂದ ಸೋಮೇಶ್ವರ ದೇವಾಲಯದ ಅಚ್ಚರಿಯ ಕತೆಯನ್ನು ಕೇಳಿದ್ದ ಲಕ್ಷ್ಮಿ, ಮನಸ್ಸಿನಲ್ಲಿಯೇ ಜಯಗೌಡರಿಗೆ ವಂದಿಸುತ್ತ, ದೇವಾಲಯವನ್ನು ಪ್ರವೇಶಿಸಿದಳು. ಅಲ್ಲಿನ ಅರ್ಚಕರಿಗೆ ಸೊಣ್ಣೇಗೌಡರೆಂದರೆ ಗೌರವ ಮತ್ತು ಅಭಿಮಾನ. ಪಾರ್ವತಮ್ಮನವರನ್ನೂ ಕಂಡ ಕೂಡಲೇ, ನಸುನಗೆಯಿಂದ ಅವರನ್ನು ಸ್ವಾಗತಿಸಿ, ಅವರು ತಂದಿದ್ದ ಪೂಜಾ ಸಾಮಗ್ರಿಗಳನ್ನೂ ಪಡೆದು, ಅರ್ಚಕ ಗರ್ಭಗುಡಿಯನ್ನು ಹೊಕ್ಕರು. ದೇದೀಪ್ಯಮಾನವಾಗಿ ಕಾಣುತ್ತಿದ ಪರಮೇಶ್ವರನ ದರ್ಶನವಾಗುತ್ತಲೇ ಮಹಾ ಶಿವಭಕ್ತೆ ಲಕ್ಷ್ಮಿ ಆ ಮಹಾ ದೇವನನ್ನು ವಿವಿಧ ರೀತಿಯಲ್ಲಿ ಸ್ತುತಿಸಿದಳು. ಇದ್ದಕ್ಕಿದ್ದಂತೆ ಇಡೀ ದೇವಾ ಲಯದಲ್ಲಿ ದಿವ್ಯ ಶಾಂತ ವಾತಾವರಣ ಮೂಡಿತು. 'ಕೆಂಪಭೂಪಾಲರು ದಯಮಾಡಿಸುತ್ತಿದ್ದಾರೆ' ಎಲ್ಲರೂ ದಾರಿಬಿಡಿ, ಎಂದು ರಾಜಭಟರು ಘೋಷಿಸಲು ಭಕ್ತಾದಿಗಳು ಭಯ ಭಕ್ತಿಗಳಿಂದ ಕೈ ಮುಗಿದು, ದೇವಾ ಲಯದ ಒಳಗೆ ಪ್ರವೇಶಿಸುತ್ತಿದ್ದ ಪ್ರಭುಗಳಿಗೆ ನಮಸ್ಕರಿಸಿ, ಗುಡಿಯಿಂದ ಹೊರಬಂದರು. ರಾಣಿ ಪರಿವಾರದೊಂದಿಗೆ ಶ್ರೀ ಸೋಮೇಶ್ವರ ದರ್ಶನಕ್ಕೆ ಬಂದ ಗೌಡ ಪ್ರಭುಗಳನ್ನು ಕಂಡಕೂಡಲೇ ಪಾರ್ವತಮ್ಮನವರು ಗಾಬರಿಯಿಂದ ತನ್ನ ಸೀರೆಯ ಸೆರಗಿನಿಂದ ತಲೆಗೆ ಮುಸಕು ಹಾಕಿಕೊಂಡು "ಲಕ್ಷ್ಮೀ, ಲಕ್ಷ್ಮೀ, ಗೌಡ ಪ್ರಭುಗಳು ದಯಮಾಡಿಸುತ್ತಿದ್ದಾರೆ ! ಪಕ್ಕಕ್ಕೆ ಬಾ ಮಗು" ಎಂದಳು. ಶಿವಧ್ಯಾನದಲ್ಲಿದ್ದ ಲಕ್ಷ್ಮಿಗೆ ತಾಯಿಯ ಕರೆಯಾಗಲೀ ಯಲಹಂಕ ಪ್ರಭುಗಳು ಗುಡಿಗೆ ಬಂದಿರುವುದಾಗಲೀ ಗೊತ್ತಾಗಲೇ ಇಲ್ಲ. ತದೇಕ ಚಿತ್ತದಿಂದ ಶಿವ ಧ್ಯಾನದಲ್ಲಿ ತಲ್ಲೀನಳಾಗಿದ್ದಾಳೆ. "ಹೇ ಸರ್ವೇಶ್ವರ, ಸೃಷ್ಟಿ-ಸ್ಥಿತಿ-ಲಯಗಳ ಕರ್ತನೆ, ವಿಶ್ವರೂಪ, ವಿಶ್ವಾತ್ಮಕ, ವಿಶ್ವಂಬರನೇ ಮೂರು ಲೋಕ ಗಣಗಳ ಏಕಮಾತ್ರ ಆಶ್ರಯದಾತನೆ, ಶೂಲಪಾಣಿ, ಕರುಣಾಮಯ ಪಶುಪತಿ, ಸಕಲ ಜೀವಿಗಳ ಕರ್ಮ ವಿಮೋಚಕನೆ, ಕಾಶೀಪತಿ. ಮಹಾಪ್ರಭು ಇದೋ ನಿನಗೆ ನನ್ನ ಅನನ್ಯ ನಮಸ್ಕಾರ, ಯಲಹಂಕನಾಡ ಮಹಾ ಪ್ರಭುಗಳನ್ನೂ ಅವರ ಪ್ರಜಾಕೋಟಿಯನ್ನೂ ಸಲಹು ದೇವ" ಎಂದು ಸ್ತುತಿಸಿದಳು.

ಲಕ್ಷ್ಮಿ ಮಾಡುತ್ತಿದ್ದ ಶಿವ ಸ್ತೋತ್ರವನ್ನು ಕೇಳುತ್ತಿದ್ದ ಕೆಂಪ ಭೂಪಾಲರು ಬೆರಗಾಗಿ, ಅವರೂ ಭಕ್ತಿ ಪರವಶರಾದರು. ಭಕ್ತಿಯ

ಮಹಿಮೆಯನ್ನು ಏನನ್ನೋಣ! ಲಕ್ಷ್ಮಿಯನ್ನೆ ಎವೆಯಿಕ್ಕದೆ ದಿಟ್ಟಿಸಿ ನೋಡುತ್ತಾ ನಿಂತುಬಿಟ್ಟರು ಗೌಡರು. ಒಂದು ಕಡೆ ಅರ್ಚಕರಿಗೂ, ಪಾರ್ವತಮ್ಮನವರಿಗೆ ಭಯ ಮತ್ತು ಪ್ರಾಣ ಸಂಕಟ. ಶಿವನನ್ನು ಸ್ತುತಿಸಿ ಕಣ್ ತೆರೆದು ಕೈ ನೀಡಿದಳು ಪ್ರಸಾದಕ್ಕಾಗಿ ಲಕ್ಷ್ಮಿ. ಎದುರಿಗೆ ಕೆಂಪೇ ಗೌಡರು ಮತ್ತು ಅವರ ರಾಣಿವಾಸದವರನ್ನು ಕಂಡು ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ದೂರ ಸರಿದು ನಿಂತಳು ಆ ಸಾಧ್ವಿ. "ಅರ್ಚಕರೇ, ಯಾರೀ ಭಕ್ತೆ? ಎಂತಹ ಮಹಾ ಸಾಧ್ವೀಮಣಿ ಈಕೆ? ಇಂತಹ ಮಹಿಳಾ ರತ್ನ ಪ್ರಭಾವದಿಂದಲೇ ನನ್ನ ನಾಡು ಸುಭಿಕ್ಷ, ಶಾಂತಿ, ನೆಮ್ಮದಿಗಳಿಂದ ಇರು ವುದು" ಎಂದು ಕೆಂಪೇಗೌಡರು ನುಡಿದರು. ಅರ್ಚಕರು "ಪ್ರಭು, ಈಕೆ ಕೋರ ಮಂಗಲದ ಸೊಣ್ಣೇಗೌಡರ ಮೊಮ್ಮಗಳು. ಈಕೆಯ ಹೆಸರು ಲಕ್ಷ್ಮೀದೇವಿ ಆಕೆಯ ಪಕ್ಕದಲ್ಲಿರುವರೇ ಲಕ್ಷ್ಮಿಯ ತಾಯಿ ಪಾರ್ವತಮ್ಮನವರು." ಎಂದು ಹೇಳಿ ಅವರನ್ನು ಗೌಡರಿಗೆ ಪರಿಚಯಿಸಿದರು. "ಓ ನಮ್ಮ ಸೊಣ್ಣೇಗೌಡರ ಮೊಮ್ಮಗಳೆ ನೀನು, ಬಾ ತಾಯಿ, ಬಾ, ನೀನು ಹೊಸಬಳಲ್ಲ, ನಮ್ಮವಳೇ, ಚೆನ್ನಾಂಬೆ ನೋಡು ಈ ಲಕ್ಷ್ಮಿಯನ್ನು" ಎಂದು ಹೇಳಿ ಗೌಡರು ಲಕ್ಷ್ಮಿಯನ್ನು ಚೆನ್ನಾಂಬೆಗೆ ಪರಿಚಯ ಮಾಡಿಸಿದರು. ಶಿವ ಸಾನ್ನಿಧ್ಯದಲ್ಲಿ ಎಂತಹ ಅಪೂರ್ವ ಸಮಾಗಮ!

ಲಕ್ಷ್ಮಿಯ ಅಪಾರ ಅಂದ ಚಂದ ಆಕೆಯ ಅನನ್ಯ ಭಕ್ತಿ ಇವುಗಳನ್ನು ಕಂಡ ಚೆನ್ನಾಂಬೆ ಮೂಕಳಾಗಿ ನಿಂತಳು. ಲಕ್ಷ್ಮಿಯನ್ನು ಕೈ ಹಿಡಿದು ಕರೆದು ಪಕ್ಕದಲ್ಲಿ ನಿಲ್ಲಿಸಿಕೊಂಡಳು. ಅರ್ಚಕರು ಶ್ರೀ ಸೋಮೇಶ್ವರನಿಗೆ ಅಷ್ಟಾರ್ಚನೆ ಗಳನ್ನು ಮಾಡಿ, ತೀರ್ಥ-ಪ್ರಸಾದಗಳನ್ನು ಹಂಚಿದರು. ಅನಂತರ ಎಲ್ಲರೂ ದೇವಾಲಯದ ಆವರಣದಲ್ಲಿ ಕುಳಿತು ಲೋಕಾಭಿರಾಮವಾಗಿ ಮಾತನಾಡಿ ದರು. ಚೆನ್ನಾಂಬೆಯು ಪಾರ್ವತಮ್ಮನವರನ್ನು ಕುರಿತು "ಲಕ್ಷ್ಮಿಗೆ ಯಾರಾ ದರೂ ವರನನ್ನು ನೋಡಿರುವಿರಾ?" ಎಂದು ಪ್ರಶ್ನಿಸಿದಳು. ಪಾರ್ವತಮ್ಮ ನವರು ಉತ್ತರಿಸಲು ಮೊದಮೊದಲು ಭಯಗೊಂಡರೂ, ಧೈರ್ಯ ತಂದು ಕೊಂಡು. ನಗುತ್ತಾ "ಅವಳಿಗೆ ಮದುವೆ ಮಾಡುವ ಯೋಚನೆಯನ್ನು ಇನ್ನೂ ಮಾಡಿಲ್ಲ. ಅವಳಿಗೆ ತಕ್ಕ ವರನನ್ನು ಶ್ರೀ ಸೋಮೇಶ್ವರನೇ ಕರುಣಿಸಬೇಕೆಂದು, ಭಾರವನ್ನು ಆ ಮಹಾದೇವನ ಮೇಲೆ ಹಾಕಿದ್ದೇವೆ"

ಎಂದಳು. ಇದನ್ನು ಕೇಳುತ್ತಿದ್ದಂತೆ ರಾಣಿ ಚೆನ್ನಾಂಬೆಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಪಾರ್ವತಮ್ಮನನ್ನು ಕುರಿತು "ಲಕ್ಷ್ಮಿಗೆ ನಾವೇ ಗಂಡನ್ನು ನೋಡುತ್ತೇವೆ. ಆಕೆಯ ಮದುವೆ ವಿಚಾರವನ್ನು ನಮಗೆ ಬಿಡಿ" ಎಂದು ಚೆನ್ನಾಂಬೆ ಹೇಳಿದಳು. ಲಕ್ಷ್ಮಿಯನ್ನು ಹತ್ತಿರಕ್ಕೆ ಕರೆದು ಕಿವಿಯಲ್ಲಿ "ಹೌದಾ ಲಕ್ಷ್ಮಿ, ನಮ್ಮ ಯುವರಾಜರ ಮೇಲೆ ನೀನು ನಿನ್ನ ರಾಮ-ಲಕ್ಷ್ಮಣ ಹೋರಿಗಳನ್ನು ಯುದ್ಧಕ್ಕೆ ಬಿಟ್ಟಿದ್ದಿಯಂತೆ! ಇದು ನಿಜವೆ" ಎಂದು ಕೇಳಿ ದಳು. ಲಕ್ಷ್ಮಿಯು ನಾಚಿ, ತನ್ನ ಸೆರಗಿನಿಂದ ಮುಖವನ್ನು ಅವಿತಿಟ್ಟು ಕೊಂಡಳು. ಪಾರ್ವತಮ್ಮನವರು ಭಕ್ತಿ-ಗೌರವಗಳ ಪೂರ್ವಕವಾಗಿ ಗೌಡ ಪ್ರಭುಗಳನ್ನು ಅವರ ಪರಿವಾರವನ್ನು ಕೋರಮಂಗಲಕ್ಕೆ ಆಹ್ವಾನಿಸಿದರು. ಅದೇ ಸಮಯದಲ್ಲಿ ಆಳು ನಂಜಪ್ಪ ಗುರುಕುಲದಿಂದ ಜಯಗೌಡ, ಭದ್ರೇ ಗೌಡರನ್ನು ಅಲ್ಲಿಗೆ ಕರೆತಂದನು. ಮಕ್ಕಳು ದೊಡ್ಡಮ್ಮ ಮತ್ತು ಅಕ್ಕನನ್ನು ನೋಡುತ್ತಲೇ ಅಕ್ಕಾ, ಅಕ್ಕಾ, ಎಂದು ಲಕ್ಷ್ಮಿಯನ್ನು ತಬ್ಬಿಕೊಂಡವು. ಯಲಹಂಕ ಪ್ರಭುಗಳಿಗೆ ನಮಸ್ಕರಿಸುವಂತೆ ಪಾರ್ವತಮ್ಮ ಮಕ್ಕಳಿಗೆ ಹೇಳಿ ದಳು. ಮಕ್ಕಳು "ನಮ್ಮನ್ನಾಳುವ ಯಲಹಂಕ ಭೂಪಾಲರಿಗೆ ನಮಸ್ಕಾರ" ಎಂದು ಹೇಳಿ ತಲೆ ಬಾಗಿ ನಿಂತರು. ಭಯ, ಭಕ್ತಿ, ಗೌರವಗಳಿಂದ ವರ್ತಿಸಿದ ಮುದ್ದಾದ ಮಕ್ಕಳನ್ನು ನೋಡಿ ಅವರನ್ನು ಬಾಚಿ ತಬ್ಬಿಕೊಂಡರು ಕೆಂಪೇ ಗೌಡರು ಚಿಕ್ಕವನನ್ನು ನೋಡಿ "ನಿನ್ನ ಹೆಸರೇನು ಮಗು ? ಎಂದು ಕೇಳಿದರು. "ನನ್ನ ಹೆಸರು ಜಯಪ್ಪಗೌಡ" ಎಂದ ಚಿಕ್ಕವ. "ಬಲೇ, ಬಲೇ, ನನ್ನ ಮುತ್ತಜ್ಜನ ಹೆಸರನ್ನೇ ಇಟ್ಟಿದ್ದಾರೆ ನಿನಗೆ" ಎಂದ ಕೆಂಪೇಗೌಡರು ದೊಡ್ಡ ಹುಡುಗನ ಹೆಸರನ್ನು ಕೇಳಿದರು. ಅವ ತನ್ನ ಹೆಸರು ಭದ್ರೇಗೌಡ ಎಂದನು. ಆ ಮಕ್ಕಳಿಬ್ಬರೂ ಲಕ್ಷ್ಮಿಯ ಚಿಕ್ಕಪ್ಪ ವೀರಣ್ಣ ಗೌಡರ ಮಕ್ಕಳೆಂದೂ, ಅವರ ತಾಯಿ ಹೊಸಕೋಟೆಯ ರಣಭೈರೇಗೌಡರ ತಮ್ಮ ಮುತ್ತೇಗೌಡರ ಮನೆತನಕ್ಕೆ ಸೇರಿದವಳು ತವರು ಮನೆಗೆ ಹೆರಿಗೆಗೆ ಹೋಗಿ ತೀರಿ ಕೊಂಡಳೆಂದೂ ಪಾರ್ವತಮ್ಮನವರು ಸಂಕ್ಷಿಪ್ತವಾಗಿ ತಿಳಿಸಿದರು. ತಾಯಿ ಯಿಲ್ಲದ ಆ ಮುದ್ದಾದ ಮಕ್ಕಳನ್ನು ನೋಡಿದ ರಾಣಿ ಚೆನ್ನಮ್ಮ ಅವರನ್ನು ತನ್ನ ತೊಡೆಯ ಮೇಲೆ ಕೂರಿಸಿಕೊಂಡು, ದೇವರ ಪ್ರಸಾದವನ್ನು ಅವರಿಗೆ ತಿನ್ನಿಸಿದಳು. ತಮ್ಮ ಕೊರಳಲ್ಲಿದ್ದ ಚಿನ್ನದ ಹಾರವನ್ನು ತೆಗೆದು ಲಕ್ಷ್ಮಿಯ

ಕೊರಳಿಗೆ ಹಾಕಿದರು. ಶ್ರೀಘ್ರವೇ ಕೋರಮಂಗಲಕ್ಕೆ ಬರುವೆವೆಂದು ತಿಳಿಸಿ, ರಾಜಪರಿವಾರ ಯಲಹಂಕಕ್ಕೆ ಹಿಂದಿರುಗಿತು.

ಈ ಅಪೂರ್ವ ಘಟನೆಯಿಂದ ಸಂತಸಗೊಂಡ ಪಾರ್ವತಮ್ಮನವರು, ಮಕ್ಕಳು ಮತ್ತು ಲಕ್ಷ್ಮಿಯೊಡನೆ ತಾವು ಬಂದ ಎತ್ತಿನ ಗಾಡಿಯಲ್ಲಿ ಮತ್ತೆ ಕೋರಮಂಗಲಕ್ಕೆ ಹೊರಟರು. ರಾಮ–ಲಕ್ಷ್ಮಣರಿಗೆ ಏನು ಅರ್ಥವಾಯಿತೋ ಗೊತ್ತಿಲ್ಲ. ಹುರುಪಿನಿಂದ ಗಾಡಿಯನ್ನು ಎಳೆಯುತ್ತ ಮೆಲುಕು ಹಾಕುತ್ತಾ ನಡೆದವು. ಸೂರ್ಯ ಪಡವಲ ದಿಕ್ಕಿನಲ್ಲಿ ಅಸ್ತಂಗತನಾಗುತ್ತಿದ್ದ, ದಾರಿಯ ಇಕ್ಕೆಡೆಗಳಲ್ಲೂ ಹುಲುಸಾಗಿ ಬೆಳೆದಿದ್ದ ಹರಳು, ಜೋಳದ ಬೆಳೆಗಳು ಗಾಳಿಗೆ ತಲೆ ತೂಗುತ್ತಾ ಎತ್ತಿನ ಗಾಡಿಯ ಧ್ವನಿಗೆ ತಮ್ಮ ಧ್ವನಿಯನ್ನೂ ಸೇರಿಸಿದ್ದವು. ರವಿಯ ವರ್ಣರಂಜಿತ ಕಿರಣಗಳು ಮೋಡಗಳನ್ನು ತೂರಿ ಕೊಂಡು ಬಂದು ಸಂತಸದ ಸಂಜೆಗೆ ಕಾರಣವಾಗಿದ್ದವು. ಹತ್ತಿರದ ಕೆರೆಯ ನೀರು ಝುಳು ಝುಳು ಶಬ್ದ ಮಾಡುತ್ತಾ ಕಾಲುವೆಗಳಲ್ಲಿ ಹರಿಯುತ್ತಿತ್ತು. ಮಿಂಚಿನ ಬೇಟೆಗೋಸ್ಕರ ಧಾವಿಸಿ ಹಾರಿ ಬರುತ್ತಿದ್ದ ಬೆಳ್ಳಿ ಹಕ್ಕಿಗಳು ಆಕಸ್ಮಿಕವಾಗಿ ಯಲಹಂಕ ಪ್ರಭುಗಳ ದರ್ಶನ ಪಡೆದು ಅವರ ಆದರ–ಸತ್ಕಾರ ಗಳಿಗೆ ಪಾತ್ರರಾಗಿದ್ದ ಪಾರ್ವತಮ್ಮನವರನ್ನು ಹರ್ಷಗೊಳಿಸಿದವು. ಲಕ್ಷ್ಮಿ ಮದುವೆಯ ಮಹತ್ತರ ಭಾರವನ್ನು ರಾಣಿ ಚೆನ್ನಾಂಬೆ ಹೊತ್ತಿದ್ದರು. ರಾಣಿ ಯವರು ಲಕ್ಷ್ಮಿಯನ್ನು ಯಾರಿಗೆ ಎಂತಹವರಿಗೆ ಕೊಡಿಸಿ ಮದುವೆ ಮಾಡಿಸ ಬಹುದು ? ಬಹುಶಃ ಯುವರಾಜ ಕೆಂಪೇಗೌಡರಿಗೆ ಮಾಡಿಕೊಳ್ಳ ಬಹುದೆ ? ಛೇ, ಛೇ, ನಾವೆಲ್ಲಿ ? ಅವರೆಲ್ಲಿ ? ಇದು ಆಗುವ ಮಾತಲ್ಲ ! ಎಂಬ ಯೋಚನೆ ಗಳು ಪಾರ್ವತಮ್ಮನ ತಲೆ ತುಂಬಿಕೊಂಡಿದ್ದವು. ವಿಜಯನಗರ ಸಾಮ್ರಾಟ ರಾದ ಶ್ರೀಕೃಷ್ಣದೇವರಾಯರಂತಹ ಮಹಾನ್ ವ್ಯಕ್ತಿಗಳ ನಿಕಟಸಂಪರ್ಕ ಹೊಂದಿದ್ದ ಯಲಹಂಕ ಭೂಪಾಲರು ತನ್ನ ಮಗಳನ್ನು ಸೊಸೆಯನ್ನಾಗಿ ಮಾಡಿಕೊಳ್ಳುವುದು ಆಕೆಗೆ ಅಸಂಭವವೆನಿಸಿತು. ಕಡೆಗೆ ಶ್ರೀ ಸೋಮೇಶ್ವರನ ಚಿತ್ತ ಇದ್ದಂತಾಗಲಿ ಎಂದು ತನ್ನ ಚಿತ್ತವನ್ನು ಸ್ಥಿರ ಪಡಿಸಿ ಕೊಂಡಳು. ಮನೆ ಹತ್ತಿರ ಬಂದಿದ್ದೆ ಗೊತ್ತಾಗಲಿಲ್ಲ. ಗಂಡ ಸಿದ್ದೇಗೌಡ" ಪಾರ್ವತಿ ಇದೇಕೆ ಇಷ್ಟು ತಡ ? ಅಪ್ಪಾಜಿಯವರು ನಿನ್ನೆಯಿಂದ ಉಪವಾಸ ವ್ರತವನ್ನು ಆಚರಿ ಸುತ್ತಿರುವುದನ್ನು ಮರೆತೆಯೇನು ?" ಎಂದಾಗ ಪಾರ್ವತಮ್ಮನಿಗೆ ಎಚ್ಚರ

ಪಾದಂತಾಯಿತು. ಎಲ್ಲರೂ ಲಗು ಬಗೆಯಿಂದ ಗಾಡಿಯಿಂದ ಇಳಿದರು. ಪಾರ್ವತಮ್ಮನವರು ತನ್ನ ಮಾವನವರಿಗೆ ತೀರ್ಥ ಪ್ರಸಾದಗಳನ್ನು ನೀಡಿದರು. ಗಂಡು ಮಕ್ಕಳಿಬ್ಬರೂ ಅಜ್ಜನ ಬಳಿಗೆ ಓಡಿ ದೇವಾಲಯದಲ್ಲಿ ನಡೆದ ವಿದ್ಯಮಾನಗಳನ್ನು ಹೇಳಿದರು. ಇದನ್ನು ಕೇಳಿದ ಸೊಣ್ಣೇಗೌಡರು "ಯಲಹಂಕ ಪ್ರಭುಗಳು ಲಕ್ಷ್ಮಿಯನ್ನು ಮೆಚ್ಚಿದ್ದರೆ ನಿಜವಾಗಿಯೂ ಅದು ಆಕೆಯ ಪೂಜಾ ಫಲ. ಲಕ್ಷ್ಮಿ ಯುವರಾಜಕುಮಾರಿಗಿಂತ ಯಾವುದರಲ್ಲೂ ಕಡಿಮೆಯಿಲ್ಲ. ಹೋಗಿ, ಎಲ್ಲ ಹಸಿದಿರುತ್ತಾರೆ. ಅವರಿಗೆ ಊಟದ ವ್ಯವಸ್ಥೆ ಮಾಡಿ" ಎಂದರು. ಮಕ್ಕಳಿಬ್ಬರೂ ತಾತನ ತೊಡೆಯ ಮೇಲೆ ಕುಳಿತು ಕತೆ ಹೇಳಬೇಕೆಂದು ಹಠ ಹಿಡಿದರು.

೨

ಶಿವರಾತ್ರಿ ವ್ರತವನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸುವ ಸಹೃದಯ ಭಕ್ತರಿಗೆ ಶಿವನು ಖಂಡಿತವಾಗಿಯೂ ಅನುಗ್ರಹಿಸುತ್ತಾನೆ. ಸೊಣ್ಣೇ ಗೌಡರು ಫಲಹಾರವನ್ನು ಮುಗಿಸಿ ಮನೆಯ ಅಂಗಳದಲ್ಲಿ ಹಗ್ಗದಿಂದ ಹೆಣೆದ ಮಂಚದ ಮೇಲೆ ಮಲಗಿದರು. ಅಸಂಖ್ಯಾತ ತಾರೆಗಳು ಆಗಸದಲ್ಲಿ ಮಿನುಗುತ್ತಾ ತನ್ನ ಬೆಳಕನ್ನು ಧರೆಯ ಮೇಲೆ ಚೆಲ್ಲಿದ್ದವು. ಮೇಯಲು ಹೋಗಿ ತಪ್ಪಿಸಿಕೊಂಡಿದ್ದ ದನ ಕರುಗಳು ದೂರದಲ್ಲಿ ಅಂಬಾ ಎಂದು ಕೂಗುತ್ತಾ ಬರುತ್ತಿದ್ದ ಶಬ್ದವು ಕೇಳಿ ಬರುತ್ತಿತ್ತು. ಅಂಗಳದಲ್ಲಿ ಸೊಸೆ ಮತ್ತು ಮಗಳು ಯಾವುದೋ ಒಂದು ಮನೆ ಗೆಲಸದಲ್ಲಿ ತೊಡಗಿದ್ದರು. ದೊಡ್ಡ ಮಗ ಸಿದ್ದೇಗೌಡರು ಪಕ್ಕದ ಹಳ್ಳಿಯ ಒಂದು ನ್ಯಾಯತೀರ್ಮಾನಕ್ಕೆ ಹೋಗಿದ್ದರು. ಚಿಕ್ಕ ಮಗ ವೀರಣ್ಣಗೌಡರು ಗರುಡಿಮನೆಯಲ್ಲಿ ಗ್ರಾಮದ ಕಟ್ಟಾಳುಗಳಿಗೆ ತರಬೇತಿ ಕೊಡಲು ಹೋಗಿದ್ದರು. ಆಳು ನಂಜಪ್ಪ ದನದ ಕೊಟ್ಟಿಗೆಯಲ್ಲಿ ದನಕರುಗಳ ಉಸ್ತುವಾರಿ ನಡೆಸಿದ್ದ, ದೂರದಲ್ಲಿ ಕುದುರೆ ಗೊರಸಿನ ಶಬ್ದ ಕೇಳಿ ಬರುತ್ತಿತ್ತು. ಅದು ಸೊಣ್ಣೇಗೌಡರ ಮನೆಯ ಕಡೆಗೆ ಬರುತ್ತಿತ್ತು.

ಗೊರಸಿನ ಶಬ್ದ ಕೇಳಿದ ಬೀದಿನಾಯಿ ಭೌ, ಭೌ ಎಂದು ಬಗುಳಿತು. ಯಾರು ಬರುತ್ತಿರಬಹುದು ಇಷ್ಟು ಹೊತ್ತಿನಲ್ಲಿ ? ಯಾರಾದರೂ ರಾಜ ಕಾರಣಿಗಳಿರಬಹುದೇ ? ಎಂದು ಅಜ್ಜ ಶಬ್ದ ಬರುವ ಕಡೆಗೆ ಕಿವಿಗೊಟ್ಟು ಕುಳಿತರು. ಸ್ವಲ್ಪ ಹೊತ್ತಿನಲ್ಲೇ ಕುದುರೆ ಸವಾರನೊಬ್ಬ ಕುದುರೆಯಿಂದ ಇಳಿದು ಸೊಣ್ಣೇಗೌಡರ ಮನೆ ಯಾವುದೆಂದು ಕೇಳಿದ. ತಾನೇ ಸೊಣ್ಣೇಗೌಡ ರೆಂದ, ತನ್ನಿಂದ ಏನಾಗಬೇಕೆಂದು ಅಜ್ಜ ಕೇಳಿದರು. ಸವಾರನು ಗೌರವ ದಿಂದ ತಲೆಬಾಗಿ ಅಜ್ಜನಿಗೆ ನಮಸ್ಕರಿಸಿ, ಒಂದು ಪತ್ರವನ್ನೂ ಕೈಗಿತ್ತನು. ನಂಜಪ್ಪನಿಗೆ ಲಾಂದ್ರವನ್ನು ತರಲು ಹೇಳಲು ಅವನು ತಕ್ಷಣ ತಂದು ದಣಿಯ ಮುಂದಿಟ್ಟ. ಪತ್ರವನ್ನು ಬಿಚ್ಚಿ ಓದಿದರು.

"ಯಲಹಂಕ ನಾಡಪ್ರಭುಗಳಾದ ಕೆಂಪೇಗೌಡರು ಕೋರಮಂಗಲ ನಿವಾಸಿಗಳಾದ ಹಿರಿಯ ಸೊಣ್ಣೇಗೌಡರಿಗೆ ವಿನಂತಿಸುವುದೇನಂದರೆ—

ಶ್ರೀ ಶ್ರೀ ಶ್ರೀ ಕೆಂಪಾಂಬದೇವಿಯ ಹಾಗೂ ಭೈರವೇಶ್ವರರ ಕೃಪಾನು ಗ್ರಹದಿಂದ, ತಮ್ಮಂತಹ ಹಿರಿಯರ ಆಶೀರ್ವಾದದಿಂದ, ನಾವುಗಳು ಕ್ಷೇಮ. ಬೆಂಗಳೂರು ನಗರ ನಿರ್ಮಾಣ ಕಾರ್ಯ ಗೌರವದಿಂದ ತಮ್ಮನ್ನು ಸ್ವತಃ ಬಂದು ಭೇಟಿಯಾಗಲು ಸಮಯವಿಲ್ಲ. ಇದೇ ಸಮಯದಲ್ಲೇ ನಮ್ಮ ಹಿರಿಯ ಕರಣೀಕರು ಸ್ವರ್ಗಸ್ಥರಾದರು. ನಮ್ಮ ನೆರವಿಗಾಗಿ ತಾವು ದಯ ವಿಟ್ಟು ನಿಮ್ಮ ಕಿರಿಯ ಮಗ ವೀರಣ್ಣಗೌಡರನ್ನು ತಪ್ಪದೇ ಈಗಲೇ ಕಳುಹಿಸ ಕೊಡಬೇಕೆಂದು ಕೋರುತ್ತೇನೆ.

ಇಂತೀ ನಿಮ್ಮವ,
ಕೆಂಪೇಗೌಡ
ಯಲಹಂಕ ಭೂಪಾಲ

ಪತ್ರವನ್ನು ಓದಿ ಮುಗಿಸುತ್ತಿದ್ದಂತೆ, ಆಳನ್ನು ಕರೆದು ವೀರಣ್ಣ ಗೌಡರನ್ನು ಕರೆದುಕೊಂಡು ಬರಲು ಹೇಳಿದರು. ಸವಾರನಿಗೆ ಊಟದ ವ್ಯವಸ್ಥೆ ನಡೆಯಿತು. ತಂದೆಯ ಕರೆಯನ್ನು ಕೇಳಿದ ಕೂಡಲೇ ವೀರಣ್ಣ ಗೌಡರು ಮನೆಗೆ ಬಂದರು. ವೀರಣ್ಣನವರು ಕಟ್ಟುಮಸ್ತಾದ ಆಳು. ಇವ ರಿಗೆ ಸೊಣ್ಣೇಗೌಡರು ಕುದುರೆ ಸವಾರಿ ಮತ್ತು ಮಲ್ಲಯುದ್ಧದಲ್ಲಿ ಒಳ್ಳೆ

ತರಬೇತಿ ಕೊಡಿಸಿದ್ದರು. ಸುತ್ತ ಮುತ್ತ ಗ್ರಾಮಸ್ಥರು ಇವರನ್ನು ಕಂಡರೆ ತಲೆಬಾಗಿ ನಮಸ್ಕರಿಸಿ ಗೌರವಿಸುತ್ತಿದ್ದರು. ಕಳ್ಳರು, ಪುಂಡರು, ಪೋಕರಿಗಳು ಇವರ ಹೆಸರನ್ನು ಕೇಳಿದರೆ ಸಾಕು ಥರ-ಥರ ನಡುಗುತ್ತಿದ್ದರು. ಹೊಸಕೋಟೆ ಮುತ್ತಣ್ಣನವರ ಮನೆಯಿಂದ ಇವರಿಗೆ ಹೆಣ್ಣನ್ನು ತಂದಿದ್ದರು. ಆಕೆ ಇಬ್ಬರು ಗಂಡು ಮಕ್ಕಳಿಗೆ ಜನ್ಮವನ್ನಿತ್ತು ಅಸುನೀಗಿದ್ದರು. ವೀರಣ್ಣ ಮತ್ತೆ ಮದುವೆಯಾಗಲಿಲ್ಲ. ಲಕ್ಷ್ಮಿಯನ್ನು ಮಮತೆಯಿಂದ ಸಾಕಿ, ಆಕೆಗೆ ಚಿಕ್ಕಪ್ಪ ಹಾಗೂ ಗುರುವೂ ಆಗಿದ್ದರು. ಸೊಣ್ಣೇಗೌಡರು ವೀರಣ್ಣನನ್ನು ಹತ್ತಿರಕರೆದು "ಕೆಂಪಭೂಪಾಲರಿಂದ ತುರ್ತುಕರೆ ಬಂದಿದೆ. ನೀನೀಗಲೆ ಹೊರಟು ಅವರನ್ನು ಕಾಣು. ನೀನು ಕಲಿತ ವಿದ್ಯೆಯನ್ನು ಅವರ ಮುಂದೆ ಪ್ರದರ್ಶಿಸುವ ಅವಕಾಶವನ್ನೂ ಉಪಯೋಗಿಸಿಕೋ" ಎಂದರು. ಹಿರಿಯರ ಮಾತಿಗೆ ಎದುರಾಡದ ವೀರಣ್ಣ ಅತ್ತಿಗೆ ಮತ್ತು ಲಕ್ಷ್ಮಿಯರ ಅನುಮತಿ ಪಡೆದು, ಹಿರಿಯರ ಪಾದಕ್ಕೆ ನಮಸ್ಕರಿಸಿ ಹೊರ ಹೊರಟರು. ತನ್ನ ಮೆಚ್ಚಿನ ಕುದುರೆಯನ್ನು 'ಭೈರವ, ಭೈರವ' ಎಂದು ಕರೆದರು. ದಣಿಯ ಧ್ವನಿಯನ್ನು ಕೇಳಿ ಕೆನೆಯುತ್ತಾ ಬಂದು ನಿಂತಿತು ಭೈರವ. ವೀರಣ್ಣನವರು ವಿಜಯನಗರಕ್ಕೆ ಹೋಗಿದ್ದಾಗ ಕೊಂಡು ತಂದ ಕುದುರೆ ಅದಾಗಿತ್ತು. ಅದನ್ನು ಅತಿ ಅಭಿಮಾನದಿಂದ ಭೈರವ ಎಂದು ಕರೆಯುತ್ತಿದ್ದರು. ಭೈರವನನ್ನೇರಿ, ಪತ್ರ ತಂದ ಸವಾರನೊಡನೆ ಯಲಹಂಕದ ಕಡೆ ಹೊರಟರು ವೀರಣ್ಣ.

ಯಲಹಂಕ ಭೂಪಾಲರು ವೀರಣ್ಣನ ಬಗ್ಗೆ ಸಾಕಷ್ಟು ಕೇಳಿ ವಿಚಾರವನ್ನು ತಿಳಿದುಕೊಂಡಿದ್ದರು. ಕರಣಿಕರ ನಿಧನದಿಂದಾಗಿ ಅವರಿಗೆ ಚಿಂತೆಯಾಗಿತ್ತು. ಆ ಪದವಿಯನ್ನೂ ಯಾರಿಗೆ ಕೊಡಬೇಕೆಂಬ ಯೋಚನೆ ಅವರ ತಲೆಯನ್ನು ತಿನ್ನುತ್ತಿತ್ತು. ಕಡೆಗೆ ಅದನ್ನು ಒಳ್ಳೇ ಹೆಸರನ್ನೂ ಗಳಿಸಿದ್ದ ಕೋರಮಂಗಲದ ವೀರಣ್ಣರವರಿಗೆ ಕೊಡಬೇಕೆಂದು ನಿರ್ಧರಿಸಿದ್ದರು. ಅಲ್ಲದೆ ಶಿವರಾತ್ರಿಯಂದು ಶ್ರೀ ಸೋಮೇಶ್ವರ ಸಾನ್ನಿಧ್ಯದಲ್ಲಿ ನೋಡಿದ್ದ ಲಕ್ಷ್ಮಿಯನ್ನು ತನ್ನ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂಬ ತೀರ್ಮಾನಕ್ಕೂ ಬಂದಿದ್ದರು. ಇದೇ ಸಮಯದಲ್ಲೇ ಸಿರಾ, ಕುಣಿಗಲ್, ಹೊಳವನಹಳ್ಳಿ, ಸೋಲೂರಿನ ಪಾಳೆಯಗಾರರು ಯಲಹಂಕನಾಡಿನ ಮೇಲೆ ಧಾಳಿ ನಡೆಸಲು ಹವಣಿಸುತ್ತಿದ್ದರು, ಎಲ್ಲಕ್ಕಿಂತ ಹೆಚ್ಚು ದುಃಖಕರವಾದುದೆಂದರೆ ಕನ್ನಡ ಸಾಮ್ರಾಜ್ಯದ ರಮಾ

ರಮಣರಾಗಿದ್ದ ಶ್ರೀಕೃಷ್ಣ ದೇವರಾಯನು ಅಕಾಲ ಮರಣಕ್ಕೆ ತುತ್ತಾಗಿದ್ದನು ಅಲ್ಲಿನ ಸಿಂಹಾಸನಕ್ಕಾಗಿ ಯಾದವೀಕಲಹಗಳು ನಡೆಯುತ್ತಿದ್ದವು. ಬೆಂಗಳೂರು ನಿರ್ಮಾಣದ ಕೆಲಸ ಅರ್ಧಂಬರ್ಧ ನಡೆದಿತ್ತು. ಖಜಾನೆಯ ಹಣ ಮುಗಿಯುತ್ತಾ ಬಂದಿತ್ತು. ಕೆಂಪೇಗೌಡರ ಯೋಜನೆಯಂತೆ ಭೈರವ ನಾಣ್ಯಗಳನ್ನು ಮುದ್ರಿಸಲು ಸಾಮ್ರಾಟರ ಅನುಮತಿ ಬೇಕಾಗಿತ್ತು. ಈ ಕಾರ್ಯಕ್ಕಾಗಿ ವೀರಣ್ಣನವರನ್ನು ಕಳುಹಿಸಬೇಕೆಂದು ನಿಶ್ಚಯಿಸಿದರು. ನಿದ್ರೆ ಬಾರದೆ ಶಥಪತ ತಿರುಗುತ್ತಿದ್ದ ಕೆಂಪೇಗೌಡರಿಗೆ ಅಶ್ವಗಳ ಖುರಪುಟ ಧ್ವನಿ ಕೇಳಿಸಿತು. ಹೊರಬಾಗಿಲಿಗೆ ಬಂದು ನೋಡಲು ವೀರಣಗೌಡರು ಅಶ್ವದಿಂದ ಇಳಿದು ಪ್ರಭುಗಳಿಗೆ ನಮಸ್ಕರಿಸಿದರು. ವೀರಣ್ಣನ ವಿನಯ, ತೀಕ್ಷಣ ಬುದ್ಧಿ, ಹೇಳಿ ಮಾಡಿಸಿದಂತಹ ವೀರಮಾಟದ ದೇಹ ಇವುಗಳನ್ನು ನೋಡಿದ ಪ್ರಭುಗಳು ಆತನನ್ನು ತಬ್ಬಿಕೊಂಡು ತಮ್ಮ ಅಂತರಂಗದ ಕೊಠಡಿಗೆ ಕರೆದೊಯ್ದರು. "ನಾಳೆಯೇ ವಿಜಯನಗರಕ್ಕೆ ಹೊರಡಲು ಸಿದ್ಧನಾಗು, ವೀರಣ್ಣ. ನಾನು ಕೊಡುವ ಪತ್ರವನ್ನು ವಿಜಯನಗರ ಸಾಮ್ರಾಟರ ಸಮ್ಮುಖದಲ್ಲಿ ಸಮರ್ಪಿಸಿ, ಅವರ ಅನುಮತಿಯ ಪತ್ರವನ್ನು ತಪ್ಪದೆ ತರಬೇಕು. ಈ ಕಾರ್ಯಕ್ಕೆ ರಾಜಕೀಯ ಚತುರತೆ, ಧೈರ್ಯ-ಸಾಹಸ, ದಕ್ಷತಯುಳ್ಳ ವ್ಯಕ್ತಿಗಳಾದ ನೀವೇ ಅರ್ಹರು." ಎಂದು ಹೇಳಿ ಪ್ರಭುಗಳು ವಿಶ್ರಾಂತಿಗಾಗಿ ನಿರ್ಗಮಿಸಿದರು.

ಮಾರನೆಯ ದಿನ ಬೆಳಗಿನ ಜಾವದ ನಿತ್ಯ ಕರ್ಮಗಳಾದ ಮೇಲೆ, ವಿಜಯನಗರಕ್ಕೆ ಹೊರಡಲು ಸಿದ್ಧರಾಗಿ, ಪ್ರಭುಗಳ ದರ್ಶನಕ್ಕಾಗಿ ಕಾದು ನಿಂತರು ವೀರಣ್ಣ. ಸೇವಕಿಯೊಬ್ಬಳು ಬಂದು ಪ್ರಭುಗಳು ತಮ್ಮನ್ನು ಕರೆಯುತ್ತಾರೆಂದು ತಿಳಿಸಿದಳು. ಸೇವಕಿಯನ್ನು ಹಿಂಬಾಲಿಸಿ ವೀರಣ್ಣ. ಪ್ರಭುಗಳ ನಿವಾಸದೊಳಕ್ಕೆ ಹೊಕ್ಕರು. ಗೌಡ ಪ್ರಭುಗಳು ಕೈಮುಗಿದು ಪೂಜಾ ಮಂದಿರದಲ್ಲಿ ಶ್ರೀಭೈರವೇಶ್ವರ ಮುಂದೆ ಕುಳಿತು ಧ್ಯಾನಾಸಕ್ತರಾಗಿದ್ದರು. ವೀರಣ್ಣನನ್ನು ಕಂಡಕೂಡಲೆ, ದೇವರ ಮುಂದಿಟ್ಟಿದ್ದ ಒಂದು ಪವಿತ್ರ ಖಡ್ಗವನ್ನು ತಮ್ಮ ಎರಡು ಕೈಗಳಿಂದ ತೆಗೆದು ವೀರಣ್ಣನವರಿಗೆ ಕೊಡುತ್ತಾ "ವೀರಣ್ಣ, ಇದು ಭೈರವ ಖಡ್ಗ. ಇದರಿಂದಲೇ ನಮ್ಮ ವಂಶದ ಮೂಲ ಪುರುಷರಾದ ಶ್ರೀರಣಭೈರೇಗೌಡರ ತಮ್ಮಂದಿರಾದ

ವೀರಣ್ಣ ಗೌಡರು ಮಧುಗಿರಿ, ಮಿಡಿಗೇಶಿ, ಹೊಸಕೋಟೆ, ಕೋಲಾರ, ಮುಳುಬಾಗಿಲುಗಳ ಪಾಳೆಯಗಾರರ ಶಿರಗಳನ್ನು ತರಿದು ಗೌಡ ಸಾಮ್ರಾಟ ವನ್ನು ಸ್ಥಾಪಿಸಿದರು. ಈ ಖಡ್ಗವನ್ನು ಅಪಾರ ಭುಜಬಲವುಳ್ಳವರು ಮಾತ್ರ ಉಪಯೋಗಿಸಿ ಬಲ್ಲರು. ನೀವು ಅಂತಹ ವ್ಯಕ್ತಿಗಳಾಗಿರುವಿರಿ. ಇದನ್ನು ನಿಮ್ಮ ಕೈಗೆ ಕೊಡುತ್ತಿದ್ದೇನೆ." ಎಂದರು. ವೀರಣ್ಣನವರು ಖಡ್ಗ ವನ್ನು ಕೈಗೆ ತೆಗೆದು ಕೊಂಡು, ನಮಸ್ಕರಿಸಿ, ಮರೆತಿದ್ದ ತನ್ನ ಭೈರವ ಅಶ್ವವನ್ನು ಜ್ಞಾಪಿಸಿಕೊಂಡರು. ಭೈರವ ಇಡೀ ರಾತ್ರಿಯೆಲ್ಲಾ ತನ್ನ ಒಡೆಯ ನಿಗಾಗಿ ಬಾಗಿಲಲ್ಲೇ ಕಾದು ನಿಂತಿತ್ತು. ಭೈರವನನ್ನು ನೋಡುತ್ತಲೇ ವೀರಣ್ಣ ನಿಗೆ ದುಃಖ ಇಮ್ಮಡಿಸಿತು. "ಕ್ಷಮಿಸು, ಭೈರವ. ನಿನ್ನನ್ನು ಮರೆತೇ ಬಿಟ್ಟಿದ್ದೆ. ರಾತ್ರಿಯೆಲ್ಲಾ ಚಳಿಯಲ್ಲಿ ನಿಂತು ಬಿಟ್ಟೆಯಾ ?" ಎಂದು ಅದನ್ನು ತಬ್ಬಿ ಕೊಂಡು ನೇವರಿಸಿದರು. ಒಡೆಯರ ಸವಿನುಡಿಗಳನ್ನು ಕೇಳಿ ಭೈರವ ಸಂತೋಷದಿಂದ ಕೆನೆಯಿತು. ವೀರಣ್ಣ ಭೈರವ ಖಡ್ಗವನ್ನು ಕೈಲಿ ಹಿಡಿದು "ಜೈ ಭೈರವೇಶ್ವರ. ಜೈ ಕೆಂಪಾಭೆ," ಎಂದು ಹೇಳಿ ಅದನ್ನು ತನ್ನ ಒರೆಗೆ ಸೇರಿಸಿ, ಭೈರವನನ್ನೇರಿ ಶರವೇಗದಿಂದ, ವಿಜಯನಗರದ ಕಡೆ ಹೋಟರು. ಇದನ್ನು ನೋಡುತ್ತಿದ್ದ ಕೆಂಪ ಭೂಪಾಲರು ವೀರಣ್ಣನಲ್ಲಿದ್ದ ಸ್ವಾಮಿಭಕ್ತಿ, ದಕ್ಷತೆ, ದೇಶಪ್ರೇಮ, ಭುಜಬಲ ಪರಾಕ್ರಮ ಇವುಗಳನ್ನು ನೆನೆಸಿಕೊಂಡು ಅಭಿಮಾನ ಪಟ್ಟರು.

ಬೆಳಗಿನ ಜಾವದಿಂದಲೂ ಶರವೇಗದಿಂದ ಒಂದೇ ಸಮನೆ ಸಾಗಿದ್ದ ಭೈರವ ಆಯಾಸಗೊಂಡಿತ್ತು. ಬಿಸಿಲಿನ ತಾಪದಿಂದ ವೀರಣ್ಣನವರೂ ಬಳ ಲಿದ್ದರು. ದಾರಿಯಲ್ಲಿ ಒಂದು ದಟ್ಟ ಮರದಡಿಯ ನೆರಳಿನಲ್ಲಿ ಕುದುರೆ ಯನ್ನು ನಿಲ್ಲಿಸಿದರು. ಅದೇ ಸಮಯದಲ್ಲಿ ರೈತನೊಬ್ಬ ಹಚ್ಚ ಹಸಿರಾದ ಹುಲ್ಲಿನ ಹೊರೆಯನ್ನು ಹೊತ್ತು ಆ ದಾರಿಯಲ್ಲಿ ಬರುತ್ತಿದ್ದ. ವೀರಣ್ಣ ನವರು ಅವನನ್ನು ಕರೆದು ಕೈಯಲ್ಲಿ ಒಂದು ಚಿನ್ನದ ನಾಣ್ಯವನ್ನಿಟ್ಟು, ಆ ಹುಲ್ಲನ್ನು ಭೈರವನಿಗೆ ಮೇಯಲು ಹಾಕುವಂತೆ ತಿಳಿಸಿದರು. ತನ್ನ ಜೀವ ಮಾನದಲ್ಲೇ ಚಿನ್ನದ ನಾಣ್ಯವನ್ನು ಕಾಣದ ಆ ರೈತ ಕೃತಜ್ಞತೆಯಿಂದ ವೀರಣ್ಣ ನಿಗೆ ನಮಸ್ಕರಿಸಿ, ಹುಲ್ಲನ್ನು ಭೈರವನಿಗೆ ಹಾಕಿ," ಬುದ್ಧಿ, ತಾವಾರೋ ತಿಳಿ ಯದು. ತುಂಬಾ ದೊಡ್ಡವರಂತೆ ಕಾಣಿತ್ತೀರಿ. ಬಿಸಿಲಿನ ತಾಪಕ್ಕೆ ಬಹಳ

ಬಳಲಿರುವಿರಿ ಒಂದು ಕ್ಷಣ ಇರಿ" ಎಂದು ಹೇಳಿ. ಹತ್ತಿರದ ತೋಟಕ್ಕೆ ಓಡಿದನು. ಒಂದು ಚಿಪ್ಪು ರಸಬಾಳೆಹಣ್ಣು, ಒಂದು ಎಳನೀರನ್ನು ತಂದು ವೀರಣ್ಣನವರ ಮುಂದಿಟ್ಟನು. ರೈತ ಬಡವನಾದರೂ ಆತನ ಹೃದಯ ಶ್ರೀಮಂತಿಕೆ ಮತ್ತು ಸೌಜನ್ಯಕ್ಕೆ ಮನಸೋತ ವೀರಣ್ಣ ಆತನ ಹೆಸರೇನೆಂದು ಕೇಳಿದ. "ಬುದ್ಧಿ ನಾವು ಒಕ್ಕಲಿಗರು. ನಮ್ಮ ಕುಲದೇವತೆ ಕೆಂಪಾಂಬೆ. ಆ ಮಾತೆಯ ಹೆಸರನ್ನಿಟ್ಟು ನನ್ನನ್ನು ಕೆಂಪಾ ಎಂದು ಕರೆಯುತ್ತಾರೆ" ಎಂದು ಎಳನೀರನ್ನು ಒಡೆದು ಕತ್ತರಿಸಿ ಕುಡಿಯಲು ವೀರಣ್ಣನವರಿಗೆ ಕೊಟ್ಟನು. ಕೆಂಪಾಂಬೆಯ ಹೆಸರನ್ನು ಕೇಳುತ್ತಲೇ ವೀರಣ್ಣನ ಮೈ ಪುಳಕಗೊಂಡಿತು. ಭಕ್ತಿಪರವಶರಾದರು." ತಾಯಿ, ಕೆಂಪಾಂಬ ನೀನು ಈ ರೈತನ ರೂಪದಲ್ಲಿ ಬಂದು ದಣಿದಿದ್ದ ಭೈರವನಿಗೂ ಹಾಗೂ ನನಗೂ ಆಹಾರವನ್ನು ಈ ಅಪರಿಚಿತನನ್ನು ನಿರ್ಜನ ಪ್ರದೇಶದಲ್ಲಿ ಕರುಣಿಸಿದೆಯಾ, ದೇವಿ !" ಎಂದು ಮನದಲ್ಲಿಯೇ ಸ್ತುತಿಸಿ ಭಜಿಸಿದನು. ರೈತನಿಗೆ ಮತ್ತೆ ಕೆಲವು ಸುವರ್ಣ ನಾಣ್ಯಗಳನ್ನು ನೀಡಲು ಆತನು "ನನ್ನಪ್ಪ ಭೈರವೇಶ್ವರಸ್ವಾಮಿ ಸದಾ ನಿಮ್ಮನ್ನು ಕಾಪಾಡಲಿ ಬುದ್ಧಿ" ಎಂದು ಕೈ ಮುಗಿದು ಅಲ್ಲಿಂದ ಆತನು ನಿರ್ಗಮಿಸಿದನು. ಭೈರವನು ಹುಲ್ಲನ್ನು ಮೇದು, ತೇಗಿ, ತಾನು ಪ್ರಯಾಣಕ್ಕೆ ಸಿದ್ಧನೆಂದು ಕೆನೆಯಿತು. ಭೈರವನನ್ನು ಏರಿ ವೀರಣ್ಣ ಪಯಣ ಮುಂದುವರೆಸಿದ.

ಎರಡು ದಿನಗಳ ಅವಿಶ್ರಾಂತ ಪ್ರಯಾಣ ನಡೆದಿದೆ. ದಾರಿಯಲ್ಲಿ ಹಳ್ಳಿ ಗ್ರಾಮ, ಕಾನನಗಳನ್ನು ಹಾದು ಮುಂದೆ ಸಾಗಿದ್ದಾರೆ. ಇನ್ನೇನು ಮೂರನೇ ದಿನದ ರಾತ್ರಿ ಪ್ರಯಾಣವಾದರೆ ವಿಜಯನಗರವನ್ನು ತಲುಪಬಹುದು. ಭೈರವದಟ್ಟ, ಅರಣ್ಯದಲ್ಲಿ ಸಾಗುತ್ತಿದೆ. ಗಾಢಾಂಧಕಾರ, ದಾರಿ ಸರಿಯಾಗಿ ಕಾಣುತ್ತಿಲ್ಲ. ಮಳೆ ಬರುವ ಸೂಚನೆ ಕಂಡುಬರುತ್ತಿದೆ. ಆ ರಾತ್ರಿಯಲ್ಲಿ ಕಾಡಿನ ಪ್ರಯಾಣ ಕಷ್ಟವೆಂದು ಅರಿತ ವೀರಣ್ಣ ಕುದುರೆಯಿಂದ ಇಳಿದು ಯಾವುದಾದರೂ ಗುಹೆ ಅಥವಾ ಹೆಮ್ಮರದ ಆಶ್ರಯ ಹುಡುಕಲು ನಡೆದರು. ಕುದುರೆಗೆ ತನ್ನನ್ನು ಹಿಂಬಾಲಿಸುವಂತೆ ಸಂಜ್ಞೆ ನೀಡಿದ. ಮುಂದೆ ಒಂದು ಗುಹೆಯ ಬಾಗಿಲ ಬಳಿ ಹೋದರು. ಗುಡಿಯಲ್ಲಿ ಯಾವುದಾದರೂ ಕ್ರೂರ ಮೃಗಗಳು ಅಥವಾ ಕಳ್ಳರು ಅಡಗಿದ್ದರೆ ಅಪಾಯವೆಂದು ತಿಳಿದು, ಗುಹೆಯಿಂದ ಏನಾದರೂ ಶಬ್ದ ಬರಬಹುದೇ ಎಂದು ಎಚ್ಚರಿಕೆಯಿಂದ ಆಲಿಸ

ತೊಡಗಿದರು. ಗುಹೆಯ ಒಳಗಡೆಯಿಂದ ಮನುಷ್ಯರು ಮಾತನಾಡುವ ಸದ್ದು ಕೇಳಿಬರುತ್ತಿತ್ತು. ಅವರು ಯಾರಿರಬಹುದೆಂದು ತಿಳಿಯಲು ಜಾಗರೂಕತೆಯಿಂದ ಬೆಕ್ಕಿನ ಹೆಜ್ಜೆಹಾಕುತ್ತಾ ಮೈಯೆಲ್ಲಾ ಕಣ್ಣುಳ್ಳವರಾಗಿ, ಮೆಲ್ಲಗೆ ಗುಹೆಯೊಳಗೆ ಪ್ರವೇಶಿಸಿದ. ಗುಹೆಯ ಒಳಭಾಗವು ಪ್ರಾಚೀನ ಕಾಲದ ಆದಿವಾಸಿಗಳು ಕಲ್ಲನ್ನು ಕೊರೆದು ನಿರ್ಮಿಸಿದ ದೇವಾಲಯದಂತಿತ್ತು. ಒಳಗಡೆ ಹತ್ತು ಅಡಿ ಎತ್ತರದ ಉಗ್ರರೂಪದಿಂದ ಕೂಡಿದ ಕಾಳಿಕಾ ದೇವಿಯ ವಿಗ್ರಹ, ಅದರ ಕೊರಳಲ್ಲಿ ರುಂಡಗಳ ಮಾಲೆ, ನೋಡಲು ರುದ್ರಭೂಮಿಯ ವಾತಾವರಣದಂತಿತ್ತು. ದೇವಿಯ ಮುಂಭಾಗದಲ್ಲಿ ಬಂಧಿಸಿದ ಒಬ್ಬ ವ್ಯಕ್ತಿಯನ್ನು ನಿಲ್ಲಿಸಿದ್ದರು. ಎರಡೂ ಪಕ್ಕಗಳಲ್ಲಿ ಶಿಲಾಸನಗಳ ಮೇಲೆ ಮುಸ್ಲಿಂ ಅಧಿಕಾರಿಗಳು ಕುಳಿತಿದ್ದರು. ಬಂಧಿಸಲ್ಪಟ್ಟ ವ್ಯಕ್ತಿಯನ್ನು "ಹೇಳು, ನಿಜ ಹೇಳು, ಆ ರಹಸ್ಯ ಪತ್ರಗಳು ಎಲ್ಲಿವೆ ? ನಿಜಹೇಳಿದರೆ ನಮ್ಮ ನವಾಬರು ನಿನಗೆ ಜಹಗೀರ್‌ಗಳನ್ನು ಮಂಜೂರ್ ಮಾಡುತ್ತಾರೆ. ಬೇಕಾದರೆ ನಿನ್ನನ್ನು ಒಂದು ಸಂಸ್ಥಾನಕ್ಕೆ ಮಾಂಡಲಿಕನನ್ನಾಗಿ ಮಾಡುತ್ತಾರೆ. ನೀನು ಒಂದು ವೇಳೆ ನಿಜವನ್ನು ಹೇಳದಿದ್ದರೆ ನಿನ್ನ ರುಂಡವು ನಿನ್ನ ಮುಂಡದಿಂದ ಬೇರ್ಪಡುತ್ತದೆ, ಹುಷಾರ್" ಎಂದು ಹೆದರಿಸಿ ಹಂಗಿಸುತ್ತಿದ್ದರು. ಬಂಧನದಲ್ಲಿದ್ದ ವ್ಯಕ್ತಿ ಕೋಪದಿಂದ "ನಿಮ್ಮಂತಹ ಭ್ರಷ್ಟ ಅಧಿಕಾರಿಗಳ ಮೋಸ, ವಂಚನೆಗಳಿಂದ ನಮ್ಮ ಪವಿತ್ರ ಭರತ ಖಂಡವು ಈ ದುಃಸ್ಥಿತಿಗೆ ಬಂದಿದೆ. ಆದರೂ ವಿಜಯನಗರವು ನಿಮ್ಮಂತಹವರನ್ನೂ ಮೆಟ್ಟಿನಿಂತಿದೆ. ಲಂಚದ ಆಮಿಷದಿಂದ ನನ್ನಿಂದ ಒಂದು ಲವಾಂಶವನ್ನೂ ಪಡೆಯಲಾರಿರಿ. ನನ್ನ ದೇಹದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ನನ್ನ ತಾಯಿ ನಾಡಿಗೆ ದ್ರೋಹವನ್ನೆಸಗಲಾರೆ. ನನ್ನ ಆತ್ಮವೂ ಅಷ್ಟೆ. ವಿಜಯನಗರ ಸಿಂಹಾಸನಕ್ಕೆ ನಾನು ಮೋಸ ಮಾಡಲಾರೆ, ಇದನ್ನು ಚೆನ್ನಾಗಿ ತಿಳಿಯಿರಿ" ಎಂದು ಧೀರವಾಣಿಯಿಂದ ನುಡಿದ. ಆಗ ಒಬ್ಬ ವ್ಯಕ್ತಿ "ಬಾಯಿ್ ಮುಚ್, ಕಾಮೂಷ್, ಕ್ಯಾಬೋಲ್ ರಹಾ ಹೈ" ಎಂದು ಹೇಳುತ್ತಾ ತನ್ನ ಕೈಲಿದ್ದ ಕೊರಡನ್ನು ಬೀಸಲು, ಅದು ಬಂಧಿಯ ಮುಖದ ಮೇಲೆ ಚಡೀರ್ ಎಂದು ಬಿದ್ದು, ಧಾರಾಕಾರವಾಗಿ ರಕ್ತ ಸುರಿಯಿತು. ಇದನ್ನು ನೋಡುತ್ತಿದ್ದ ವೀರಣ್ಣನ ಮುಖ ಕೆಂಪೇರಿತು. ರಕ್ತ ಬಿಸಿಗೊಂಡಿತು. ಪಹರೆಯವರು ಯಾರಾದರೂ ಇರಬಹುದೆಂಬ

ಶಂಕೆಯಿಂದ ಮತ್ತೆರಡು ಹೆಜ್ಜೆಯನ್ನು ಮುಂದಿಟ್ಟ. ಇಬ್ಬರು ದಢೂತಿ ವ್ಯಕ್ತಿಗಳು ಬಿಚ್ಚುಗತ್ತಿಗಳಿಂದ ನಿಂತಿದ್ದರು. ವೀರಣ್ಣ ಒಬ್ಬ. ಶತ್ರುಗಳು ನಾಲ್ಕು ಮಂದಿ. ಒಳಗಡೆ ಇನ್ನೆಷ್ಟು ಮಂದಿ ಇದ್ದಾರೋ ಎಂಬ ಯೋಚನೆ. ಮತ್ತೆ "ಹುಂ, ಹೇಳು. ನಿನಗೆ ಕಡೆಯ ಅವಕಾಶವನ್ನು ಕೊಡುತ್ತಿದ್ದೇವೆ. ನೀನು ಹೇಳದಿದ್ದರೆ. ನಿನ್ನ ಹೆಂಡತಿ ಮಕ್ಕಳನ್ನೂ ಕತ್ತರಿಸಿ, ಕಾಗೆ, ನಾಯಿ ಗಳಿಗೆ ಔತಣ ಮಾಡಿಸುತ್ತೇವೆ." ಎಂದು ಮತ್ತೆ ಬಂಧಿಯನ್ನು ಹಿಂಸಿಸಿದರು. "ಥೂ ಹೇಡಿಗಳೇ, ನೀವು ನಿಜವಾದ ಶೂರರಾದರೆ, ನನ್ನ ಬಂಧನ ಬಿಡಿಸಿ, ಕೈಗೆ ಖಡ್ಗವನ್ನು ಕೊಡಿ. ನೀವೆಲ್ಲರೂ ಹೋರಾಡಿ. ಆಗ ಯಾರು ನಿಜ ವಾದ ಪೌರುಷ ವ್ಯಕ್ತಿಗಳೆಂರೆಬುದು ಗೊತ್ತಾಗುತ್ತದೆ" ಎಂದು ಬಂಧಿಯು ಸಿಂಹ ಘರ್ಜನೆ ಮಾಡಿದನು. ಮತ್ತೊಬ್ಬ ವ್ಯಕ್ತಿ ಖಡ್ಗವನ್ನು ಒರೆಯಿಂದ ಎಳೆದು "ಇದೋ ನಿಮ್ಮ ಕಾಳಿದೇವತೆ ಸೈತಾನನಂತೆ ನಿಂತಿದ್ದಾಳೆ. ಅವಳಿಗೆ ದೈವೀಶಕ್ತಿಯಿದ್ದರೆ ನಿನ್ನನ್ನು ಉಳಿಸಿಕೊಳ್ಳಲಿ" ಎಂದು ಕೊಂಕು ನುಡಿದನು. ಇದನ್ನು ನೋಡುತ್ತಿದ್ದ ವೀರಣ್ಣನಿಗೆ ಇನ್ನು ತಡೆಯಲಾಗಲಿಲ್ಲ. ಒರೆಯಿಂದ ಭೈರವ ಖಡ್ಗವನ್ನೆಳೆದು ಜೈ ಭೈರವೇಶ್ವರ ಎಂದು ಶತ್ರುಗಳ ಮೇಲೆ ಚಂಡಮಾರುತದಂತೆ ಯರಗಿದ. ಪಹರೆಯವರ ತಲೆಗಳು ಕ್ಷಣಾರ್ಧದಲ್ಲಿ ಕೆಳ ಗುರುಳಿದವು. ಏನಾಯಿತೆಂದು ಒಳಗಿದ್ದವರು ತಿಳಿಯುವಷ್ಟರಲ್ಲಿ ಭೈರವ ಖಡ್ಗ ಮೃತ್ಯುವಿನಂತೆ ಅವರ ಮುಂದೆ ಮಿಂಚಿತು. ಎರಡು ಕಡೆಯವರೂ ಖಡ್ಗ ಕಾಳಗಕ್ಕೆ ನಿಂತರು. ವೀರಣ್ಣನ ಭೀಮ ಪರಾಕ್ರಮದ ಮುಂದೆ ಶತ್ರು ಗಳ ಆಟ ನಡೆಯಲಿಲ್ಲ. ಅವರ ತಲೆಗಳು ತುಂಡರಿಸಲ್ಪಟ್ಟವು. ಇನ್ನೂ ಯಾರಾದರೂ ಗುಹೆಯಲ್ಲಿರಬಹುದೇ ಎಂದು ವೀಕ್ಷಿಸಲು, ಯಾರೂ ಕಾಣ ದಿರಲು, ಬಂಧನದಲ್ಲಿದ್ದ ವ್ಯಕ್ತಿಯನ್ನೂ ವೀರಣ್ಣ ಬಿಡಿಸಿದ. "ಅಯ್ಯಾ ತಾವು ದೇವರಂತೆ ಪ್ರತ್ಯಕ್ಷರಾಗಿ, ನನ್ನನ್ನೂ ಹಾಗೂ ಕನ್ನಡ ಸಾಮ್ರಾಜ್ಯ ವಿಜಯನಗರದ ರಹಸ್ಯಗಳನ್ನೂ ರಕ್ಷಿಸಿದಿರಿ. ನಾನು ಸಾಮ್ರಾಟರ ಗೂಢ ಚರ್ಯದಳದ ಮುಖ್ಯಸ್ಥ, ನನ್ನ ಹೆಸರು ಜಯವರ್ಧನ. ತಾವು ಯಾರೆಂದು ಕೇಳಿ ,ತಿಳಿದುಕೊಳ್ಳಬಹುದೆ ?" ಎಂದು ವಿನಯ, ಕೃತಜ್ಞತೆ

ಗಳಿಂದ ವೀರಣ್ಣನವರನ್ನು ಕೇಳಿದನು. ವೀರಣ್ಣ ತಮ್ಮ ಪರಿಚಯವನ್ನು ಆತನಿಗೆ ತಿಳಿಸಿ, ತಾನು ಬಂದ ಮಹತ್ಕಾರ್ಯದ ಬಗ್ಗೆ ಹೇಳಿದರು.

ಶತ್ರುಗಳಿಗೆ ರುದ್ರಭಯಂಕರಳಂತೆ ಕಂಡ ಕಾಳಿಮಾತೆ ವೀರಣ್ಣನವರಿಗೆ ಮಂದಹಾಸ ಬೀರುತ್ತ ಅನುಗ್ರಹಿಸುತ್ತಿರುವ ಆದಿಶಕ್ತಿ ಕೆಂಪಾಂಬೆಯಂತೆ ಕಂಡಳು. ವೀರಣ್ಣ ದೇವಿಗೆ ತಲೆಬಾಗಿ ನಮಿಸಿ, "ತಾಯೇ ನೀನಿಲ್ಲದ ಸ್ಥಳ ವಿಲ್ಲ, ನೀನಿಲ್ಲದ ಜಗವಿಲ್ಲ. ಕರುಣಿಸು ಮಾತೆ" ಎಂದು ಪ್ರಾರ್ಥಿಸಿದರು. ಇಬ್ಬರೂ ಸೇರಿ ಶವಗಳನ್ನು ಗುಹೆಯಿಂದ ಆಚೆಗೆ ಎಳೆದು ಒಂದು ಹಾಳು ಹೊಂಡಕ್ಕೆ ಎಸೆದು, ಆ ರಾತ್ರಿ ಅಲ್ಲಿ ವಿಶ್ರಮಿಸಿದರು. ಬೆಳಿಗ್ಗೆ ಮತ್ತೆ ದೇವಿಗೆ ಭಕ್ತಿ ಸಲ್ಲಿಸಿ, ವಿಜಯನಗರದ ಕಡೆ ಹೊರಟರು. ವೀರಣ್ಣನವರು ಸಾಮ್ರಾಟ ಅಚ್ಯುತರಾಯರ ದರ್ಶನ ಪಡೆದು, ಕೆಂಪಭೂಪಾಲರ ಪತ್ರವನ್ನು ಅವರಿಗೆ ಅರ್ಪಿಸಿದರು. ಸಾಮ್ರಾಟರು ಆ ಪತ್ರವನ್ನು ಓದಿಕೊಂಡರು. ಜಯ ವರ್ಧನನಿಂದ ವೀರಣ್ಣನ ಸಾಹಸ-ಶೌರ್ಯಗಳನ್ನು ತಿಳಿದರು. ಅಳಿಯ ರಾಮ ರಾಯರನ್ನು ಕರೆಯಿಸಿ ಭೈರವ ನಾಣ್ಯಗಳನ್ನು ಮುದ್ರಿಸಲು ಅನುಮತಿಯ ಪತ್ರವನ್ನು ಕೊಡಿಸಿದರು. ಅಲ್ಲದೆ ಯಲಹಂಕ ಭೂಪಾಲರಿಂದ ಬರಬೇಕಾ ಗಿದ್ದ 30,000 ಪಗೋಡಗಳ ಕಪ್ಪವನ್ನು ಮನ್ನಾ ಮಾಡಿದರು. ಆ ಹಣ ವನ್ನು ಬೆಂಗಳೂರು ನಗರ ನಿರ್ಮಾಣಕ್ಕೆ ಉಪಯೋಗಿಸಬೇಕೆಂದು ಆಜ್ಞಾಪಿಸಿ ವೀರಣ್ಣನವರನ್ನು ಗೌರವ, ಮರ್ಯಾದೆಗಳಿಂದ ವಾಪಸ್ಸು ಕಳುಹಿಸಿಕೊಟ್ಟರು. ಸಾಮ್ರಾಟರ ಔದಾರ್ಯಕ್ಕೆ ಮನಸೋತ ವೀರಣ್ಣನವರು ಅವರನ್ನು ಕೃತಜ್ಞತಾಪೂರ್ವಕವಾಗಿ ವಂದಿಸಿದರು. ವೀರಣ್ಣನವರನ್ನು ಜಯವರ್ಧನ ತನ್ನ ಮನೆಗೆ ಕರೆದುಕೊಂಡುಹೋಗಿ ಅತಿಥಿ ಸತ್ಕಾರ ಮಾಡಿ, ಪತ್ನಿ ಮಕ್ಕಳನ್ನು ಪರಿಚಯಿಸಿ, ಬೆಲೆಬಾಳುವ ಬಹುಮಾನಗಳ ಮರ್ಯಾದೆ ಮಾಡಿ ಕಳುಹಿಸಿ ಕೊಟ್ಟನು. 'ಧೈರ್ಯೇ, ಸಾಹಸಿ, ಲಕ್ಷ್ಮಿ' ಎಂಬ ನಾಣ್ನುಡಿ ವೀರಣ್ಣನವರಿಗೆ ಅನ್ವಯಿಸುವುದಿಲ್ಲವೆ ?

೩

ಅಂದು ಶುಕ್ರವಾರ ಲಕ್ಷ್ಮಿ ಅಭ್ಯಂಜನ ಸ್ನಾನ ಮಾಡಿದಳು. ಭಕ್ತಿಯಿಂದ ಶ್ರೀ ಸೋಮೇಶ್ವರ ಹಾಗೂ ಕುಲದೇವತೆ ಕೆಂಪಾಂಬೆಯವರಿಗೆ ಪೂಜೆ ಸಲ್ಲಿಸಿದಳು; ಹಣೆಯಲ್ಲಿ ವಿಭೂತಿ-ಕುಂಕುಮಗಳನ್ನು ಧರಿಸಿ ಶೋಭಾಯಮಾನವಾಗಿ ಕಾಣುತ್ತಿದ್ದ ಲಕ್ಷ್ಮಿ ಕಪಿಲೆಗೆ ನಮಸ್ಕರಿಸಿ, "ತಾಯಿ, ನೀನು ನಮ್ಮ ಮನೆಯ ಕಾಮಧೇನು" ಎಂದು ಅದಕ್ಕೆ ಅರಿಸಿನ-ಕುಂಕುಮಗಳನ್ನಿಟ್ಟು ಪೂಜಿಸಿದಳು. ಅದೇ ಸಮಯದಲ್ಲಿ ಅಂಗಳದ ಕೆಂಡ ಸಂಪಿಗೆಯ ಮರದಿಂದ ಕಾಗೆಯೊಂದು ಕಾವ್, ಕಾವ್ ಎಂದು ಕೂಗುವ ಶಬ್ದ ಬಂದಿತು, ಅದನ್ನು ನೋಡಿ, "ಏನು ಕಾಕಮ್ಮ, ಯಾರಾದರೂ ನಂಟರು ಬರುತ್ತಾರೆಂಬ ವಾರ್ತೆಯನ್ನು ತಂದೆಯಾ ?" ಎಂದು ನಕ್ಕಳು. ಕಾಗೆ ಮತ್ತೆ ಕಾವ್ ಕಾವ್, ಎಂದು ಕೂಗುತ್ತಾ ಮರದಿಂದ ಹಾರಿ ಹೋಯಿತು. ಕೆಂಡ ಸಂಪಿಗೆಯೊಂದು ಮರದಿಂದ ಲಕ್ಷ್ಮಿಯ ತಲೆಯ ಮೇಲೆ ಬಿದ್ದು, ಪುಷ್ಪವೃಷ್ಟಿಯಾದಂತಾಯಿತು. ಆಕೆಗೆ ಬೆಳಗಿನ ಜಾವದಿಂದಲೂ ಎಡಗಣ್ಣು ಹಾರುತ್ತಲೇ ಇತ್ತು. "ಏನು, ಎಲ್ಲಾ ಶುಭ ಶಕುನಗಳೇ ಆಗುತ್ತವೆ. ಯಲಹಂಕಕ್ಕೆ ಹೋಗಿರುವ ಚಿಕ್ಕಪ್ಪನವರು ಬಂದರೂ ಬರಬಹುದು" ಎಂದು ಮನಸ್ಸಿನಲ್ಲಿ ಯೋಚಿಸಿದಾಗ, ನಾಚಿಕೆಯಾಗಿ, ಮೈಯೆಲ್ಲಾ ಕೆಂಪೇರಿತು. ಆಕೆಯ ಕೆಂದಾವರೆ ತುಟಿಗಳಲ್ಲಿ ಮಂದಹಾಸ ನಾಟ್ಯವಾಡಿತು. ಮತ್ತೆ ಹಿಂದಿನ ನೆನಪುಗಳು ಯುವರಾಜರು ರಾಮ-ಲಕ್ಷ್ಮಣರ ಕಡೆ ಕಲ್ಲನ್ನು ಬೀಸಿದ್ದು, ಅವುಗಳ ಹೂಂಕಾರ, ಯುವರಾಜರ ಕುದುರೆ ಹೆದರಿದ್ದು-ಅಲಸೂರಿನಲ್ಲಿ ಸೋಮೇಶ್ವರ ದರ್ಶನ-ರಾಣಿ ಚೆನ್ನಾಂಬೆ ತನ್ನ ಚಿನ್ನದ ಹಾರವನ್ನು ತೊಡಿಸಿದ್ದು-ಪ್ರೀತಿಯಿಂದ ಕೆನ್ನೆಯನ್ನು ಚಿವುಟಿದ್ದು - ಇತ್ಯಾದಿ ನೆನಪುಗಳು ಅಲೆ ಅಲೆಯಾಗಿ ಸ್ಮರಣೆಗೆ ಬಂದು, ಯಾವ ಕೆಲಸವನ್ನೂ ಮಾಡಲು ಬಿಡದಂತೆ ಆಗಿದೆ. ಯೋಚನೆಗಳಲ್ಲಿ ಮಗ್ನಳಾದ ಲಕ್ಷ್ಮಿ ತನ್ನ ಗಲ್ಲದ ಮೇಲೆ ಕೈಯನ್ನಿಟ್ಟುಕೊಂಡು ಕಲ್ಲಿನ ಬೆಂಚಿನ ಮೇಲೆ ಚಿನ್ನದ ಬೊಂಬೆಯಂತೆ ಕುಳಿತಿದ್ದಾಳೆ. ಬಾಹ್ಯ ಪರಿವೆಯೇ ಇಲ್ಲ. ರಾಜಪರಿವಾರ ಬಾಗಿಲಿಗೆ ಬಂದು ನಿಂತಿದೆ. ರಾಣಿ

ಚೆನ್ನಾಂಬ ಅಂಗಳವನ್ನು ಪ್ರವೇಶಿಸಿ ತದೇಕಚಿತ್ತದಿಂದ ಲಕ್ಷ್ಮಿಯನ್ನು ನೋಡುತ್ತಾ ನಿಂತುಬಿಟ್ಟಳು, ಲಕ್ಷ್ಮಿಯು ಆಕೆಯ ಕಣ್ಣಿಗೆ ದೊಡ್ಡಾಂಬೆಯಂತೆ ಕೆಂಪಾಂಬೆಯಂತೆ, ಧರೆಗಿಳಿದ ಅಪ್ಸರೆಯಂತೆ, ಸತಿ ಅನಸೂಯ, ಸಾವಿತ್ರಿಯ ರಂತೆ ಕಾಣುತ್ತಿದ್ದಾಳೆ. ಲಕ್ಷ್ಮಿಯ ಸೌಂದರ್ಯಕ್ಕೆ ಮಾರುಹೋದ ಚೆನ್ನಾಂಬ ಪುತ್ರಿ ವಾತ್ಸಾಲ್ಯದಿಂದ ಆಕೆಯನ್ನು ಬರಸೆಳೆದು ಮುತ್ತಿಟ್ಟಳು. ಪರರ ಸ್ಪರ್ಶ ದಿಂದ ಗಾಬರಿಗೊಂಡು ಪರಿವೆ ತಂದುಕೊಂಡು ತನಗೆ ಏನಾಯ್ತು ಎಂದು ನೋಡುವಷ್ಟರಲ್ಲಿ ಗೌಡ ಪ್ರಭುಗಳು ತಮ್ಮ ಪರಿವಾರ ಸಮೇತ ಮನೆಯಂಗಳ ದಲ್ಲಿ ನಿಂತಿದ್ದಾರೆ. ಇವರನ್ನೆಲ್ಲ ಕಂಡ ಲಕ್ಷ್ಮಿ ನಾಚಿ, ತಲೆತಗ್ಗಿಸಿ, ತಾಯಿ ಯನ್ನು ಕರೆಯಲು ಅಡಿಗೆ ಮನೆಯ ಕಡೆ ಓಡಿದಳು. ಸುದ್ದಿಯನ್ನು ತಿಳಿದ ಅಜ್ಜ ಸೊಣ್ಣೇಗೌಡರು ಅವರ ಮಗ ಸಿದ್ಧೇಗೌಡರು ಬಂದು ಕೆಂಪಭೂಪಾಲರಿಗೆ ನಮಸ್ಕರಿಸಿ ಆದರದ ಸ್ವಾಗತ ನೀಡಿದರು. “ಪ್ರಭುಗಳು ದಯಮಾಡಿಸ ಬೇಕು. ತಮ್ಮ ಆಗಮನದಿಂದ ನಮ್ಮ ಮನೆ ಪಾವನವಾಯಿತು” ಎಂದು ಅವರನ್ನು ನಡು ಮನೆಗೆ ಕರೆದೊಯ್ದು, ರತ್ನಗಂಬಳಿಯ ಮೇಲೆ ಕೂಡಿಸಿ ದರು. ಲೋಕಭಿರಾಮವಾಗಿ ಕ್ಷೇಮ ಸಮಾಚಾರ ಮಾತುಗಳಾದ ಮೇಲೆ, ಗೌಡ ಪ್ರಭುಗಳು ನೇರವಾಗಿ ತಾವು ಬಂದ ಉದ್ದೇಶವನ್ನು ತಿಳಿಸಿದರು. ವೀರಣ್ಣ ಗೌಡರನ್ನು ರಾಜಕಾರ್ಯದ ಮೇಲೆ ವಿಜಯನಗರಕ್ಕೆ ಕಳುಹಿಸಿರುವು ದಾಗಿಯೂ, ಅವರು ಬರಲು ಇನ್ನೂ ಕೆಲವು ದಿನಗಳಾಗಬಹುದೆಂದೂ, ಯುವರಾಜ ಕೆಂಪೇಗೌಡರು ಲಕ್ಷ್ಮಿಯನ್ನು ವರಿಸಲು ಇಷ್ಟಪಟ್ಟಿರುವನೆಂದೂ, ದೊಡ್ಡ ಮನಸ್ಸುಮಾಡಿ ಲಕ್ಷ್ಮಿಯನ್ನು ತನ್ನ ಸೊಸೆಯನ್ನಾಗಿ ಮಾಡಿ ಕೊಳ್ಳಲು ಒಪ್ಪಿಗೆ ಕೊಡಬೇಕೆಂದೂ ಕೇಳಿದರು. ಅಜ್ಜ ಸೊಣ್ಣೇಗೌಡರು ದಿಗ್ಮೂಢರಾದರು. ತಾನು ಕೇಳುತ್ತಿರುವುದು ಕನಸಿನಲ್ಲೋ, ನಿಜವಾಗಿಯೋ ಎಂದು ಭಾವಿಸಿದರು. ಅವರ ಆನಂದಕ್ಕೆ ಪಾರವಿಲ್ಲದಂತಾಯಿತು. ನಾಡ ಪ್ರಭುಗಳಂತಹ ದೊಡ್ಡ ಮಹನೀಯರು ಲಕ್ಷ್ಮಿಯನ್ನು ಸೊಸೆಯನ್ನಾಗಿ ಮಾಡಿಕೊಳ್ಳಲು ಇಷ್ಟಪಟ್ಟಿರುವುದು ತಮ್ಮ ಮನೆಗೆ, ಅದರಲ್ಲೂ ಇಡೀ ಕೋರಮಂಗಲಕ್ಕೆ ಒಂದು ಅಪೂರ್ವ ಸಂತಸದ ಮಹತ್ವದ ವಿಷಯವೆಂದರು. ಗೌಡರ ಪರಿವಾರದೊಡನೆ ಸುಬ್ಬರಾಯ ಜ್ಯೋತಿಷ್ಯರೂ ಬಂದಿದ್ದರು. ಅವರು ಲಕ್ಷ್ಮಿಯ ಜಾತಕವನ್ನು ಪರಿಶೀಲಿಸಿ, ನಕ್ಷತ್ರ, ಗಣಕೂಟ ಇತ್ಯಾದಿ

ಗಳನ್ನು ಲೆಕ್ಕಹಾಕಿ, ಜಾತಕ ಪ್ರಶಸ್ತವಾಗಿದೆಯೆಂದೂ. ಲಕ್ಷ್ಮಿ, ಕೆಂಪಾಂಬೆಯಂತೆ ಇತಿಹಾಸದಲ್ಲಿ ಸಹಸ್ರ ವರ್ಷಗಳು ಪ್ರಜ್ವಲಿಸುವಳೆಂದೂ ನುಡಿದರು. ಅಂದೇ ಮದುವೆಗೆ ಒಂದು ಶುಭದಿನವನ್ನು ಗೊತ್ತುಮಾಡಿದರು. ರಾಣಿ ಚೆನ್ನಾಂಬೆಯು ಒಂದು ಚಿನ್ನದ ಜರಿ ಅಂಚಿನ ರೇಷ್ಮೆ ಸೀರೆಯನ್ನು ಲಕ್ಷ್ಮಿಗೆ ಪ್ರೀತಿಯಿಂದ ತನ್ನ ಕೈಯಾರೆ ಉಡಿಸಿದರು. ವಜ್ರಾಭರಣಗಳಿಂದ ಲಕ್ಷ್ಮಿಯನ್ನು ಸಿಂಗರಿಸಿ ಕರೆದುಕೊಂಡು ಒಂದು ತನ್ನ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು. ಸಾಕ್ಷಾತ್ ಲಕ್ಷ್ಮೀದೇವಿಯಂತೆ ಇದ್ದ ಲಕ್ಷ್ಮಿಯನ್ನು ಗೌಡ–ಪ್ರಭುಗಳು ಮನದಲ್ಲಿಯೇ ಅತ್ಯಾನಂದವನ್ನು ಅನುಭವಿಸಿದರು. ಯುವರಾಜ ಎವೆಯಿಕ್ಕದೆ ಹೆಣ್ಣನ್ನೇ ನೋಡುತ್ತಾ ಕುಳಿತಿದ್ದ. ನಾಚಿಕೆಯಿಂದ ಲಕ್ಷ್ಮಿ ತಲೆಯನ್ನೇ ಎತ್ತಲಿಲ್ಲ. ವೀರಣ್ಣ ಗೌಡರು ಬಂದ ಮೇಲೆ ಮದುವೆ ಏರ್ಪಾಟುಗಳನ್ನು ಮಾಡುವುದಾಗಿಯೂ ಹೇಳಿ, ಪರಿವಾರದೊಡನೆ ಹೊರಡಲು ಪ್ರಭುಗಳು ಸಿದ್ಧರಾದರು. ಒಮ್ಮೆಯಾದರೂ ಲಕ್ಷ್ಮಿ ತನ್ನಕಡೆ ನೋಡಬಹುದೆಂದು ಲಕ್ಷ್ಮಿಯನ್ನೇ ನೋಡುತ್ತಾ ಇದ್ದ ಯುವರಾಜರು ತಂದೆಯನ್ನು ಹಿಂಬಾಲಿಸಿದ. ಲಕ್ಷ್ಮಿ ತಲೆಯೆತ್ತಿ ಹೋಗುತ್ತಿದ್ದ ಯುವರಾಜನನ್ನು ನೋಡಿದಳು. ಇಬ್ಬರ ಕಣ್ಣುಗಳೂ ಒಂದಾದವು. ಯುವರಾಜ ಹೋಗಿ ಬರುತ್ತೇನೆಂದು ಕಣ್ಣು ಸನ್ನೆಯಲ್ಲೇ ತಿಳಿಸಿದ. ಇದನ್ನು ಯಾರಾದರೂ ನೋಡಿದರೇನೋ ಎಂಬ ನಾಚಿಕೆಯಿಂದ ಲಕ್ಷ್ಮಿ ಅಡಿಗೆ ಮನೆಯತ್ತ ಓಡಿದಳು. ಕೋರಮಂಗಲ ಗ್ರಾಮ ನಿವಾಸಿಗಳೆಲ್ಲ ಗೌಡ ಪ್ರಭುಗಳಿಗೆ ನಮಸ್ಕರಿಸಿ ಬಹುದೂರ ಅವರ ಜತೆಯಲ್ಲೇ ಹೋಗಿ ಅವರನ್ನು ಹಾರ್ದಿಕವಾಗಿ ಬೀಳ್ಕೊಟ್ಟರು. ಲಕ್ಷ್ಮಿಯನ್ನು ಕೀಟಲೆ ಮಾಡಲು ಅವಕಾಶಕ್ಕಾಗಿ ಕಾಯುತ್ತಿದ್ದ ಆಕೆಯ ಸ್ನೇಹಿತೆಯರು ಆಕೆ ಇದ್ದಲ್ಲಿಗೆ ನುಗ್ಗಿದರು.

೪

ಯಲಹಂಕದ ನಾಡೆಲ್ಲಾ ಸಡಗರ ಸಂಭ್ರಮಗಳಿಂದ ತುಂಬಿದೆ. ಗುಡಿ-ಮನೆಗಳನ್ನು ತಳಿರು-ತೋರಣಗಳಿಂದ ಸಿಂಗರಿಸಿದ್ದಾರೆ. ಎಲ್ಲಿ ನೋಡಿದರೂ ಜನರು ತಮ್ಮ ತಮ್ಮ ಕೆಲಸಕಾರ್ಯಗಳಲ್ಲಿ ಎಂದೂ ಇಲ್ಲದ ಸಂತಸದಿಂದ ಮಗ್ನರಾಗಿದ್ದಾರೆ. ವಿಜಯನಗರದಿಂದ ಬಹುದೂರ ಪಯಣಿಸಿ, ವೀರಣ್ಣ ನವರು ಯಲಹಂಕವನ್ನು ಪ್ರವೇಶಿಸಿದ್ದಾರೆ. ಸಂಭ್ರಮದ ಸಿದ್ಧತೆಗಳು ವೀರಣ್ಣ ನವರಿಗೆ ವಿರೋಚಿತ ಸ್ವಾಗತವನ್ನು ನೀಡಲೋ ಎಂಬಂತೆ ಭಾಸವಾಗುತ್ತಿದೆ. ವೀರಣ್ಣನವರಿಗಂತೂ ಇದನ್ನೆಲ್ಲಾ ನೋಡಿ ಸೋಜಿಗವೆನಿಸಿತು. ಅವರು ಅರ ಮನೆಯ ಬಳಿಗೆ ಬಂದ ಕೂಡಲೇ, ಕೆಂಪೇಗೌಡರು ಅವರನ್ನು ಆದರದಿಂದ ಬರಮಾಡಿಕೊಂಡರು. "ವೀರಣ್ಣ, ಸಾಮ್ರಾಟರು ನಮಗೆ ಅನುಮತಿಯನ್ನು ನೀಡಿದರೆ? ಅಳಿಯ ರಾಮರಾಯರನ್ನು ಕಂಡಿದ್ದೆಯಾ? ದೂರ ಪ್ರಯಾಣದಿಂದ ಆಯಾಸವಾಯಿತೆ?" ಎಂದು ಕೆಂಪೇಗೌಡರು ಪ್ರಶ್ನಿಸಿದರು. ವೀರಣ್ಣನವರು ತಾವು ನಡೆಸಿದ ಎಲ್ಲಾ ಕಾರ್ಯಕಲಾಪಗಳ ಬಗ್ಗೆ ವಿವರ ನೀಡಿದರು. ಸಾಮ್ರಾಟರು ಕೊಟ್ಟ ಅನುಮತಿ ಪತ್ರವನ್ನು ಗೌಡ ಪ್ರಭು ಗಳ ಕೈಗೆ ಇತ್ತರು. ವಹಿಸಿದ ಕೆಲಸವನ್ನು ಜಯಪ್ರದವಾಗಿ ನಿರ್ವಹಿಸಿ ಕೊಂಡು ಬಂದ ವೀರಣ್ಣನವರನ್ನು ಅಭಿನಂದಿಸುತ್ತಾ "ನಿನಗೆ ಒಂದು ಬಹು ಮಾನವನ್ನು ನೀಡಬೇಂಕೆದಿದ್ದೇನೆ. ಅದನ್ನು ತಪ್ಪದೆ ಸ್ವೀಕರಿಸುವರೆಂಬ ಭರವಸೆ ನನಗಿದೆ" ಎಂದು ನಗುತ್ತಾ ಹೇಳಿದರು. ಆಗ ವೀರಣ್ಣ, "ಪ್ರಭು ಗಳೇ, ಕ್ಷಮಿಸಬೇಕು. ನಾನ್ಯಾವ ಘನ ಕಾರ್ಯ ಮಾಡಿರುವೆನೆಂದು ನನಗೆ ಬಹುಮಾನ; ಪ್ರಭುಗಳು ವಹಿಸುವ ಕರ್ತವ್ಯವನ್ನು ಶ್ರದ್ಧಾ-ಭಕ್ತಿಗಳಿಂದ ನಿರ್ವಹಿಸುವುದು ಕಿಂಕರನ ಕರ್ತವ್ಯ. ತಾವು ವಹಿಸಿದ ಕೆಲಸವನ್ನು ನಿರ್ವ ಹಿಸಿಲು ಅರ್ಹತೆ ಇದೆಯೋ ಎಂಬ ಹೆದರಿಕೆ ಇತ್ತು. ಆದರೆ, ಭೈರವೇಶ್ವರರ ಕೃಪಾನುಗ್ರಹದಿಂದ ಕೆಲಸವು ನಿರ್ವಿಘ್ನವಾಗಿ ನೆರವೇರಿತು. ಅಷ್ಟೆ ಎಂದರು. "ಕೇಳು, ವೀರಣ್ಣ, ನಿನಗೆ ನಾನು ಕೊಡುವ ಬಹುಮಾನವಾದರೂ ಏನು

ಎಂಬುದನ್ನು ಕೇಳು ನಿಮ್ಮ ಲಕ್ಷ್ಮಿಯನ್ನು ನಮ್ಮ ಯುವರಾಜರಿಗೆ ತಂದು ಕೊಂಡು, ಆ ಮೂಲಕ ನಿಮಗೆ ಸಂತಸ ಉಂಟುಮಾಡುವುದೇ ನಾವು ನಿನಗೆ ನೀಡುವ ಬಹುಮಾನ! ಇದು ನಿನಗೆ ಸಮ್ಮತವು ತಾನೆ?" ಎಂದರು ಕೆಂಪೇ ಗೌಡರು. ವೀರಣ್ಣನವರ ಆನಂದ ಉಕ್ಕಿ ಮೇರೆ ಮೀರಿತು. "ಪ್ರಭು, ತಾವು ಧರ್ಮ ಪ್ರಭುಗಳು. ದಯಾಮಯರು. ನಮ್ಮಂತಹ ಸಾಮಾನ್ಯರ ಹೆಣ್ಣುಮಗಳನ್ನು ನಿಮ್ಮ ಸೊಸೆಯನ್ನಾಗಿ ಮಾಡಿಕೊಳ್ಳುವುದು ನಮ್ಮ ಪೂರ್ವಾರ್ಜಿತ ಪುಣ್ಯ. ಇಂತಹ ಕೃಪಾಪೂರ್ಣ ಬಹುಮಾನವನ್ನು ಯಾರು ತಾನೆ ಸ್ವೀಕರಿಸಲು ಇಚ್ಛಿಸುವುದಿಲ್ಲ ಪ್ರಭು?" ಎಂದು ವೀರಣ್ಣ ನಮ್ರತೆ ಯಿಂದ ನುಡಿದರು. "ಒಕ್ಕಲಿಗರೆಲ್ಲಾ ಮೇಲು-ಕೀಳೆಂಬ ಭೇದ-ಭಾವನೆ ಗಳಿಲ್ಲದೆ ಕೂಡಿ ಬಾಳಿದರೆ,ಕುಲದೇವತೆ ಕೆಂಪಾಂಬ ಸುಪ್ರೀತಳಾಗುವುದಿಲ್ಲವೇ? ವೀರಣ್ಣ" ಎಂದು ಹೇಳಿ ಆತನನ್ನು ವಿಶ್ರಾಂತಿಗಾಗಿ ಕಳುಹಿಸಿದರು.

ಮದುವೆಯ ಶುಭದಿನ ಬಂದೇ ಬಂದಿತು. ಇಂತಹ ಶುಭ ದಿನಗಳು ಬರುವುದೇ ಅಪರೂಪ. ಕೆಂಪ ಭೂಪಾಲರ ಪುತ್ರ ಯುವರಾಜನ ವಿವಾಹ ವೆಂದರೆ ಕೇಳಬೇಕೆ! ಯಾವ ಭೇದ-ಭಾವಗಳೂ ಇಲ್ಲದೆ ಸಹಸ್ರಾರು ಸಂಖ್ಯೆ ಯಲ್ಲಿ ಪ್ರಜೆಗಳು ಯಲಹಂಕದಲ್ಲಿ ಒಂದು ಸೇರಿದರು. ಆಂಧ್ರ, ಕರ್ನಾಟಕ, ತಮಿಳುನಾಡಿನ ಅನೇಕ ಸಾಮಂತ ಮಾಂಡಲಿಕರೂ, ದಂಡನಾಯಕರೂ, ಗಣ್ಯ ಆಹ್ವಾನಿತರೂ ಬಂದು ನೆರೆದರು. ಅವರೆಲ್ಲರಿಗೆ ಆದರ ಅತಿಥ್ಯಗಳನ್ನು ಮಾಡಲು ವೀರಣ್ಣನವರೇ ಸ್ವತಃ ಕೈಕಟ್ಟಿ ನಿಂತರು. ಕೆಂಪೇಗೌಡರ ಸೋದರ ರಾದ ಸೋಮಣ್ಣಗೌಡ ಮತ್ತು ಗಿಡ್ಡೇಗೌಡರು ವೀರಣ್ಣನಿಗೆ ಸಹಾಯಕರಾಗಿ ನಿಂತರು. ವಿಜಯನಗರದ ಸಾಮ್ರಾಟರು, ವಧು-ವರರಿಗೆ, ಅಮೂಲ್ಯ ವಾದ ಉಡುಗೊರೆಗಳನ್ನು ಕಳುಹಿಸಿದ್ದರು. ಅಂದು ಇಡೀ ನಾಡಿಗೆ ಒಂದು ದೊಡ್ಡ ಹಬ್ಬವಾಗಿತ್ತು. ಗೌಡ ಪ್ರಭುಗಳ ಆಚಾರ, ಸಂಪ್ರದಾಯಗಳಿಗೆ ಅನುಗುಣವಾಗಿ, ವಿವಾಹವು ಶಾಸ್ತ್ರೋಕ್ತವಾಗಿ ನಡೆದು ಲಕ್ಷ್ಮಿ ಮತ್ತು ಯುವರಾಜ ಕೆಂಪೇಗೌಡರು ಸತಿ-ಪತಿಗಳಾಗಿ ಬಂದ ಹಿರಿಯರಿಂದ ಆಶೀರ್ವಾ ದಿಸಲ್ಪಟ್ಟರು. ವಿವಾಹಕ್ಕೆ ಆಗಮಿಸಿದ್ದ ಪ್ರಜಾ ಸಮೂಹ ಮೃಷ್ಟಾನ್ನ ಭೋಜನಗಳಿಂದ ತೃಪ್ತರಾಗಿ ಕೆಂಪ ಭೂಪಾಲರನ್ನು ಮುಕ್ತ ಕಂಠದಿಂದ ಹೊಗಳುತ್ತಾ ತಮ್ಮ ತಮ್ಮ ಊರುಗಳಿಗೆ ಹಿಂತಿರುಗಿಸಿದರು. ಸಾಮಂತರು,

ದಂಡನಾಯಕರು. ಪಾಳೆಗಾರರು ತಾವು ಸದಾ ಯಲಹಂಕ ಭೂಪಾಲಕರಿಗೆ ಸ್ನೇಹಬದ್ಧರಾಗಿರುತ್ತೇವೆಂದು ವಚನ ನೀಡಿ ತಮ್ಮ ತಮ್ಮ ಸ್ವಸ್ಥಾನಗಳಿಗೆ ಹೊರಟರು. ಚನ್ನಪಟ್ಟಣದ ಜಗದೇವರಾಯರು ಆತ್ಮೀಯತೆಯಿಂದ, "ಕೆಂಪ ಭೂಪಾಲರೇ, ನಾವು ವಿಜಯನಗರ ಸಾಮ್ರಾಟರ ಆಪ್ತರು. ನಮ್ಮ ರಾಜ್ಯಗಳನ್ನು ಪ್ರಬಲಗೊಳಿಸಬೇಕು. ಇತರರ ಮಾತಿಗೆ ಕಿವಿಗೊಡದೆ ಸ್ನೇಹ ದಿಂದರೋಣ" ಎಂದು ವಂದಿಸಿ ಚೆನ್ನಪಟ್ಟಣಕ್ಕೆ ಮರಳಿದರು.

ರಾಣಿ ಚೆನ್ನಾಂಬೆಗೆ ಹೆಣ್ಣು ಮಕ್ಕಳಿರಲಿಲ್ಲ. ಲಕ್ಷ್ಮಿಯನ್ನು ಸೊಸೆಯನ್ನಾಗಿ ಮನೆ ತುಂಬಿಸಿಕೊಂಡು, ಹೆಣ್ಣು ಮಕ್ಕಳಿಲ್ಲದ ಕೊರತೆಯನ್ನು ಪೂರೈಸಿಕೊಂಡರು. ಕ್ರಮೇಣ ಮದುವೆಯ ಸಡಗರ-ಸಂಭ್ರಮಗಳು ಕಡಿಮೆಯಾಗುತ್ತಾ ಬಂದವು. ಅಜ್ಜ ಸೊಣ್ಣೇಗೌಡರು ಮೊಮ್ಮಗಳನ್ನು ಹತ್ತಿರ ಕರೆದು, ತಲೆ ನೇವರಿಸಿ, "ತಾಯಿ, ನೀನಿಂದು ಯಲಹಂಕ ನಾಡ ಪ್ರಭುಗಳ ನೆಚ್ಚಿನ ಸೊಸೆ. ಮುಂದೆ ಯಲಹಂಕ ನಾಡಿಗೆ ಆಗುವ ರಾಣಿ, ರಾಜ್ಯ ಹಾಗೂ ಪ್ರಜೆಗಳ ಕ್ಷೇಮಕ್ಕಾಗಿ ತ್ಯಾಗ, ಬಲಿದಾನಗಳನ್ನು ಮಾಡಲು ಸದಾ ಸಿದ್ಧಳಿರಬೇಕು. ಇದನ್ನು ಮರೆಯದೆ ನೆನಪಿಸಲ್ಲಿಟ್ಟುಕೊಂಡು ನಮ್ಮ ವಂಶದ ಕೀರ್ತಿಯನ್ನು ಬೆಳಗಿಸಮ್ಮಾ ತಾಯಿ" ಎಂದು ಹರಸಿ, ಹೃದಯ ಭಾರದಿಂದ ಕೋರಮಂಗಲಕ್ಕೆ ಹೊರಟರು. ಅಜ್ಜ ಮುದ್ದಿನ ಮೊಮ್ಮಗಳನ್ನು ಅಗಲಿ ಹೊರಡುವ ದೃಶ್ಯವಂತೂ ಹೃದಯ ಸ್ಪರ್ಶಿಯಾಗಿದ್ದು ಅಲ್ಲಿದ್ದ ಎಲ್ಲರ ಮನ ಮಿಡಿದಿತ್ತು. ಲಕ್ಷ್ಮಿಯ ತಾಯಿ ಪಾರ್ವತಮ್ಮನೂ ಸಹಾ ಮನೆಯ ವ್ಯವಹಾರ, ಅಜ್ಜನ ಆರೈಕೆ, ಆಳುಕಾಳುಗಳ ವಹಿವಾಟು ಇವುಗಳನ್ನು ನೋಡಿಕೊಳ್ಳಲು ಹೋಗಬೇಕಾಯಿತು. ಮಗಳು ಪ್ರಭುಗಳ ಸೊಸೆಯೆಂಬ ಹೆಮ್ಮೆ-ಸಂತಸಗಳಿಂದ ಕೂಡಿದ್ದರೂ ಆಕೆ ಮಗಳನ್ನು ಅಗಲಿ ಹೊಗುವಿಕೆ ದುಃಖಕರವಾಗಿಯೇ ಇತ್ತು. ರಾಣಿ ಚೆನ್ನಾಂಬೆಯನ್ನು ಕುಗಿತು, "ಅತ್ತಿಗೆ ಲಕ್ಷ್ಮಿ ಇಷ್ಟು ದಿನ ನನ್ನ ಮಗಳಾಗಿದ್ದಳು. ಇಂದಿನಿಂದ ಆಕೆ ನಿನ್ನ ಮಗಳು. ಇನ್ನು ನನಗೆ ಹೊರಡಲು ಅನುಮತಿ ನೀಡು" ಎಂದು ಹೇಳುತ್ತಿರಲು ಕಣ್ಣೀರು ತಾನೇತಾನಾಗಿ ಆಕೆಯ ಕೆನ್ನೆಗಳನ್ನು ತೋಯಿಸಿತು. ಆಗ ರಾಣಿ ಚೆನ್ನಾಂಬೆ "ಅತ್ತಿಗೆ, ಕೋರಮಂಗಲ ಬಹಳ ದೂರವಲ್ಲ. ರಾಮ-ಲಕ್ಷ್ಮಣರನ್ನು ಕಟ್ಟಿದ ಗಾಡಿಯನ್ನು ಏರಿ ಬೇಕಾದಾಗ ಯಲಹಂಕಕ್ಕೆ

ಬರಬಹುದು. ಬೆಂಗಳೂರಿನ ಕೋಟೆ ಪೂರ್ಣವಾಗುತ್ತಲೇ ನಾವು ನಿಮಗೆ ಖಂಡಿತ ಇನ್ನೂ ಹತ್ತಿರವಾಗುತ್ತೇವೆ," ಎಂದು ಸಮಾಧಾನಪಡಿಸಿ ಕಳುಹಿಸಿ ಕೊಟ್ಟಳು. ಆಳು ನಂಜ, ಹೊರಡುವಾಗ ಲಕ್ಷ್ಮಿಯನ್ನು ಕಂಡು. "ನನ್ನವ್ವಾ, ನಾನು ಹೋಗಿ ಬರ್ತೇನೆ. ಈ ನನ್ನ ಕೈಗಳಲ್ಲಿ ನನ್ನವ್ವನನ್ನು ಹೊತ್ತು, ಆಡಿಸಿ ಬೆಳೆಸಿದೆ. ಈಗ ನಮ್ಮನ್ನಾಳುವ ದೊರೆಗಳ ಸೊಸೆಯಾದ ತಾವು ನನ್ನ ಮರೀ ಬೇಡಿ ಅವ್ವಾ," ಎಂದು ದುಃಖದಿಂದ ನುಡಿದ. "ಹಾಗೆನ್ನ ಬೇಡ ನಂಜಜ್ಜ. ಕಪಿಲೆ, ರಾಮ-ಲಕ್ಷ್ಮಣರನ್ನು ಪ್ರೀತಿಯಿಂದ ಚೆನ್ನಾಗಿ ನೋಡಿಕೋ" ಎಂದು ಉಕ್ಕಿ ಬರುತ್ತಿದ್ದ ದುಃಖವನ್ನು ತೋರ್ಪಡಿಸಿ ಕೊಳ್ಳದೆ ನಂಜನನ್ನು ನಗು ಮುಖದಿಂದ ಕಳುಹಿಸಿಕೊಟ್ಟಳು. ಸಿದ್ಧೇ ಗೌಡರು ಕೆಂಪ ಭೂಪಾಲರ ಪ್ರೀತಿ-ವಾತ್ಸಲ್ಯ, ಆದರ-ಆತಿಥ್ಯಗಳಿಂದ ಸಂತಸಗೊಂಡು ತಂದೆಯೊಡನೆ ಕೋರಮಂಗಲಕ್ಕೆ ಹಿಂತಿರುಗಿದರು.

ಲಕ್ಷ್ಮಿಯು ಯಲಹಂಕದ ಅರಮನೆಯಲ್ಲಿ ಎಲ್ಲರಿಗೆ ಅಚ್ಚು ಮೆಚ್ಚಾಗಿ, ಅವರ ಪ್ರೀತಿ-ವಾತ್ಸಲ್ಯಗಳ ಪುತ್ಥಳಿಯಾದಳು. ಪ್ರತಿ ಕ್ಷಣವೂ ಅತ್ತೆಯ ಕಣ್ಣು ಮುಂದೆಯೇ ಇರಬೇಕು. ಒಂದು ಕ್ಷಣ ಆಕೆಯ ಕಣ್ಣು ತಪ್ಪಿದರೂ, ಸೊಸೆಯನ್ನು ಹುಡುಕಿಕೊಂಡು ಹೋಗುವಳು ಯುವರಾಜನಿಗೆ ಲಕ್ಷ್ಮಿಯೆಂದರೆ ಪಂಚ ಪ್ರಾಣ ಸದಾ ಆಕೆಯೊಡನೆ ಸರಸ-ಸಲ್ಲಾಪ. ಲಕ್ಷ್ಮಿ ಯನ್ನು ಒಂದು ಕ್ಷಣಕಾಲವೂ ಬಿಟ್ಟಿರಲಾರ. ರಾಜಕಾರಣಗಳಿಂದ, ಬೆಂಗಳೂರು ನಗರ ನಿರ್ಮಾಣ ಕಾರ್ಯಭಾರದಿಂದ ಆಗಾಗ ಲಕ್ಷ್ಮಿಯನ್ನು ಅಗಲಬೇಕಾಗಿತ್ತು. ರಾಜಕೀಯ ವ್ಯವಹಾರಗಳಿಂದ ಸ್ವಲ್ಪ ಕಾಲ ದೂರ ವಿರಲು ಬಯಸಿದ. ಕಾರಣ ಲಕ್ಷ್ಮಿಯ ಜತೆ ಏಕಾಂತವಾಗಿ ಕಾಲ ಕಳೆಯಲು ಇಚ್ಛಿಸಿದ್ದ. ತೀರ್ಥಯಾತ್ರೆಗೆ ಹೋಗಿ ಬರುತ್ತೇವೆಂದು ತಂದೆಯ ಅನು ಮತಿಯನ್ನು ಕೋರಿದ. ಮಗನ ದೈವಭಕ್ತಿಗೆ ಮೆಚ್ಚಿದ ಪ್ರಭುಗಳು ಸತಿ-ಪತಿ ಗಳನ್ನು ಆಶೀರ್ವದಿಸಿ. ಯಾತ್ರೆ ಹೋಗಲು ಅಪ್ಪಣೆ ನೀಡಿದರು. ಜತೆ ಯಲ್ಲಿ ಅಂಗರಕ್ಷಕರನ್ನು ಕರೆದೊಯ್ಯುವಂತೆ ಆಜ್ಞಾಪಿಸಿದರು. ಅದಕ್ಕೆ ಯುವರಾಜ ಇಷ್ಟ ಪಡದೆ, ಲಕ್ಷ್ಮಿಯನ್ನು ಅಶ್ವದ ಮೇಲೆ ಕೂಡಿಸಿಕೊಂಡು ಗಂಗರ ರಾಜಧಾನಿಯಾಗಿದ್ದ ಮಾನ್ಯಪುರಿಯತ್ತ ಹೊರಟ. ಆ ಅಶ್ವ ಬೇರೆ ಯಾವುದೂ ಆಗಿರದೆ ವೀರಣ್ಣನವರ ಭೈರವನೇ ಆಗಿತ್ತು. ಕೆಂಪೇಗೌಡರು

ಯುವರಾಜನಿಗೆ ತಿಳಿಯದಂತೆ ಒಂದು ಅಂಗರಕ್ಷಕ ದಳವನ್ನು ಅವರ ಕಾವಲಿಗೆ ಕಳುಹಿಸಿದರು. ಅಶ್ವಹೊರಡುವಾಗ ವೀರಣ್ಣ "ಎಚ್ಚರಿಕೆ ಭೈರವ, ಶತ್ರುಗಳು, ಕಳ್ಳರು, ದರೋಡೆಗಾರರು ಅಡ್ಡಗಟ್ಟಿ ಅಪಾಯವಾಗದಂತೆ ಯುವರಾಜ, ಯುವರಾಣಿಯವರನ್ನು ರಕ್ಷಿಸುವುದು ನಿನ್ನ ಭಾರ" ಎಂದಿದ್ದರು. ಭೈರವನೂ ಅದಕ್ಕೆ ಉತ್ತರವಾಗಿ ತನ್ನ ತಲೆಯನ್ನು ಆಗಲಿ ಎಂಬಂತೆ ಅತ್ತಿತ್ತ ಆಡಿಸಿತ್ತು. ಕಿವಿಗಳನ್ನು ನಿಮಿರಿಸಿ, ಕೆನೆಯುತ್ತಾ ತಾನಿದ್ದೇನೆ ಭಯ ಪಡಬೇಕಾಗಿಲ್ಲ ಎಂಬ ಭಾವನೆಯನ್ನು ಪ್ರದರ್ಶಿಸಿತ್ತು. ಯಲಹಂಕವನ್ನು ಬಿಟ್ಟು ಶರವೇಗದಲ್ಲಿ ಮುಂದೆಸಾಗಿತು ಭೈರವ. ನಿರಾಯಾಸವಾಗಿ ಮಾನ್ಯಪುರಿಯ ವಿಶಾಲ ಕೆರೆಯ ಕಟ್ಟೆಯನ್ನು ಮುಟ್ಟಿತು.

ಲಕ್ಷ್ಮಿಯು ಬಹಳ ದಿನಗಳಿಂದಲೂ ಮಾನ್ಯಪುರಿಯನ್ನು ನೋಡಬೇಕೆಂಬ ಕನಸನ್ನು ಕಾಣುತ್ತಿದ್ದಳು. ಅಜ್ಜ ಸೊಣ್ಣೇಗೌಡರು ತಮ್ಮ ಪೂರ್ವಜರಾದ ಗಂಗರಸರ ಕತೆಗಳನ್ನು ಹಲವಾರು ಸಾರಿ, ಅತಿಸ್ವಾರಸ್ಯವಾಗಿ ಲಕ್ಷ್ಮಿಗೆ ಹೇಳಿದ್ದರು. ಗಂಗರು ತಮ್ಮ ರಾಜಧಾನಿಯನ್ನು ಕಾರಣಾಂತರಗಳಿಂದ ಗಂಗವಾಡಿಯಿಂದ ಮಾನ್ಯಪುರಕ್ಕೆ ಬದಲಾಯಿಸಿದ್ದರು. ಗಂಗ ಸಾಮ್ರಾಟರಲ್ಲಿ ಪ್ರಸಿದ್ಧನೆನಿಸಿದ ಶ್ರೀಪುರುಷನು ಮಾನ್ಯಪುರಿಯನ್ನು ಬಹು ವೈಭವಯುತ ನಗರವನ್ನಾಗಿ ಮಾಡಿ, ನಾಡನ್ನು ಬಹುದಕ್ಷತೆಯಿಂದ ಆಳಿದ್ದನು. ಈತನ ಧೈರ್ಯ–ಸಾಹಸ ಗುಣಗಳನ್ನು ಮೆಚ್ಚಿ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯ ತನ್ನ ಇಬ್ಬರು ಪುತ್ರಿಯರನ್ನು ಶ್ರೀಪುರುಷನಿಗೆ ಕೊಟ್ಟು ವಿವಾಹ ಮಾಡಿದ್ದರು ಚೋಳರ, ರಾಷ್ಟ್ರಕೂಟರ ಯುದ್ಧಗಳಲ್ಲಿ ಶ್ರೀಪುರುಷನ ಕಿರಿಯ ಮಗ ದಂಡನಾಯಕನಾಗಿ ಪೌರುಷದಿಂದ ಹೋರಾಡಿ ವೀರಸ್ವರ್ಗವನ್ನು ಪಡೆದಿದ್ದನು. ತಾನು ಮಡಿದರೂ ತನ್ನ ತಂದೆಗೆ ವಿಜಯಲಕ್ಷ್ಮಿ ಮಾಲೆಯನ್ನು ಹಾಕುವಂತೆ ಹೋರಾಡಿದ್ದನು, ಶ್ರೀಪುರುಷನು ಸ್ವತಃ ಕವಿಯಾಗಿ, ಕಲಾಪೋಷಕನಾಗಿ, ಧರ್ಮ ಸಹಿಷ್ಣುವಾಗಿ ಸಕಲರನ್ನು ಸಮಾನತೆಯ ಭಾವದಿಂದ ನೋಡುತ್ತಿದ್ದನು. ಶ್ರೀಪುರುಷನ ನಂತರ 11 ಜನ ಗಂಗರಸರ 250 ವರ್ಷಗಳ ಕಾಲ ಸತತವಾಗಿ ಆಳ್ವಿಕೆ ನಡೆಸಿ ಇತಿಹಾಸದಲ್ಲಿ ಮೆರೆದು. ಕಣ್ಮರೆಯಾಗಿದ್ದರೂ. ಅವರು ನಿರ್ಮಿಸಿದ್ದ ಕೋಟೆ–ಕೊತ್ತಲುಗಳು,

ದೇವಾಲಯಗಳು, ಸಭಾಮಂಟಪಗಳು, ನರ್ತನಶಾಲೆಗಳು ಗತಕಾಲದ ಇತಿಹಾಸವನ್ನು ನೆನಪಿಗೆ ತರುತ್ತಿದ್ದುವು,

ಲಕ್ಷ್ಮಿ ಮತ್ತು ಕಿರಿಯ ಕೆಂಪೇಗೌಡರು ತಮ್ಮ ಪೂರ್ವಿಕರು ನಿರ್ಮಿಸಿದ ನಿರ್ಮಾಣಗಳನ್ನು ನೋಡುತ್ತಾ ಆನಂದಿಸುತ್ತಾ ಮುನ್ನಡೆದರು. ಇವರು ಅಲ್ಲಿಗೆ ಬರುವ ಸುದ್ದಿಯನ್ನು ಮೊದಲೇ ತಿಳಿದಿದ್ದ ಸೋಮೇಶ್ವರ ಗೌಡರು ಇವರನ್ನು ರಾಜಮರ್ಯಾದೆಯಿಂದ ಸ್ವಾಗತಿಸಿ, ಪ್ರೀತಿವಾತ್ಸಲ್ಯದಿಂದ ಆದರ ಆತಿಥ್ಯಗಳನ್ನು ಮಾಡಿ ಸತ್ಕರಿಸಿ, ಅಲ್ಲಿನ ಸ್ಮಾರಕಗಳ ಪರಿಚಯವನ್ನು ಮಾಡಿಕೊಟ್ಟರು. ಅಂದು ರಾತ್ರಿ ಆ ರಾಜದಂಪತಿಗಳು ಮಾನ್ಯಪುರಿಯಲ್ಲಿ ವಿಶ್ರಾಂತಿ ಪಡೆದು, ಸೂರ್ಯೋದಯವಾಗುತ್ತಲೇ, ಸ್ನಾನ ಸಂಧ್ಯಾವಂದನೆಗಳನ್ನು ಮಾಡಿ, ಮಾನ್ಯಪುರಿ ನಗರದೇವತೆಯ ಗುಡಿಗೆ ಹೊರಟರು. ಗಜಲಾಂಛನದ ಪೀಠದ ಮೇಲೆ ಮಂಡಿಸಿದ್ದ ದೇವಿಯು ಮಂದಹಾಸ ಬೀರುತ್ತಾ "ಹೇ, ಜಗನ್ಮಾತೆ, ಏಳು ಶತಕಗಳಿಂದ ಹೇಗೆ ಗಂಗರಸರನ್ನು ನಿನ್ನ ಕೃಪಾನುಗ್ರಹದಿಂದ ಕಾಪಾಡಿಕೊಂಡು ಬಂದೆಯೋ ಅದೇ ರೀತಿ ನಮ್ಮ ಕೆಂಪಭೂಪಾಲರ ವಂಶಜರನ್ನೂ ಕಾಪಾಡಿಕೊಂಡು ಬಾ ತಾಯೆ," ಎಂದು ಬೇಡಿಕೊಂಡಳು. ಅಲ್ಲಿಂದ ಕಪಿಲೇಶ್ವರ ದೇವಾಲಯಕ್ಕೆ ಹೋಗಿ, ಶಿವನನ್ನು ಅನನ್ಯ ಭಕ್ತಿಯಿಂದ ಪೂಜಿಸಿ, ಸಪ್ತಮಾತೃಕೆಯರನ್ನೂ ಆರಾಧಿಸಿ, ಸೋಮೇಶ್ವರ ಗೌಡರ ಅಪ್ಪಣೆ ಪಡೆದು, ಪುಣ್ಯ ತೀರ್ಥಯಾತ್ರಾ ಸ್ಥಳವಾದ ಶಿವಗಂಗೆ ಕಡೆ ಪಯಣ ಮುಂದುವರಿಯಿತು.

ಶಿವಗಂಗೆ ಋಷಿವರ್ಯರ ದಿವ್ಯತಪೋಕ್ಷೇತ್ರ. ಇಲ್ಲಿನ ಪ್ರಕೃತಿ ಸೌಂದರ್ಯ, ದೈವಿಕ ವಾತಾವರಣವನ್ನು ಮೆಚ್ಚಿದ ಅಗಸ್ತ್ಯ ಮಹರ್ಷಿಗಳು ಕೆಲವು ಕಾಲ ತಪಸ್ಸನ್ನಾಚರಿಸಿದ ಸ್ಥಳ ಶಿವಗಂಗೆ. ಶ್ರೀ ಶಂಕರಾಚಾರ್ಯರು ಶ್ರೀ ಶಾರದಾ ಮಾತೆಯನ್ನು ಹೊನ್ನಾದೇವಿರೂಪದಲ್ಲಿ ಕಂಡು, ತಪಸ್ಸು ಮಾಡಿ ಹೊನ್ನಾದೇವಿಯನ್ನು ಪ್ರತಿಷ್ಠಾಪಿಸಿದರು. ಕಣ್ವಮಹರ್ಷಿಗಳು 108 ಶಿವಲಿಂಗಳನ್ನು ಅರ್ಚಿಸಿ ಪೂಜೆ ಸಲ್ಲಿಸಿದ ಸ್ಥಳ. ಹೊಯ್ಸಳೇಶ್ವರ ವಿಷ್ಣುವರ್ಧನನ ರಾಣಿ ಶಾಂತಲಾದೇವಿ ಪ್ರಾಣಾರ್ಪಣೆ ಮಾಡಿದ ಕ್ಷೇತ್ರ ಶಿವಗಂಗೆ.

ಯಲಹಂಕ ನಾಡಿನ ಯುವರಾಜ-ಯುವರಾಣಿಯರು ಅಗಸ್ತ್ಯ ತೀರ್ಥ

ದಲ್ಲಿ ಸ್ನಾನ ಮಾಡಿದರು. ಶ್ರೀ ಗಂಗಾಧರೇಶ್ವರ–ಹೊನ್ನಾದೇವಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿದರು. ಈ ಸ್ಥಳ ಕೆಲವು ಕಾಲದ ಹಿಂದೆ ಯಲಹಂಕ ಭೂಪಾಲಕರಿಗೆ ಸೇರಿದ್ದಾಗ ಇಲ್ಲಿ ಅನೇಕ ಕಟ್ಟಡಗಳನ್ನು ನಿರ್ಮಿಸಿದ್ದರು. ಇವನ್ನು ನೋಡಿ ಕಡಿದಾದ ಬೆಟ್ಟವನ್ನು ಹತ್ತಿ, ಸುತ್ತಲೂ ಕಾಣುವ ರಮ್ಯ ಪ್ರಕೃತಿಯನ್ನು ವೀಕ್ಷಿಸಿದರು. ಕಣ್ಣು ಹಾಯ್ದಷ್ಟೂ, ಸುಂದರ–ಮನೋಹರ ದೃಶ್ಯ–ಸಾವನದುರ್ಗ, ದೇವರಾಯನದುರ್ಗ, ಭೈರವದುರ್ಗ, ನಂದಿದುರ್ಗ ಇತ್ಯಾದಿ ಗಿರಿಗಳ ಭವ್ಯನೋಟ, ತುಂಬಿದ ಕೆರೆ-ಕೊಳಗಳು, ಹಚ್ಚಹಸರಿನ ಬೆಳೆಗಳಿಂದ ಕಂಗೊಳಿಸುತ್ತಿದ್ದ ಹೊಲ, ಗದ್ದೆ, ತೋಟಗಳು, ಲಕ್ಷ್ಮಿಯು ಈ ಸೌಂದರ್ಯವನ್ನು ಸವಿದು ಹಾಗೆಯೇ ಸ್ವಲ್ಪ ಕಣ್ಮುಚ್ಚಿದಳು. ಆಕೆಯ ಸ್ಮೃತಿ ಪಟಲದಲ್ಲಿ ಹೊಯ್ಸಳ ಸಾಮ್ರಾಜ್ಯದ ವೈಭವ, ಶಾಂತಲಾದೇವಿಯ ಆತ್ಮಾರ್ಪಣೆ ಇತ್ಯಾದಿ ಘಟನೆಗಳು ಹಾದು ಹೋದುವು. ತಕ್ಷಣ ಕಣ್ಣುತೆರೆಯಲು, ತಂಗಾಳಿಯು ಆಕೆಯ ಸೆರಗನ್ನು ಹಾರಾಡಿಸುತ್ತಿತ್ತು. ಆಕೆಯ ಸುಂದರ ಮುಖಮಂಡಲದ ಮೇಲೆ ಮುಂಗುರುಳು ಲಾಸ್ಯವಾಡುತ್ತಿತ್ತು. ಅರ್ಧತೆರೆದ ನಯನಗಳು, ಕೆಂದುಟಿಗಳು ಆಕೆಯ ಸೊಬಗಿಗೆ ಮೆರುಗುಕೊಟ್ಟು, ನೋಡಿದಷ್ಟು ಮತ್ತೊಮ್ಮೆ ನೋಡಬೇಕೆನಿಸುವಂತಿತ್ತು. ಯುವರಾಜ ಆಕೆಯ ರೂಪಕ್ಕೆ ಮಾರುಹೋಗಿದ್ದ. ಯುವರಾಜನು ಪ್ರೇಮಪಾಶವನ್ನು ತಡೆಯಲಾರದೆ ತನ್ನ ದೇವಿಯನ್ನು ಬಾಚಿ ತಬ್ಬಿಕೊಂಡ. ಕಣ್ಣು ತೆರೆದ ಲಕ್ಷ್ಮಿ ತನ್ನ ಪತಿಯ ಆಲಿಂಗನದ ಬಂಧನದಿಂದ ತಪ್ಪಿಸಿಕೊಂಡು ಶಾಂತೇಶ್ವರ ದೇವಾಲಯ ಕಡೆ ಹೊರಟು ಮತ್ತೊಮ್ಮೆ ಶಾಂತಲಾದೇವಿಯನ್ನೂ ನೆನೆದು ಮನದಲ್ಲಿಯೇ ಆಕೆಗೆ ನಮಿಸಿದಳು. ಬೆಟ್ಟವನ್ನು ಇಳಿಯುತ್ತಾ ಪಾತಾಳಗಂಗೆಯಲ್ಲಿ ದಣಿವನ್ನಾರಿಸಿಕೊಂಡರು. ಶಿವಗಂಗೆಯ ದರ್ಶನವಾದ ಮೇಲೆ ಅವರು ಮಧುಗಿರಿಯತ್ತ ಪಯಣಿಸಿದರು.

ಲಕ್ಷ್ಮಿಯು ಮಧುಗಿರಿಯ ಬಗ್ಗೆ ತನ್ನ ಅಜ್ಜನಿಂದ ಕತೆಗಳನ್ನು ಕೇಳಿದ್ದಳು. ರಣಭೈರೇಗೌಡರು ಆವತಿಗೆ ಬಂದು ನೆಲಸಿದ ಮೇಲೆ, ಪ್ರಪ್ರಥಮವಾಗಿ ಸ್ವಾಧೀನಪಡಿಸಿಕೊಂಡ ದುರ್ಗವೇ ಮಧುಗಿರಿ. ಆ ಪ್ರದೇಶದಲ್ಲಿ ತಮ್ಮ ಪೂರ್ವಿಕರಾದ ವೀರಣ್ಣಗೌಡ, ಭದ್ರೇಗೌಡರು ನಡೆಸಿದ ಸಾಹಸದ ಘಟನೆಗಳನ್ನು ದಂಪತಿಗಳು ಜ್ಞಾಪಿಸಿಕೊಂಡರು. ಅಲ್ಲಿ ಒಂದು ದಿನದ

ವಿಶ್ರಾಂತಿ ಪಡೆದ ನಂತರ, ಮಿಡಿಗೇಸಿಗೆ ಭೇಟಿ ಕೊಟ್ಟು ಅಲ್ಲಿಂದ ಮುಂದೆ ಪುರಾಣ ಕ್ಷೇತ್ರ ಹಾಗೂ ಇತಿಹಾಸ ಪ್ರಸಿದ್ಧ ನಂದೀದುರ್ಗಕ್ಕೆ ಹೊರಟರು. ಭೈರವನು ನಿರಾಯಾಸವಾಗಿ ಯುವರಾಜ ದಂಪತಿಗಳನ್ನು ಅವರು ಇಚ್ಛಿಸಿದ ಕಡೆ ಒಯ್ಯುತ್ತಿತ್ತು.

ವನ್ಯ ಸಂಪತ್ತಿನಿಂದ ತುಂಬಿ ಉತ್ತರ-ದಕ್ಷಿಣವಾಗಿ ಹಬ್ಬಿರುವ ನಂದಿ ಪರ್ವತ ಸಾಲನ್ನು ನೋಡುತ್ತಲೇ ಲಕ್ಷ್ಮಿಗೆ ಬಹಳ ಸಂತೋಷವಾಯಿತು. ನಂದಿ ಪಂಚಗಿರಿಗಳ ಪಂಚನದಿಗಳ ಪವಿತ್ರ ಕ್ಷೇತ್ರ-ಆ ಪರ್ವತ ಸಾಲಿನ ತಪ್ಪಲಿನಲ್ಲಿಯೇ ರಣಭೈರೇಗೌಡರು ಆಶ್ರಯವನ್ನು ಪಡೆದಿದ್ದುದು. ನಂದಿ ಬೆಟ್ಟದಲ್ಲಿ ಹುಟ್ಟಿ ಹರಿಯುವ ಪಾಲಾರ್ ನದಿ ದೇವತೆಯೇ ದೊಡ್ಡಾಂಬೆಯ ಭಕ್ತಿ-ಪ್ರಾರ್ಥನೆಗಳಿಗೆ ಮೆಚ್ಚಿ ದಾರಿ ಬಿಟ್ಟುಕೊಟ್ಟು ರಣಭೈರೇಗೌಡರ ಪರಿವಾರಕ್ಕೆ ರಕ್ಷಣೆ ನೀಡಿದ್ದಿದ್ದು.

ಭೈರವ ತನ್ನ ಒಡೆಯರನ್ನು ಉತ್ಸಾಹದಿಂದ ಹೊತ್ತು, ನಂದಿ ಬೆಟ್ಟವನ್ನು ಹತ್ತಿ ಅರ್ಕಾವತಿ ನದಿ ಹುಟ್ಟುವ ಬಳಿ ಬಂದು ನಿಂತಿತು, ದಂಪತಿಗಳು ಅರ್ಕಾವತಿಗೆ ನಮಸ್ಕರಿಸಿ, ಆದರ ಪವಿತ್ರ ನೀರನ್ನು ಆಪೋಷಣೆ ಮಾಡಿ ತಮ್ಮ ದಣಿವನ್ನು ಆರಿಸಿಕೊಂಡರು. ಭೈರವನ ದಾಹದ ಇಂಗಿತವನ್ನು ಅರಿತು ಅದು ತನ್ನ ಬಾಯಾರಿಕೆಯನ್ನು ತೀರಿಸಿಕೊಳ್ಳುವಂತೆ ಆಜ್ಞೆ ನೀಡಿದರು. ಅದು ತಕ್ಷಣವೇ ಅರ್ಕಾವತಿಯಲ್ಲಿ ಇಳಿದು ಮನಸಾರೆ ನೀರನ್ನು ಕುಡಿದು ದಾಹವನ್ನು ತೀರಿಸಿಕೊಂಡಿತು.

ಯುವರಾಜರು ನಂದಿಕ್ಷೇತ್ರದ ಮಹಿಮಾ ವರ್ಣನೆಯನ್ನು ತಮ್ಮ ಕುಲ ಪುರೋಹಿತರಾದ ಸುಬ್ಬಾಯರಿಂದ ಕೇಳಿದ್ದರು. ಶ್ರೀಯೋಗ ನಂದೀಶ್ವರನ ದರ್ಶನಕ್ಕಾಗಿ ತುಟ್ಟ ತುದಿಯಲ್ಲಿರುವ ಪ್ರಾಚೀನ ದೇವಾಲಯಕ್ಕೆ ಅವರಿಬ್ಬರೂ ಬಂದರು. ಭೈರವನನ್ನು ಸ್ವಚ್ಛಂದವಾಗಿ ಮೇಯಲು ಬಿಟ್ಟರು. ಇವರು ಅಲ್ಲಿಗೆ ಬರುವ ಸಂಗತಿಯನ್ನು ಅಂಗರಕ್ಷಕರು ಮೊದಲೇ ತಿಳಿಸಿದ್ದರು. ದೇವಾಲಯದ ಬಳಿ ಇದ್ದ ಸಾಧುಸಂತರು, ಅರ್ಚಕರು, ಅರ್ಚಕ ಕುಟುಂಬದವರು ಇವರನ್ನು ಗೌರವದಿಂದ ಸ್ವಾಗತಿಸಿದರು. ಯುವದಂಪತಿಗಳು ಶ್ರೀಯೋಗ ನಂದೀಶ್ವರ ಸ್ವಾಮಿಯನ್ನು ಭಕ್ತಿಯಿಂದ ಭಜಿಸಿ, ಪೂಜೆ ಸಲ್ಲಿಸಿದರು. ಬೆಟ್ಟದ ರಮಣೀಯ ಅರಣ್ಯಧಾಮದಲ್ಲಿ ಕೈ ಕೈಹಿಡಿದು ವಿಹರಿಸಿ

ವಿಶ್ರಾಂತಿ ಪಡೆದರು. ಲಕ್ಷ್ಮಿಯನ್ನು ಕುರಿತು "ನೋಡು ಪ್ರಿಯೆ, ಸಹಸ್ರ ವರ್ಷಗಳ ಹಿಂದೆ ಈ ನಂದೀದುರ್ಗವು ಗಂಗರಸರ ರಕ್ಷಣಾದುರ್ಗವಾಗಿತ್ತು. ಗಜ ಲಾಂಛನದ ಅವರ ವಿಜಯ ಪತಾಕೆ ಈ ಬೆಟ್ಟದ ತುದಿಯಿಂದ ಹಾರಾಡುತ್ತಾ ನಮ್ಮವರ ಸಾಹಸದ ಕತೆಗಳನ್ನು ವಿಶ್ವಕ್ಕೇ ಸಾರುತ್ತಿತ್ತು. ಅದೋ ಆ ಪೂರ್ವ-ದಕ್ಷಿಣದಲ್ಲಿ ಕಾಣುವ ಪ್ರದೇಶದಲ್ಲಿಯೇ ನಮ್ಮ ಮೂಲ ಪುರುಷರಾದ ರಣಭೈರೇಗೌಡರು 'ಆವತಿ ನಾಡು' ರಾಜ್ಯವನ್ನು ಸ್ಥಾಪಿಸಿದ್ದು. ಆ ದೂರದಲ್ಲಿ ಕಾಣುವ ಗುಡ್ಡದಲ್ಲಿಯೇ ದೊಡ್ಡಾಂಬೆ ನಮ್ಮ ಕುಲದೇವತೆಯಾದ ಕೆಂಪಾಂಬೆಯಲ್ಲಿ ಐಕ್ಯವಾದುದು" ಎಂದು ಯುವರಾಜ ವರ್ಣಿಸಿದ. ಬೆಟ್ಟದ ಸುತ್ತಲೂ ಕಣ್ಣು ಹಾಯಿಸಿದಷ್ಟೂ ಗ್ರಾಮಗಳು, ಕೆರೆಗಳು, ಹೊಲ ಗದ್ದೆಗಳು ಕಾಣಿಸುತ್ತ ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತಿದ್ದುವು. ನಂದಿಗ್ರಾಮವನ್ನು ತೋರಿಸುತ್ತಾ ಬೆಟ್ಟದ ಮೇಲಿಂದ ಪುಟ್ಟದಾಗಿ ಕಾಣುತ್ತಿದ್ದ ಶ್ರೀ ಭೋಗನಂದೀಶ್ವರ ದೇವಾಲಯದ ಕಡೆ ಆಕೆಯ ಗಮನ ಸೆಳೆದು, "ನಿನ್ನ ಇಷ್ಟದೇವರಾದ ಶಿವನು ಶ್ರೀಭೋಗನಂದೀಶ್ವರನಾಗಿ ಅಲ್ಲಿ ನೆಲೆಸಿ, ಭೋಗಿಯಾಗಿ ಅದೇ ಕಾಲದಲ್ಲಿ ಯೋಗಿಯಾಗಿ ಇದ್ದಾನೆ" ಎಂದನು.

ಸರಳ ಜೀವಿಗಳೂ, ಭಗವದ್ ಭಕ್ತರೂ, ಆಧ್ಯಾತ್ಮಿಗಳೂ ಆದ ಸಾಧು ಸಂತರು, ಮುನಿ ಪುಂಗವರನ್ನು ಕಂಡು ಲಕ್ಷ್ಮಿಯೂ ಅವರಲ್ಲಿ ಒಬ್ಬಳಾದಳು. ವಿವಿಧ ಫಲ-ಪುಷ್ಪಗಳಿಂದ ಕೂಡಿದ ಮರಗಳು, ಶ್ರೀಗಂಧದ ಮರಗಳಿಂದ ಹೊಮ್ಮುತ್ತಿದ್ದ ಸೌರಭ, ತಂಪಾದ ಗಾಳಿ, ಸುಮಧುರ ವಾತಾವರಣ, ಕೈಗೆ ಎಟುಕುವಂತೆ ವಿವಿಧ ರೂಪಗಳನ್ನು ತಳೆದು ಚಲಿಸುತ್ತಿದ್ದ ಮೋಡಗಳು, ವಿವಿಧ ಪಕ್ಷಿಗಳ ನಿನಾದ, ಪುಷ್ಪದಿಂದ ಪುಷ್ಪಕ್ಕೆ ಹಾರುತ್ತ, ಮಧುಪಾನ ಮಾಡುತ್ತ, ಝೇಂಕಾರದಿಂದ ಹಾರಾಡುತ್ತಿದ್ದ ದುಂಬಿಗಳು-ಇಂತಹ ಅಪೂರ್ವ ವಾತಾವರಣದಲ್ಲಿ ಪ್ರಕೃತಿ ಮಾತೆಯ ಸೊಬಗನ್ನು ಸವಿಯುತ್ತಾ ಅಗಸ್ತ್ಯ ಪೀಠದ ಬಳಿ ಕುಳಿತಿದ್ದರು. ಕ್ಷೇತ್ರ ಮಹಿಮೆ ಲಕ್ಷ್ಮಿಗೆ ನಿದ್ರೆಯ ಜೊಂಪು ಹತ್ತುವಂತೆ ಮಾಡಿತು.

ಲಕ್ಷ್ಮಿ ನಾರು ಬಟ್ಟೆಗಳನ್ನು ತೊಟ್ಟಿದ್ದಾಳೆ. ಹಣೆಗೆ ವಿಭೂತಿ-ಕುಂಕುಮಗಳನ್ನು ಧರಿಸಿದ್ದಾಳೆ. ಆಕೆಯ ಕೊರಳನ್ನು ರುದ್ರಾಕ್ಷಿಮಾಲೆ ಅಲಂಕರಿಸಿ, ಚಿನ್ನದ ಬಣ್ಣದ ಜಿಂಕೆಯೊಂದು ಈಕೆ ಕುಳಿತಿರುವ ಕೊಳದ ಬಳಿ

ಯಲ್ಲೆ ಗರುಕೆಯ ಚಿಗುರನ್ನು ಹರುಷದಿಂದ ಮೇಯುತ್ತಿದೆ. ಆಶ್ರಮದ ಋಷಿಗಳು ವೇದ ಘೋಷಗಳನ್ನು ಮಾಡುತ್ತಿದ್ದಾರೆ. ಉಪನಿಷತ್ ಮಂತ್ರ ಗಳ ಪಠನ ಕೇಳಿ ಬರುತ್ತಿದೆ. ಲಕ್ಷ್ಮಿ ತನ್ನ ಕಾಲುಗಳನ್ನು ಕೊಳದ ನೀರಿ ನಲ್ಲಿ ಇಳಿಬಿಟ್ಟಿದ್ದಾಳೆ. ಆಕೆಯ ಸ್ವರ್ಣಮಯ ಪಾದಗಳನ್ನು ಮೀನುಗಳು ಚುಂಬಿಸುತ್ತಿವೆ. ಕೊಳದಲ್ಲಿ ಅರಳಿರುವ ಕಮಲಗಳು ಶಿವನ ಶಿರವನ್ನು ಅಲಂಕರಿಸಲು ಸಿದ್ಧವಾಗಿವೆ. ಹಂಸ ಪಕ್ಷಿಗಳು ಪರಸ್ಪರ ಪ್ರೇಮ ಸಲ್ಲಾಪ ಮಾಡುತ್ತಿವೆ. ನವಿಲೊಂದು ಗರಿಬಿಚ್ಚಿ ನರ್ತಿಸುತ್ತಿದೆ. ದಂಡ-ಕಮಂಡಲ ಗಳನ್ನು ಹಿಡಿದು ಮುನಿಪುಂಗವನು"ಪೂಜೆಗೆ ವೇಳೆಯಾಯಿತು ಲಕ್ಷ್ಮೀ"ಎಂದು ಕರೆದಂತೆ ವಾಣಿ ಕೇಳಿ ಬಂದಿದೆ. ಬೆಚ್ಚಿದ ಲಕ್ಷ್ಮಿ ಕನಸಿನಿಂದ ಎಚ್ಚೆತ್ತು ಎದುರಿಗೆ ತನ್ನನ್ನೇ ಎವೆಯಿಕ್ಕದೆ ನೋಡುತ್ತಾ ಕುಳಿತಿದ್ದ ಪತಿಯನ್ನು ನೋಡಿ ಅಚ್ಚರಿ ಪಟ್ಟಳು. ಕನಸಿನಲ್ಲಿ ಯುವರಾಜನೂ ಮುನಿಪುಂಗವನಂತೆ ಕಾಣಿಸಿ ಕೊಂಡಿದ್ದ. "ಏನು ಲಕ್ಷ್ಮೀ, ಬಹಳ ಯೋಚಿಸುತ್ತಿರುವೆ ! ಯಲಹಂಕಕ್ಕೆ ಹೋಗೋಣವೆ ?" ಎಂದ ಯುವರಾಜ.

ಲಕ್ಷ್ಮಿ "ಈಗಲೇ ವಾಪಸಾಗುವುದು ಬೇಡ, ಪ್ರಿಯ. ಅರ ಮನೆಯ ಸಿರಿಸಂಪದಗಳು ಕತ್ತಿಯ ಅಲಗಿನ ಮೇಲೆ ಇದ್ದಂತೆ. ರಾಜ್ಯ ದಾಹದ ನೆಪದಲ್ಲಿ, ಧರ್ಮಗಳ ನೆಪದಲ್ಲಿ ನಡೆಯುತ್ತಿರುವ ರಕ್ತಪಾತ-ಯುದ್ಧ ಗಳು ನಾಗರಿಕತೆಯ ನಾಶಕ್ಕೆ ಕಾರಣಗಳಾಗಿವೆ. ಸಿರಿ-ಸಂಪದಗಳು ಕ್ಷಣಿಕ, ಈ ಶಾಂತ ವಾತಾವರಣದಲ್ಲಿ, ಋಷಿಪುಂಗವರ ಮಧ್ಯದಲ್ಲಿ ನಾರುಮಡಿ ಗಳನ್ನುಟ್ಟು ಭಕ್ತಿಯುತ ಜೀವನವನ್ನು ಕಳೆದು, ಮುಕ್ತಿಯನ್ನು ಸಾಧಿಸಿದರೆ ಅದೇ ಶಾಶ್ವತ. ಮಹಾ ಪತಿವ್ರತೆಯರಾದ ಸತಿ ಅನುಸೂಯ, ಸಾವಿತ್ರಿ ಮುಂತಾದವರು ಇಂತಹ ಕಾನನಗಳ ಜೀವನದಿಂದಲ್ಲವೆ ಪುರಾಣ ಪ್ರಸಿದ್ಧವಾದುದು ? ಎಂದು ಅನುಭವಪೂರ್ಣ ವಿರಾಗಿಣಿಯಂತೆ ನುಡಿ ದಳು. ಈ ವೈರಾಗ್ಯ ನುಡಿಗಳನ್ನು ಕೇಳಿದ ಯುವರಾಜ ಗರಬಡಿದವ ನಂತಾದ.

ಲಕ್ಷ್ಮಿಯು ದೇವಾಲಯಗಳಲ್ಲಿ ದೇವರ ಮುಂದೆ ನಿಂತು ಧ್ಯಾನಮಗ್ನ ಳಾದಾಗ ಆಗಾಗ ಭಾವಪರವಶಳಾಗುತ್ತಿದ್ದಳು. ಇದನ್ನು ಕಂಡ ಯುವ

ರಾಜನ ಮನಸ್ಸಿಗೆ ಲಕ್ಷ್ಮಿ ತನ್ನಿಂದ ಎಲ್ಲಿ ದೂರವಾಗುವಳೋ ಎಂದೆನಿಸುತ್ತಿತ್ತು. ಇಂದು ನಂದಿ ಪವಿತ್ರ ಕ್ಷೇತ್ರದಲ್ಲಿ ಆಕೆಯ ಮನ ಪೂರ್ಣ ವೈರಾಗ್ಯದತ್ತ ಹರಿದಾಗ ಯುವರಾಜ ಭಯಚಕಿತನಾದನು. ಲಕ್ಷ್ಮಿಯನ್ನು ಹಾಗೂ ಹೀಗೂ ಸಮಾಧಾನಗೊಳಿಸಿ, ನಂದಿ ಗ್ರಾಮಕ್ಕೆ ಶ್ರೀ ಭೋಗ ನಂದೀಶ್ವರ ಸ್ವಾಮಿಯ ದರ್ಶನಕ್ಕೆ ಕರೆದೊಯ್ದನು. ಅಲ್ಲಿನ ಗೌಡರು ಇವರನ್ನು ಆದರದಿಂದ ಸ್ವಾಗತಿಸಿ ಸತ್ಕರಿಸಿದರು. ಶ್ರೀ ಭೋಗನಂದೀಶ್ವರ ದೇವಾಲಯದಲ್ಲಿ ಶ್ರೀ ಭೋಗನಂದಿಶ್ವರ ಸ್ವಾಮಿಗೆ ಭಕ್ತಿಯಿಂದ ಪೂಜೆ ಸಲ್ಲಿಸಿ, ಗುಡಿಗೆ ಪ್ರದಕ್ಷಣೆ ಮಾಡಿ, ಪ್ರಸನ್ನ ಪಾರ್ವತಿ ದೇವಿಯ ದರ್ಶನ ಪಡೆದು ಆಕೆಯನ್ನು ಪ್ರಾರ್ಥಿಸಿ, ದೇವಾಲಯದ ಕಲಾ ವೈಭವವನ್ನು ಕಂಡು ಸಂತೋಷ ಪಟ್ಟುಕೊಂಡು, ಪೂರ್ವಿಕರ ಇತಿಹಾಸ ಪ್ರಸಿದ್ಧ ಸ್ಥಳವಾದ ಆವತಿಗೆ ಹೊರಟರು, ಅಲ್ಲಿನ ನಿವಾಸಿಗಳು ಯಲಂಹಂಕ ಭೂಪಾಲರ ಪುತ್ರ ಮತ್ತು ಸೊಸೆಯರನ್ನು ಪ್ರೀತಿ–ಅಕ್ಕರೆಗಳಿಂದ ಕಂಡರು.

ಅಂದು ಶುಕ್ರವಾರ. ರೈತರೆಲ್ಲಾ ತಮ್ಮ ವ್ಯವಸಾಯ ಕೆಲಸಗಳಲ್ಲಿ ತೊಡಗಿದ್ದಾರೆ. ಕೆಲವು ಹುಡುಗರು ದನಕರುಗಳನ್ನು ಬೆಟ್ಟ–ಗುಡ್ಡಗಳ ಕಡೆ ಮೇಯಿಸಲು ಹೊಡೆದುಕೊಂಡು ಹೋಗುತ್ತಿದ್ದಾರೆ. ಗದ್ದೆಗಳಲ್ಲಿ ಕಳೆ ತೆಗೆಯುತ್ತಿದ್ದ ಆವತಿ ಹೆಣ್ಣು ಮಕ್ಕಳು, ದೊಡ್ಡಾಂಬೆಯ ಕತೆಯನ್ನು ಜಾನಪದ ರೂಪದಲ್ಲಿ ಇಂಪಾಗಿ ಹಾಡುತ್ತಿದ್ದಾರೆ. ಲಕ್ಷ್ಮಿಯು ಹಳ್ಳಿಯ ಹೊಲಗದ್ದೆಗಳ ಸಹಜ ಸೌಂದರ್ಯಕ್ಕೆ ಮಾರುಹೋಗಿದ್ದಾಳೆ. ಹಳ್ಳಿಯವರ ಹಾಡುಗಳನ್ನು ಆಲಿಸುತ್ತಾ ನಿಂತುಬಿಟ್ಟಳು. ಕೋರಮಂಗಲದ ಮನೆ ರೈತ ಕೆಲಸಗಳ ದೃಶ್ಯಗಳು ಮನದಲ್ಲಿ ಮೂಡಿ, ತನ್ನ ಕಪಿಲೆ, ರಾಮ–ಲಕ್ಷ್ಮಣ ಹೋರಿಗಳು, ಪ್ರೀತಿಯ ಅಜ್ಜ, ತಾಯಿ, ಅಪ್ಪಾಜಿ ಇವರು ಜ್ಞಾಪಕಕ್ಕೆ ಬಂದು ಅವರು ಹೇಗಿದ್ದಾರೋ ಎಂಬ ಯೋಚನೆಯಲ್ಲಿ ತೊಡಗಿದಳು. ಭೈರವನನ್ನೇರಿ ಬಂದ ರಾಜಕುಮಾರ ಲಕ್ಷ್ಮಿಯ ಬಳಿಗೆ ಬಂದು, ಆಕೆಯನ್ನು ತಿಮ್ಮರಾಯಸ್ವಾಮಿ ಬೆಟ್ಟದ ಕಡೆ ಕರೆದೊಯ್ದನು. ದಾರಿಯಲ್ಲಿ ತನ್ನ ಪೂರ್ವಿಕರು ಕಟ್ಟಿದ ಶಿಥಿಲಾವಸ್ಥೆಯಲ್ಲಿದ್ದ ಕೋಟೆ–ಕೊತ್ತಲುಗಳನ್ನು ಕಂಡು ಮರುಗಿದನು. ಇಬ್ಬರೂ ತಿಮ್ಮರಾಯಸ್ವಾಮಿಯನ್ನು ಅನನ್ಯ ಭಕ್ತಿಯಿಂದ

ಪೂಜಿಸಿದರು. ಆ ಸ್ಥಳ ಪೂರ್ವದಲ್ಲಿ ಗೌತಮ ಮಹರ್ಷಿಗಳು ತಪ್ಪಸ್ಸನ್ನು ಆಚರಿಸಿದ ಪವಿತ್ರ ಸ್ಥಳವೆಂದು ಲಕ್ಷ್ಮಿಗೆ ತಿಳಿಸಿದ. ಹಿಂದಿರುಗುವಾಗ, ತನ್ನ ಪೂರ್ವಿಕರಿಗೆ ಅಪಾರ ಭೂ ನಿಧಿ ಸಿಕ್ಕಿದ ಸ್ಥಳವನ್ನು ತೋರಿಸಿದ. ಅನಂತರ ನೇರವಾಗಿ ಆವತಿ ಗುಡ್ಡವನ್ನು ಏರಿದರು. ಹೆಡೆಯಾಕಾರದ ಬೃಹತ್ ಬಂಡೆಯ ನೆರಳಲ್ಲಿ ಕುಳಿತರು. ಆಯಾಸದಿಂದ ಬಳಲಿದ್ದ ಯುವರಾಜ ಅಲ್ಲಿಯೇ ನಿದ್ರಿಸಿಬಿಟ್ಟ. ಅದೆಷ್ಟು ಹೊತ್ತು ನಿದ್ರಿಸಿದನೋ, ತನಗೆ ಅರಿವಾಗಲಿಲ್ಲ, ಎಚ್ಚೆತ್ತು ನೋಡಲು ಲಕ್ಷ್ಮಿ ಅಲ್ಲಿರಲಿಲ್ಲ. ಲಕ್ಷ್ಮೀ, ಲಕ್ಷ್ಮೀ ಎಂದು ಕೂಗಿದ. ಉತ್ತರ ಬರಲಿಲ್ಲ. ಗುಡ್ಡವನ್ನೆಲ್ಲಾ ಸುತ್ತಿ ಹುಡುಕಾಡಿದ. ಲಕ್ಷ್ಮಿ ಕಾಣಲಿಲ್ಲ. ಗುಡ್ಡವನ್ನು ಮತ್ತೆ ಏರಿ, ಭೈರವಾ ಎಂದು ಕೂಡಿದ. ಅದು ಕೆನೆಯುತ್ತಾ ಓಡಿ ಬಂದು ಒಡೆಯನ ಬಳಿ ನಿಂತಿತು.

"ಭೈರವಾ, ಲಕ್ಷ್ಮಿಯನ್ನು ನೋಡಿದೆಯಾ? ಲಕ್ಷ್ಮಿ ಎಲ್ಲಿ ಹೋದಳು?" ಎಂದು ಕೇಳಿದ. ಮೂಕ ಪ್ರಾಣಿಗೆ ಇದು ಅರ್ಥವಾಯಿತೇನೊ, ಶರವೇಗದಿಂದ ಓಡಿ ಗುಡ್ಡವೆಲ್ಲಾ ಸುತ್ತಾಡಿ ಹುಡುಕಾಡಿತು. ಭೈರವ ದೂರದಿಂದ ಲಕ್ಷ್ಮಿಯನ್ನು ಕಂಡಿತೇನೋ ಸಂತಸದಿಂದ ಯುವರಾಜನಿದ್ದೆಡೆಗೆ ಓಡಿತು. "ಬಾ, ಲಕ್ಷ್ಮಿ ಇರುವ ಕಡೆ ಹೋಗೋಣ" ಎನ್ನುವಂತೆ ತಲೆ ಆಡಿಸಿತು. ಯುವರಾಜ ಅದನ್ನು ಹಿಂಬಾಲಿಸಿದ. ಸ್ವಲ್ಪ ದೂರದಲ್ಲಿ ದೇವಿ ಕೆಂಪಾಂಬೆಯ ಮುಂದೆ ಕಣ್ಣು ಮುಚ್ಚಿ ಧ್ಯಾನಮಗ್ನಳಾಗಿದ್ದ ಲಕ್ಷ್ಮಿಯನ್ನು ಕಂಡು ಹೋದ ಪ್ರಾಣ ಬಂದಂತಾಯಿತು. ಭೈರವನನ್ನಪ್ಪಿ "ನಿನಗೆ ಧನ್ಯವಾದಗಳಪ್ಪ" ಎಂದು ಆಲಿಂಗಿಸಿ ಕತ್ತನ್ನು ನೇವರಿಸಿದ. ಲಕ್ಷ್ಮಿಯ ಬಳಿಗೆ ಹೋಗಿ ಮೃದು ಧ್ವನಿಯಲ್ಲಿ "ಲಕ್ಷ್ಮೀ" ಎಂದು ಕರೆದ. ಭಾವ ಪರವಶಳಾಗಿ ಧ್ಯಾನ ಲೋಕದಲ್ಲಿ ಲೀನವಾಗಿದ್ದ ಲಕ್ಷ್ಮಿಗೆ ಈತನ ಕರೆ ಕೇಳಿಸಲಿಲ್ಲ. ಲಕ್ಷ್ಮಿಯ ಭುಜಗಳನ್ನು ಅಲುಗಾಡಿಸಿ ಮತ್ತೆ ಕರೆದ. ಕಣ್‌ತೆರೆದು , ಪತಿಯನ್ನು ನೋಡಿ" ನಿಮ್ಮ ನಿದ್ರೆ ಆಯಿತೇ" ಎಂದು ಕೇಳಿ ಲಕ್ಷ್ಮಿ ಸುತ್ತಲೂ ನೋಡಿದಳು. "ನಾನೇಕೆ ಇಲ್ಲಿದ್ದೇನೆ ?" ಎಂದು ಕೇಳಿದಳು. "ನೀನಿಲ್ಲಿಗೆ ಬಂದ ನೆನಪಿಲ್ಲವೆ ?" ಎಂದು ಯುವರಾಜ ಕೇಳಿದ, ಆಗ ಲಕ್ಷ್ಮಿ "ಇಲ್ಲ ಸ್ವಾಮಿ, ನೀವು ನಿದ್ರಿಸುತ್ತಿದ್ದಿರಿ. ನನಗೂ ನಿದ್ರೆಯ ಜೊಂಪು ಹತ್ತಿತು. ಕಣ್ ಮುಚ್ಚಿ ಅರ್ಧ ನಿದ್ರೆಯಲ್ಲಿದ್ದೆ. ಝುಣ್, ಝುಣ್ ಎಂಬ ಹೆಜ್ಜೆಯ ಸದ್ದು

ಕೇಳಿಸಿತು. ಪಕ್ಕಕ್ಕೆ ತಿರುಗಿ ನೋಡಿದೆ. ದೇವತಾಮೂರ್ತಿಯಂತಿದ್ದ ಸ್ತ್ರೀ ಯನ್ನು ಕಂಡೆ. ಆಕೆ ಕೇಸರಿ ಬಣ್ಣದ ಜರತಾರಿ ಸೀರೆಯನ್ನು ಉಟ್ಟಿದ್ದಳು. ಹಣೆಯಲ್ಲಿ ವಿಭೂತಿ-ಕುಂಕುಮಗಳನ್ನು ಧರಿಸಿದ್ದಳು. ನನ್ನನ್ನು ಕಂಡು ಮಂದಹಾಸ ಬೀರುತ್ತಾ "ನನ್ನ ಗುರುತು ಸಿಗಲಿಲ್ಲವೇ ಮಗಳೆ ?" ಎಂದು ಹತ್ತಿರಕ್ಕೆ ಬಂದಳು. ತಲೆಯನ್ನು ನೇವರಿಸಿ ಜತೆಯಲ್ಲಿ ಬರುವಂತೆ ಸಂಜ್ಞೆ ನೀಡಿದಳು. ನನಗೆ ಅರಿವಿಲ್ಲದೆಯೇ ಆಕೆಯನ್ನು ಹಿಂಬಾಲಿಸಿದೆ. ಹೋಗುತ್ತಾ ನನ್ನ ನಿನ್ನ ತ್ಯಾಗ, ಬಲಿದಾನಗಳು ಗೌಡ ಕುಲಕ್ಕೆ ಭೂಷಣ ಪ್ರಾಯವಾಗು ವುದೆಂದಳು. ಅಷ್ಟೇ ನನಗೆ ನೆನಪಿರುವುದು. ನೀವು ಎಚ್ಚರಿಸಿದಾಗ ನಾನಿಲ್ಲಿ ಕುಳಿತಿರುವುದು ಅರಿವಾಯಿತು" ಎಂದಳು.

ಲಕ್ಷ್ಮಿಯು ಕುಳಿತಿದ್ದ ಸ್ಥಳದಲ್ಲಿ ದೇವಿಯ ವಿಗ್ರಹವೊಂದಿತ್ತು. ಅದು ಯಾವ ದೇವಿಯ ವಿಗ್ರಹವೆಂದು ಅವರಿಗೆ ಗೊತ್ತಾಗಲಿಲ್ಲ. ಅಷ್ಟರಲ್ಲಿ ದನ ಕಾಯುವ ಹುಡುಗನೊಬ್ಬ ಅಲ್ಲಿಗೆ ಬಂದ. ಅವನನ್ನು ಹತ್ತಿರ ಕರೆದು ಆ ದೇವತಾ ಮೂರ್ತಿ ಯಾವ ದೇವತೆಯ ಮೂರ್ತಿ ಎಂದು ಕೇಳಿದರು. "ಅದು ಕೆಂಪಾಂಬ ದೇವತೆಯದು ಬುದ್ಧಿ, ದೊಡ್ಡಾಂಬೆಯು ಈ ಅಮ್ಮನವರಲ್ಲಿಯೇ ಐಕ್ಯವಾದುದ್ದು ಎಂದು ಊರಿನ ಹಿರಿಯರು ಹೇಳ್ತಾರೆ ಬುದ್ಧಿ" ಎಂದ ಆ ಹುಡುಗ.

ಸತಿಪತಿಗಳಿಗೆ ರೋಮಾಂಚನವಾಯಿತು. "ನೀನು ನಿಜವಾಗಿಯೂ ಎಷ್ಟು ಧನ್ಯಳು ಲಕ್ಷ್ಮಿ! ನಮ್ಮ ಕುಲದೇವತೆ ಕೆಂಪಾಂಬೆಯ ದರ್ಶನ ಪಡೆದ ನೀನು ಪರಮ ಸಾಧ್ವೀಮಣಿ, ನಿನ್ನಿಂದ ನಮ್ಮ ವಂಶ ಪರಮಪಾವನ ವಾಯಿತು. ನಿನ್ನಿಂದ ಯಾವುದೋ ಮಹತ್ ಕಾರ್ಯ ನಡೆಯಲಿದೆ" ಎಂದ ಯುವರಾಜ ಮತ್ತೊಮ್ಮೆ ಕೆಂಪಾಂಬೆಗೆ ನಮಸ್ಕರಿಸಿದ. ಅನಂತರ ಇಬ್ಬರೂ ಗುಡ್ಡವನ್ನಿಳಿದು ಆವತಿ ಸೇರಿದರು, ಅವರಿಗಾಗಿ ಕಾಯುತ್ತ ಸೇವಕನೊಬ್ಬ ನಿಂತಿದ್ದ. ಅವನು "ಬುದ್ಧಿ, ನಿಮ್ಮನ್ನು ತಕ್ಷಣವೇ ಕರೆದುಕೊಂಡು ಬರು ವಂತೆ ಯಲಹಂಕ ಭೂಪಾಲರು ಹೇಳಿ ಕಳುಹಿಸಿದ್ದಾರೆ" ಎಂದ. ಕಾರಣ ವಿಲ್ಲದೆ ಪ್ರಭುಗಳು ಹೇಳಿಕಳುಹಿಸಲಾರರು ಎಂದು ತಿಳಿದ ಯುವರಾಜ ಲಕ್ಷ್ಮಿ ಯೊಂದಿಗೆ ಯಲಹಂಕಕ್ಕೆ ಹೊರಟ. ದಾರಿಯಲ್ಲಿ ಹಾಗೆಯೇ ದೇವನಹಳ್ಳಿಗೆ

ಭೇಟಿ ನೀಡಿ, ಪೂರ್ವಿಕರು ಕಟ್ಟಿದ ಕೋಟೆಯನ್ನು ನೋಡಿಕೊಂಡು ವೇಣು, ಗೋಪಾಲ ಸ್ವಾಮಿಯ ದರ್ಶನ ಪಡೆದರು.

೬

ಬೆಂಗಳೂರು ನಿರ್ಮಾಣದ ಕಾರ್ಯ ತ್ವರಿತ ರೀತಿಯಲ್ಲಿ ನಡೆದಿತ್ತು. ಕೋಟೆ–ಕೊತ್ತಲ, ದೇವಾಲಯ ನಿರ್ಮಾಣ ಕಾರ್ಯಗಳ ಉಸ್ತುವಾರಿ ಕೆಲಸವನ್ನು ವೀರಣ್ಣನವರಿಗೆ ವಹಿಸಿದ್ದರು. ಹಣದ ಕೊರತೆಯನ್ನು ನೀಗಲು ಯಲಹಂಕ ಪ್ರಭುಗಳ ಆಜ್ಞೆಯ ಪ್ರಕಾರ ಟಂಕಸಾಲೆಯೊಂದು ಸ್ಥಾಪನೆಗೊಂಡು ಭೈರವ ನಾಣ್ಯಗಳ ಮುದ್ರಣ ಕಾರ್ಯವೂ ಪ್ರಾರಂಭವಾಯಿತು. ನೆರೆ-ಹೊರೆ ರಾಜ್ಯಗಳ ವ್ಯವಹಾರಗಳನ್ನು ನೋಡಿಕೊಳ್ಳಲು ಯುವರಾಜನನ್ನು ಯಾತ್ರೆಯಿಂದ ಕರೆಯಿಸಿಕೊಳ್ಳಬೇಕಾಯಿತು. ಅನುಭವವಿಲ್ಲದ ಯುವರಾಜರ ಸಹಾಯಕ್ಕೆ ಸೋಮಣ್ಣಗೌಡರು ನಿಂತರು. ಕಾರ್ಯಗಳೆಲ್ಲಾ ನಿರ್ವಿಘ್ನವಾಗಿ ನಡೆಯುತ್ತಾ ಕೆಲವು ಮಾಸಗಳು ಉರುಳಿದುವು. ಈ ಮಧ್ಯೆ ಲಕ್ಷ್ಮಮ್ಮ (ಲಕ್ಷ್ಮಿ) ಗರ್ಭವತಿಯಾದಳು. ಪ್ರಭುಗಳ ಪರಿವಾರದಲ್ಲಿ ಈ ವಾರ್ತೆ ಎಲ್ಲರನ್ನು ಆನಂದಗೊಳಿಸಿತು. ರಾಣಿ ಚೆನ್ನಮ್ಮನವರಿಗಂತೂ ಹಿಡಿಸಲಾರದಷ್ಟು ಹರ್ಷ. ಎಲ್ಲಾ ದೇವಾಲಯಗಳಲ್ಲೂ ವಿಶೇಷ ಪೂಜೆಯ ಏರ್ಪಾಟನ್ನು ಮಾಡಿಸಿದಳು. ಸೊಸೆಯನ್ನಂತೂ ಪ್ರೀತಿಅಕ್ಕರೆಗಳಿಂದ ನೋಡಿಕೊಂಡಳು. ಕೆಂಪಭೂಪಾಲರಿಗೆ ಮೊಮ್ಮಗ ಹುಟ್ಟುವನೆಂಬ ವಾರ್ತೆ ಎಲ್ಲೆಲ್ಲೂ ಹಬ್ಬಿತು. ಸಿದ್ದೇಗೌಡರು ಲಕ್ಷ್ಮಮ್ಮನನ್ನು ಶ್ರೀಮಂತಕ್ಕಾಗಿ ಕೋರಮಂಗಲಕ್ಕೆ ಕರೆದುಕೊಂಡು ಹೋದರು. ಲಕ್ಷ್ಮೀದೇವಿ ಮೈಕೈ ತುಂಬಿಕೊಂಡು, ಅಪೂರ್ವ ಕಳೆಯಿಂದ ಸಾಕ್ಷಾತ್ ಗೌರಿಯಂತೆ ಶೋಭಿಸುತ್ತಿದ್ದಳು. ಶ್ರೀಮಂತದ ದಿನ ರಾಣಿ ಚೆನ್ನಾಂಬೆ ಕೋರಮಂಗಲಕ್ಕೆ ಆಗಮಿಸಿದಳು. ಬಡಬಗ್ಗರಿಗೆ ನಿರ್ಗತಿಕರಿಗೆ ಅನ್ನದಾನ, ಬಟ್ಟೆಬರೆ, ಭೂದಾನಗಳನ್ನು ಮಾಡಿ

ದಳು. ರಾಣಿ ಚೆನ್ನಾಂಬೆಯ ಸಹೃದಯ ಸೇವಾಕಾರ್ಯಗಳನ್ನು ಕಂಡ ಕೋರಮಂಗಲದ ಹಾಗೂ ಸುತ್ತಮುತ್ತಲ ಗ್ರಾಮಗಳ ನಿವಾಸಿಗಳು ಆಕೆಯನ್ನು ಮುಕ್ತ ಕಂಠದಿಂದ ಹೊಗಳಿದರು.

ಅಲಸೂರಿನ ಸೋಮೇಶ್ವರ ದೇವಾಲಯ ಹೊಸದಾಗಿ ನಿರ್ಮಾಣವಾಗಿತ್ತು. ಲಕ್ಷ್ಮಮ್ಮ ಒಂದು ದಿನ ಅಲ್ಲಿಗೆ ಬಂದು ಶಿವನಿಗೆ ಪೂಜೆ ಸಲ್ಲಿಸಿದಳು. ಅಗ್ರಹಾರದ ಬಡ ಬಗ್ಗರಿಗೆ ಧನ, ದಾನ್ಯ, ವಸ್ತ್ರಾದಿಗಳನ್ನು ದಾನ ಮಾಡಿದಳು. ಅಲ್ಲಿನ ವಿಪ್ರರಿಂದ ಆಶೀರ್ವಾದ ಪಡೆದಳು. ಕೋರಮಂಗಲಕ್ಕೆ ಹಿಂತಿರುಗಿ ಬರುತ್ತಿರಲು, ಅಲಸೂರಿನಲ್ಲಿ ಕೆಂಪಾಂಬೆಯ ದೇವಾಲಯವೊಂದನ್ನು ಕಟ್ಟಿಸಬೇಕೆಂಬ ಬಯಕೆ ಹೊತ್ತಳು. ಒಂದು ದಿನ ತನ್ನ ಇಷ್ಟ ದೇವತೆಯನ್ನು ಪೂಜಿಸಿದ ಮೇಲೆ ಮನೆಯ ಅಂಗಳದಲ್ಲಿ ಕುಳಿತಿದ್ದಳು. 90 ವರ್ಷವಾಗಿದ್ದ ಆಕೆಯ ಅಜ್ಜ ಮೈ ಹುಷಾರಿಲ್ಲದೆ ಮಲಗಿದ್ದರು, ಸಿದ್ದೇಗೌಡರು ಹೊಲಗದ್ದೆಗಳ ಕಡೆ ಹೋಗಿದ್ದರು. ತಾಯಿ ಪಾರ್ವತಮ್ಮ ಅಡಿಗೆ ಕೆಲಸದಲ್ಲಿ ತೊಡಗಿದ್ದಳು. ಒಂದು ದಿನವೂ ಯಾರನ್ನು ಆಶ್ರಯಿಸದ ಅಜ್ಜ ಯಾರೊಂದಿಗೂ ಹೆಚ್ಚಿಗೆ ಮಾತನಾಡದೆ ಸದಾ ಸೋಮೇಶ್ವರ ಧ್ಯಾನದಲ್ಲಿರುತ್ತಿದ್ದರು. ಇಷ್ಟವಾದಾಗ ಹಾಲೋ, ಹಣ್ಣನ್ನೋ ಸೇವಿಸುತ್ತಿದ್ದರು. ಅಂದು ಎಷ್ಟು ಹೊತ್ತಾದರೂ ಏನನ್ನೂ ತೆಗೆದುಕೊಂಡಿರಲಿಲ್ಲ. 'ಲಕ್ಷ್ಮಿ, ಲಕ್ಷ್ಮಿ' ಎಂದು ಅಜ್ಜ ಕೂಗಿದ್ದು ಲಕ್ಷ್ಮಮ್ಮನಿಗೆ ಕೇಳಿಸಿತು. ಅಜ್ಜನಿದ್ದಲ್ಲಿಗೆ ಆಕೆ ಧಾವಿಸಿ ಬಂದಳು. "ನನಗೆ ಶಿವನಿಂದ ಕರೆ ಬಂದಿದೆ ತಾಯಿ, ಈ ದೇಹ ನಶ್ವರ. ಶಾಶ್ವತವಲ್ಲ. ನಾವು ಮಾಡಿದ ಒಳ್ಳೆಯ ಕಾರ್ಯಗಳು, ತ್ಯಾಗ ಬಲಿದಾನಗಳು ಶಾಶ್ವತವಾಗಿ ನಿಲ್ಲುತ್ತವೆ" ಎಂದು ಹೇಳಿ ಲಕ್ಷ್ಮಮ್ಮನ ಕೈಲಿ ಹಾಲನ್ನು ತರಿಸಿಕೊಂಡು ಸ್ವಲ್ಪ ಕುಡಿದರು. ಸಂಜೆ ಗೋಧೂಳಿ ಸಮಯ. ಅಜ್ಜ ಈ ಲೋಕವನ್ನು ತ್ಯಜಿಸಿ, ಪರಲೋಕಕ್ಕೆ ಪ್ರಯಾಣ ಮಾಡಿದರು. ಈ ವಿಚಾರವನ್ನು ತಿಳಿದ ಕೆಂಪ ಭೂಪಾಲರು ರಾಣಿ ಪರಿವಾರ ಸಮೇತ ಬಂದು, ರಾಜ ಮರ್ಯಾದೆಗಳಿಂದ ಅಜ್ಜನ ಅಂತ್ಯ ಕಾರ್ಯಗಳನ್ನು ಮಾಡಿಸಿದರು. ಲಕ್ಷ್ಮಿದೇವಿಗೆ ದುಃಖವನ್ನು ಭರಿಸಿಕೊಳ್ಳುವಂತೆ ಸಮಾಧಾನ ಮಾಡಿ ಸಂತೈಸಿ ಹೋದರು.

ಕಾರ್ಯಗಳೆಲ್ಲಾ ಮುಗಿದವು. ಲಕ್ಷ್ಮಮ್ಮ ಮತ್ತೆ ಅತ್ತೆ-ಮಾವಂದಿರ

ಮನೆಗೆ ಬಂದಳು. ಪೂರ್ಣ ಗರ್ಭವತಿಯಾದ ಮುದ್ದಿನ ಸೊಸೆಯನ್ನು ಕಂಡ ಚೆನ್ನಾಂಬೆಗೆ ಎಲ್ಲಿಲ್ಲದ ಸಂತೋಷ. ಬೇಡವೆಂದರೂ ವಿವಿಧ ತಿಂಡಿ–ತೀರ್ಥಗಳನ್ನು ತಯಾರಿಸಿ, ಅವನ್ನು ತೆಗೆದು ಕೊಳ್ಳುವಂತೆ ಸೊಸೆಯನ್ನು ಬಲತ್ಕಾರ ಮಾಡುತ್ತಿದ್ದರು.

ಬೆಂಗಳೂರು ನಿರ್ಮಾಣ ಕಾರ್ಯಕ್ಕೆ ಸಂಬಂಧಿಸಿದಂತೆ ಪೂರ್ವಕ್ಕೆ ಅಲಸೂರು ಬಾಗಿಲವರೆಗೂ ಪಶ್ಚಿಮಕ್ಕೆ ಅರಳೇ ಪೇಟೆವರೆಗೂ, ಉತ್ತರಕ್ಕೆ ಯಲಹಂಕ ಬಾಗಿಲವರೆಗೂ, ದಕ್ಷಿಣಕ್ಕೆ ಕೋಟೆ ತೆಂಕಲ ಬಾಗಿಲವರೆಗೂ ಮಾರ್ಗಗಳ ನಿರ್ಮಾಣ ಕಾರ್ಯ ನಡೆದಿತ್ತು. ಈ ನಾಲ್ಕು ರಾಜ ಮಾರ್ಗ ಗಳಾಗಿದ್ದುವು, ಇವಲ್ಲದೆ ಬೇರೆ ಬೇರೆ ಬೀದಿಗಳೂ ನಿರ್ಮಾಣವಾಗಿದ್ದವು, ಒಂದೊಂದು ಬೀದಿಗೆ ಒಬ್ಬೊಬ್ಬ ಗಣ್ಯವಕ್ತಿಗಳ ಹೆಸರನ್ನಿಟ್ಟರು. ದೊಡ್ಡ ಬಸವಣ್ಣ, ದೊಡ್ಡ ಆಂಜನೇಯ' ವಿಘ್ನೇಶ್ವರ, ವೀರಭದ್ರ, ಗಂಗಾಧರೇಶ್ವರ ಇತ್ಯಾದಿ ದೇವಾಲಯಗಳನ್ನು ಕಟ್ಟಿ ಮುಗಿಸಿದ್ದರು. ದೇವಾಲಯಗಳಲ್ಲಿ ನಿತ್ಯ ಪೂಜಾ ಸೇವೆಗಳು ನಡೆಯಲು ತಕ್ಕ ಏರ್ಪಾಟುಗಳಾಗಿದ್ದವು.

ಯಲಹಂಕ ಪ್ರಭುಗಳು ಈ ಮೇಲೆ ತಿಳಿಸುವ ಜಾಗವನ್ನು ಬೆಂಗಳೂರು ನಗರ ನಿರ್ಮಾಣಕ್ಕೆ ಆರಿಸಿಕೊಳ್ಳಲು ಅನೇಕ ಕಾರಣಗಳಿದ್ದವು. ವಿಜಯ ನಗರಕ್ಕೆ ಈ ಪ್ರಭುಗಳು ಹೋದಾಗಲೆಲ್ಲಾ ವೈಭವದಿಂದ ಕೂಡಿದ ವಿಜಯ ನಗರದಂತಹ ಒಂದು ನಗರವನ್ನು ತಾನು ನಿರ್ಮಿಸಬೇಕೆಂಬ ಆಸೆ ಮೂಡು ತ್ತಿತ್ತು. ಆ ಆಸೆ ಕೈಗೂಡುವ ಸಮಯ ಈಗ ಒದಗಿಬಂದಿತ್ತು, ಯಲಹಂಕಕ್ಕೆ 10 ಮೈಲಿ ದೂರದಲ್ಲಿದ್ದ ಶಿವನ ಸಮುದ್ರವೆಂಬ ಹಳ್ಳಿ ಪ್ರದೇಶ ವನ್ನು ಪರೀಕ್ಷಿಸಿದರು ಪ್ರಭುಗಳು. ಆ ಸ್ಥಳದಲ್ಲಿ 2000 ವರ್ಷಗಳ ಹಿಂದೆ ಸಮೃದ್ಧಿಭರಿತ ನಗರ ಹೊಂದಿದ್ದು ಅದು ಕಾಲಗರ್ಭದಲ್ಲಿ ಮರೆಯಾಗಿತ್ತು. ಈಗಿನ ಬೆಂಗಳೂರಿನ ಪ್ರದೇಶವೇ ಅಂದು ಫಲವತ್ತಾದ ಬಯಲು ಪ್ರದೇಶ ವಾಗಿ ಗಂಡು ಭೂಮಿ ಎನಿಸಿತ್ತು. ಅಲ್ಲಲ್ಲಿ ಗಿಡ, ಸಸ್ಯಗಳು ಸಂಮೃದ್ಧಿ ಯಾಗಿದ್ದು. ಕಾಲಕಾಲಕ್ಕೆ ಮಳೆಯಾಗುತ್ತಿದ್ದು, ಬೆಳೆಗಳು ಹುಲುಸಾಗಿ ಬೆಳೆಯುತ್ತಿದ್ದು ವಾಯು ಗುಣವು ಹಿತಕಾರವಾಗಿದ್ದು ಆ ಪ್ರದೇಶಕ್ಕೆ ಬಂದ ವರಿಗೆಲ್ಲಾ ಆಹ್ಲಾದವನ್ನುಂಟು ಮಾಡುತ್ತಿತ್ತು. ನಾಲ್ಕು ಸುತ್ತಿನಿಂದ ಬರ ಬೇಕಾದರೆ ಎತ್ತರ ಪೀಠ ಭೂಮಿಗೆ ಬರಬೇಕಾಗಿತ್ತು. ಬಂಗಾಳಕೊಲ್ಲಿ ಮತ್ತು

ಅರಬ್ಬಿ ಸಮುದ್ರಗಳ ತೀರಗಳಿಗೆ ಮಧ್ಯದಲ್ಲಿದ್ದು ಎರಡೂ ತೀರಿ ಪ್ರದೇಶಗಳ ವ್ಯಾಪಾರ ಈ ಪೀಠ ಭೂಮಿಯ ಮೂಲಕ ನಡೆಯಲು ಅನುಕೂಲವಾಗಿತ್ತು. ಇಂಥಹ ಸುಂದರ, ಸೊಗಸಾದ ಆಯಕಟ್ಟಿನ ಪ್ರದೇಶವನ್ನು ನಗರ ನಿರ್ಮಾಣಕ್ಕೆ ಯಲಹಂಕ ಪ್ರಭುಗಳು ಆರಿಸಿದ್ದರಲ್ಲಿ ಅಚ್ಚರಿಯೇನಲ್ಲ ಆತನ ದೂರ ದೃಷ್ಟಿಯೇ ಇದಕ್ಕೆ ಕಾರಣ.

ಎರಡನೆಯದಾಗಿ ಐತಿಹಾಸಿಕ ದೃಷ್ಟಿಯಿಂದ ಹೇಳುವುದಾದರೆ. ವಿಜಯ ನಗರ ದೊರೆಗಳಿಗೆ ಅಚ್ಚು ಮೆಚ್ಚಾಗಿದ್ದ ಯಲಹಂಕ ಪ್ರಭುಗಳು "ಬೆಂಗಳೂರು ವಿಜಯನಗರ ಸಾಮ್ರಾಜ್ಯಕ್ಕೆ ದಕ್ಷಿಣದ ರಕ್ಷಣ ಕೋಟೆಯಾಗಿರ ಬೇಕೆಂದು ನಿಶ್ಚಯಿಸಿದ್ದರು"

ನಿರ್ಮಾಣದ ಜತೆಗೆ ಕೋಟೆಯ ಕಟ್ಟಡ ನಿರ್ಮಾಣವೂ ನಡೆದಿತ್ತು. ಕೋಟೆಯ ಮಹಾದ್ವಾರಕ್ಕೆ ಬಾಗಿಲುಗಳನ್ನು ಜೋಡಿಸುವ ದಿನ ಹತ್ತಿರ ವಾಯಿತು. ಮಹಾದ್ವಾರದ ಕಂಬಗಳನ್ನು ಎತ್ತಿ ಜೋಡಿಸುವುದು ಕಷ್ಟಕರ ಕೆಲಸವಾಗಿತ್ತು. ಬಾಗಿಲುಗಳನ್ನು ಜೋಡಿಸುವ ದಿನ ಕೆಂಪೇಗೌಡರು ರಾಣಿ ಪರಿವಾರ ಸಮೇತ ಹಾಜರಾದರು. ದೇವರನ್ನು ಧ್ಯಾನಿಸಿ, ಸಾಹಸದಿಂದ ಬಾಗಿಲುಗಳನ್ನು ಎತ್ತಿನಿಲ್ಲಿಸಿದರು. ಸಂಜೆಯಾಗಲು ಉಳಿದ ಕೆಲಸಗಳನ್ನು ಮಾರನೆಯ ದಿನ ಮಾಡಲು ನಿಶ್ಚಯಿಸಿ ಎಲ್ಲರೂ ಮನೆಗಳಿಗೆ ಹಿಂತಿರುಗಿದರು.

ಬೆಳಗಾಗುತ್ತಲೆ ಗೌಡರಿಗೆ ವಾರ್ತೆ ಬಂದಿತು, ಹಿಂದಿನ ದಿನ ನಿಲ್ಲಿಸಿದ ಕೋಟೆ ಬಾಗಿಲು ಉರುಳಿ ನೆಲವನ್ನಪ್ಪಿವೆಯೆಂದು. ಚಿಂತಾ ಕ್ರಾಂತರಾದ ಗೌಡರು ಅವುಗಳನ್ನು ನಿಲ್ಲಿಸಲು ಮತ್ತೆ ಪ್ರಯತ್ನಿಸಿದರು. ಆದರೆ ನಿಲ್ಲಲಿಲ್ಲ. ಕೆಲವು ಹಿರಿಯರು "ಬಾಗಿಲುಗಳು ನಿಲ್ಲಬೇಕಾದರೆ ನರಬಲಿ ಕೊಡಬೇಕೆಂದೂ, ಆ ಪದ್ಧತಿ ಆದಿಯಿಂದ ಬಂದಿರುವುದೆಂದೂ ಹೇಳಿದ್ದು ಕೇಳಿಸಿತು. ಕುಪಿತ ರಾದ ಗೌಡರು," ಇದೆಲ್ಲಾ ಮೂಢನಂಬಿಕೆ. ಬಾಗಿಲು ನಿಲ್ಲದೇ ಇದ್ದರೂ ಚಿಂತೆಯಿಲ್ಲ, ನರಬಲಿಯನ್ನು ಮಾತ್ರ ಕೊಡಲಾರೆ, ನರಬಲಿಯ ಉಸಿರೆತ್ತ ಕೂಡದು," ಎಂದು ಎಚ್ಚರಿಕೆಯನ್ನಿತ್ತರು. ಆ ದಿನ ಮತ್ತೆ ಬಾಗಿಲುಗಳನ್ನು ನಿಲ್ಲಿಸಿದರು. ಮರುದಿನ ಬೆಳಗಾಗುತ್ತಲೇ ಮತ್ತೆ ಬಾಗಿಲು ನೆಲವನ್ನಪ್ಪಿದ ವಾರ್ತೆ ತಿಳಿದ ಗೌಡರು ಎದೆಗುಂದಲಿಲ್ಲ. ಎಲ್ಲ ದೇವ-ದೇವತೆಗಳಿಗೆ ಪೂಜೆ ಗಳನ್ನು ಏರ್ಪಡಿಸಿದರು. ರಾಣಿ ಚೆನ್ನಾಂಬೆ ಭಕ್ತಿಯಿಂದ, ಕೋಟೆಯ

ಬಾಗಿಲು ನಿಲ್ಲುವಂತೆ ಕಾಪಾಡು ಎಂದು ಶ್ರೀಭೈರವೇಶ್ವರ, ಕೆಂಪಾಂಬೆಯುರನ್ನೂ ಪ್ರಾರ್ಥಿಸಿದಳು.

ನರಬಲಿಯ ಬಗ್ಗೆ ಅಂದಿನ ಬೆಳಿಗ್ಗೆ ದೇವಾಲಯದಲ್ಲಿ ಅರ್ಚಕರು ಮತ್ತು ಜ್ಯೋತಿಷಿಗಳು ಮಾತನಾಡುತ್ತಿದ್ದುದನ್ನು ಲಕ್ಷ್ಮಮ್ಮ ಕೇಳಿದ್ದಳು. ಸರ್ವಗುಣ ಸಂಪನ್ನೆ, ಸರ್ವ ಲಕ್ಷಣಗಳಿಂದ ಕೂಡಿದ, ಗರ್ಭಿಣಿ ಸ್ತ್ರೀ, ಪತಿವ್ರತೆ, ತನ್ನ ಬಲಿದಾನವನ್ನು ಕೋಟೆಯ ದ್ವಾರಕ್ಕೆ ಬಲಿಕೊಟ್ಟ ಹೊರತು ಬಾಗಿಲುಗಳು ನಿಲ್ಲಲಾರವೆಂದೂ, ಅಂತಹ ಬಲಿದಾನಕ್ಕೆ ಯಾವ ಸಾಧ್ವೀಮಣಿ ಸಿದ್ಧರಿದ್ದಾರೆಂಬ ಮಾತುಗಳನ್ನು ಕೇಳಿಸಿಕೊಂಡಿದ್ದಳು. ಕೆಂಪಾಂಬೆಗೆ ಪೂಜೆಯನ್ನು ಸಲ್ಲಿಸಿ, ಮಾವನವರ ಚಿಂತೆಯನ್ನು ದೂರ ಮಾಡು ತಾಯೇ ಎಂದು ಬೇಡಿ ಮನೆಗೆ ಬಂದಿದ್ದಳು, ಆವತಿಗುಡ್ಡದಲ್ಲಿ ಕೆಂಪಾಂಬೆ ಕಾಣಿಸಿಕೊಂಡು "ನನ್ನ ನಿನ್ನ ತ್ಯಾಗ ಬಲಿದಾನಗಳಿಂದ ಗೌಡ ಸಾಮ್ರಾಜ್ಯಕ್ಕೆ ಭೂಷಣಪ್ರಾಯವಾಗುವುದು" ಎಂದು ಹೇಳಿದ್ದು ಆಕೆಯ ಜ್ಞಾಪಕಕ್ಕೆ ಬಂದಿತು. ತನ್ನ ಅಜ್ಜ ಸೊಣ್ಣೇಗೌಡರು ನಿಧನರಾಗುವುದಕ್ಕಿಂತ ಮುಂಚೆ, ರಾಜ್ಯ ಮತ್ತು ಪ್ರಜೆಗಳ ಕ್ಷೇಮಕ್ಕೆ ತ್ಯಾಗ, ಬಲಿದಾನಗಳನ್ನು ಮಾಡಲು ಸದಾ ಸಿದ್ಧರಿರಬೇಕು ಎಂದು ಹೇಳಿದ ಮಾತೂ ಜ್ಞಾಪಕಕ್ಕೆ ಬಂದಿತು. ಆ ರಾತ್ರಿ ಮನೆಯ ಪೂಜಾ ಮಂದಿರದಲ್ಲಿ ದೇವರನ್ನು ಧ್ಯಾನಿಸುತ್ತಾ ಕುಳಿತಳು. ನಡುರಾತ್ರಿಯಲ್ಲಿ ಎದ್ದು ಮೆಲ್ಲನಡಿಯಿಡುತ್ತಾ ಕೋಟೆಯ ದ್ವಾರದ ಬಳಿ ಬಂಧಳು. ನೆಲವನ್ನಪ್ಪಿದ್ದ ಬಾಗಿಲುಗಳನ್ನು ಮುಟ್ಟಿ ನಮಸ್ಕರಿಸಿದಳು. "ಜೈ ಕೆಂಪಾಂಬೆ! ನನ್ನ ಬಲಿದಾನವನ್ನು ಕೃಪೆಯಿಟ್ಟು ಸ್ವೀಕರಿಸು ದೇವಿ! ನನ್ನ ಪೂಜ್ಯ ಮಾವನವರ ಚಿಂತೆಯನ್ನು ದೂರ ಮಾಡು ತಾಯಿ! ಬೆಂಗಳೂರು ನಗರ ಮಹಾ ನಗರವಾಗಲಿ, ವಿಶ್ವದಲ್ಲಿ ಖ್ಯಾತಿಗಳಿಸಲಿ" ಎಂದು ಪ್ರಾರ್ಥಿಸಿ ಚೂರಿಯಿಂದ ತನ್ನ ಎದೆಗೆ ತಿವಿದು ಕೊಂಡಳು. ಎದೆಯಿಂದ ಬಿಸಿರಕ್ತ ಚಿಲ್ಲೆಂದು ಹಾರಿತು ಹಾರಿದ ರಕ್ತ ಬಾಗಿಲುಗಳಿಗೆ ರಕ್ತಾರ್ಪಣವಾಯಿತು. ಆಕೆಯ ಶರೀರ ನೆಲಕ್ಕೆ ಉರುಳಿತು. ಕೆಂಪಾಂಬೆ ದರ್ಶನವಿತ್ತು ಅನುಗ್ರಹಿಸಿದಳು. ಲಕ್ಷ್ಮಮ್ಮ ಶಿವ ಧ್ಯಾನ ಮಾಡುತ್ತ ಕಣ್ಮುಚ್ಚಿದಳು.

ರಾತ್ರಿಯಲ್ಲಿ ಏಕಾಂತವಾಗಿ ನಡೆದ ಈ ಘಟನೆ ಯಾರಿಗೂ ತಿಳಿಯಲಿಲ್ಲ.

ಎಲ್ಲಾ ನಿದ್ರಾದೇವಿಯ ಮಾಯೆಗೆ ಸಿಲುಕಿದ್ದರು. ಬೆಳಗಾಯಿತು. ಮೂರನೇ ಬಾರಿಯೂ ಬಾಗಿಲು ನಿಲ್ಲದೆ ಎಲ್ಲಿ ಉರುಳುವುದೋ ಎಂಬ ಸಂಶಯದಿಂದ ಗೌಡರು ಕೋಟೆಯ ದ್ವಾರದತ್ತ ಧಾವಿಸಿದರು. ಕೋಟೆಯ ಬಾಗಿಲು ಬಿದ್ದಿರಲಿಲ್ಲ. ನಿಲ್ಲಿಸಿದ ಹಾಗೆಯೇ ನಿಂತಿದ್ದುವು. ಆನಂದದಿಂದ ಬಾಗಿಲ ಬಳಿ ಹೋಗಿ ನೋಡುತ್ತಾರೆ! ಸೊಸೆ ಲಕ್ಷ್ಮೀದೇವಿ ಬಲಿಯಾಗಿ ಬಿದ್ದಿದ್ದಾಳೆ! ಅಯ್ಯೋ ಮಗಳೇ, ನೀನೇ ಬಲಿಯಾದೆಯಾ ತಾಯಿ? ಕೆಂಪಾಂಬೆ, ಈ ಮಗಳ ಮೇಲೆ ನಿನಗೆ ಕರುಣೆ ಬರಲಿಲ್ಲವೇ?" ಎಂದು ರೋಧಿಸತೊಡಗಿದರು. ವೀರಣ್ಣ ಗೌಡರು, ಪರಿವಾರದವರು ಎಲ್ಲ ಬಂದು ನೋಡುತ್ತಾರೆ. ಗೌಡರು ದುಃಖಿಸುತ್ತಿದ್ದಾರೆ. ತನ್ನನ್ನೇ ತಾನು ಬಲಿ ಕೊಟ್ಟುಕೊಂಡು ಲಕ್ಷ್ಮಮ್ಮ ಶಾಂತ ಮುದ್ರೆಯ ಮುಖದಿಂದ ಮಲಗಿರುವಂತೆ ಕಾಣುತ್ತಿದ್ದಾಳೆ. ವೀರಣ್ಣನವರಿಗೆ ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ತಡೆಯಲಾಗಲಿಲ್ಲ. ಲಕ್ಷ್ಮಿಯ ಶರೀರವನ್ನು ತಟ್ಟಿ, ಅಲುಗಾಡಿಸಿ. "ಮಗಳೇ ಏಳಮ್ಮ, ನನ್ನ ಕಾವಲಿನಲ್ಲೇ ನಿನ್ನ ಬಲಿದಾನವಾಗಬೇಕೆ? ನಾನೆಂತಹ ಅಭಾಗ್ಯ, ತಾಯಿ" ಎಂದು ರೋಧಿಸಿದರು. ಈ ಹೃದಯವಿದ್ರಾವಕ ಸುದ್ದಿ ಕಾಡ್ಗಿಚ್ಚಿನಂತೆ ಹಬ್ಬಿತು. ಇದನ್ನು ಕೇಳಿದ ರಾಣಿ ಚೆನ್ನಾಂಬೆ ಪ್ರಜ್ಞೆತಪ್ಪಿ ಬಿದ್ದರು. ಪಾರ್ವತಮ್ಮ, ಸಿದ್ದೇಗೌಡರು, ಆಳು ನಂಜಣ್ಣ ಧಾವಿಸಿ ಬಂದರು. ಪ್ರತಿಯೊಬ್ಬರೂ "ಮಹಾತಾಯಿ ಲಕ್ಷ್ಮಮ್ಮ ತನ್ನನ್ನು ಬಲಿಕೊಟ್ಟು, ಬಾಗಿಲನ್ನು ನಿಲ್ಲಿಸಿದಳು" ಎಂದು ದುಃಖಿಸುತ್ತಾ ಆಕೆಗೆ ನಮಿಸಿ, ಅಂತಿಮ ಗೌರವ ಸಲ್ಲಿಸಿದರು. ಗೌಡರು ಧೈರ್ಯತಂದುಕೊಂಡು, ಎಲ್ಲರನ್ನೂ ಸಮಾಧಾನಮಾಡಿ, ಸೊಸೆಯ ಗುಣಗಾನ ಮಾಡಿದರು. ಆಕೆಯ ಪಾರ್ಥಿವ ಶರೀರವನ್ನು ಅಕೆಯ ತವರೂರಾದ ಕೋರಮಂಗಲದಲ್ಲಿ ಸಮಾಧಿ ಮಾಡಲು ನಿಶ್ಚಯಿಸಿದರು.

ಆಳು ನಂಜಣ್ಣ, ರಾಮ-ಲಕ್ಷ್ಮಣರನ್ನು ಹೂಡಿದ ಗಾಡಿಯಲ್ಲಿ ಲಕ್ಷ್ಮಮ್ಮನ ದೇಹವನ್ನು ಕೋರಮಂಗಲಕ್ಕೆ ಸಾಗಿಸಿಕೊಂಡು ನಡೆದ. ರಾಮ-ಲಕ್ಷ್ಮಣರಲ್ಲಿ ಮೊದಲಿನ ಹುರುಪಿರಿಲಿಲ್ಲ. ಮೂಕ ಪ್ರಾಣಿಗಳು ಅರಿತವು ತಮ್ಮ ಒಡತಿ ಇನ್ನಿಲ್ಲವೆಂದು. ಅವು ಕಣ್ಣೀರಿಡುತ್ತಾ ಮಂದಗತಿಯಲ್ಲಿ ಒಡತಿಯನ್ನೊತ್ತು ನಡೆದವು. ಗಾಡಿಯನ್ನು ಹಿಂಬಾಲಿಸುತ್ತಿದ್ದ ಭೈರವನ

ಕಣ್ಣಲ್ಲಿ ಕಣ್ಣೀರು ಧಾರಾಕಾರವಾಗಿ ಹರಿಯುತ್ತಿದ್ದು ಅದರ ದುಃಖವನ್ನು ವರ್ಣಿಸಲು ಅಸಾಧ್ಯವಾಗಿತ್ತು. ದಾರಿಯುದ್ದಕ್ಕೂ ಅಸಂಖ್ಯಾತ ಜನ ಸ್ತೋಮ. ಇಕ್ಕೆಡೆಗಳಲ್ಲಿ ಸಾಲುಕಟ್ಟಿ ಲಕ್ಷ್ಮಮ್ಮನ ಮುಖದರ್ಶನಕ್ಕಾಗಿ ನಿಂತಿದ್ದರು. ದುಃಖತಪ್ತಜನರು, ಆಕೆಯ ದೇಹದ ಮೇಲೆ ಭಕ್ತಿಯಿಂದ ಅರ್ಪಿಸಿದ ಪುಷ್ಪಗುಚ್ಛಗಳು ರಾಶಿಯಾಗಿ ಬೆಳೆದವು,

"ನಮ್ಮ ಲಕ್ಷ್ಮಮ್ಮ ತಾಯಿ, ಮಹಾಪತಿವ್ರತಾ ಸಾಧ್ವೀಮಣಿ, ಆಕೆ ತ್ಯಾಗಲಕ್ಷ್ಮಿ, ರಾಜಲಕ್ಷ್ಮಿ, ದೊಡ್ಡಾಂಬೆಯೇ ಲಕ್ಷಾಂಬೆಯಾಗಿ ಜನಿಸಿದವಳು." ಎಂದು ಆಕೆಯ ತ್ಯಾಗ ಗುಣಗಳನ್ನು ಪದೇ ಪದೇ ಪಠಿಸುತ್ತಾ ದುಃಖದಿಂದ ಮರುಗಿ, ಭಕ್ತಿಯ ಪೂಜೆ ಸಲ್ಲಿಸಿದರು.

ಕೆಂಪೇಗೌಡರು ಕೋರಮಂಗಲದಲ್ಲಿ ಆಕೆಯ ಸಮಾಧಿಯನ್ನು ಕಟ್ಟಿಸಿ ಕುಲದೇವತೆಗೆ ಸಲ್ಲುವ ಭಕ್ತಿ-ಗೌರವಗಳನ್ನು ಆಕೆಗೂ ಸಲ್ಲುವಂತೆ ಏರ್ಪಾಡು ಮಾಡಿದರು. ಲಕ್ಷ್ಮಮ್ಮ ಬೆಂಗಳೂರು ನಿರ್ಮಾಣಕ್ಕೆ ತನ್ನನ್ನೂ ತಾನು ಬಲಿ ಕೊಟ್ಟಂದಿನಿಂದ ಬೆಂಗಳೂರು ಬೆಳೆಯುತ್ತಲೇ ಬಂದಿದೆ. ಕ್ಷಾಮ-ಡಾಮರುಗಳು ಬರಲಿ, ಆಡಳಿತಗಳು ಬದಲಾವಣೆಯಾಗಲಿ, ಏನೇ ಆಗಲಿ, ಬೆಂಗಳೂರು ಅಳುಕದೆ, ಭಾರತಾಂಬೆಯ ನಗರರತ್ನಗಳಲ್ಲಿ ಒಂದು ಪ್ರಜ್ವಲಿತ ರತ್ನವಾಗಿದೆ. ಆದರೆ, ಬೆಂಗಳೂರಿನ ಹಾಗೂ ಕರ್ನಾಟಕದ ಎಷ್ಟು ಮಂದಿ ಲಕ್ಷ್ಮಮ್ಮನ ಬಲಿದಾನವನ್ನು ನೆನೆಯುತ್ತಾರೆ ?

ಅನೇಕ ನಗರಗಳು ಹುಟ್ಟಿ ಕೇವಲ ಮೂರು. ನಾಲ್ಕು ಶತಮಾನಗಳಲ್ಲಿ ನಿರ್ನಾಮವಾಗಿ ಕಣ್ಮರೆಯಾಗಿವೆ. ಆದರೆ, ಬೆಂಗಳೂರು ನಗರ ಇಂದು ಇಡೀ ವಿಶ್ವದಲ್ಲೇ ಅತಿ ತ್ವರಿತಗತಿಯಲ್ಲಿ ಬೆಳೆಯುತ್ತಿರುವ ನಗರವೆನಿಸಿ. ಸರ್ವರನ್ನೂ ಸಮಾನ ದೃಷ್ಟಿಯಿಂದ ಆಕರ್ಷಿಸುತ್ತದೆ. ಇದಕ್ಕೆ ಕೆಂಪೇ ಗೌಡರ ದೈವಭಕ್ತಿ, ಧರ್ಮಪರಾಯಣತೆ, ಆತ್ಮವಿಶ್ವಾಸ, ದೂರದೃಷ್ಟಿ ಹಾಗೂ ಅತನ ಸೊಸೆಯ ಧೈವಭಕ್ತಿ, ಪತಿವ್ರತಾಶೀಲ, ತ್ಯಾಗಬಲಿದಾನ ಇವುಗಳು ಕಾರಣವೆನ್ನೋಣವೇ ! ಇವರಿಬ್ಬರ ಎರಡು ಮಹಾ ಆತ್ಮಗಳು ಈ ನಗರವನ್ನೂ ರಕ್ಷಿಸಿಕೊಂಡು ಬರುತ್ತಿವೆ ಎಂದರೆ ಅತಿಶಯೋಕ್ತಿಯೆ !

ವಿಶ್ವದಲ್ಲಿ ಅನೇಕ ಯುದ್ಧಗಳು, ಭೂಕಂಪಗಳು, ಪ್ರವಾಹಗಳು,

ಜಲಕ್ಷಾಮಗಳು ಆಗಿ ಅನೇಕ ನಗರಗಳು ತಲ್ಲಣಿಸಿದರೂ, 450 ವರ್ಷಗಳ ನಂತರವೂ ಶೋಭಾಯಮಾನವಾಗಿ ಬೆಳೆಯುತ್ತಿರುವ ಈ ನಗರ ನಾಗರಿಕರು ಕೆಂಪೇಗೌಡರನ್ನು ತ್ಯಾಗಿ ಲಕ್ಷ್ಮಮ್ಮನವರನ್ನು ನೆನೆಯಬೇಡವೇ ? ಗೌಡರ ಕುಲದೇವತೆ ಕೆಂಪಾಂಬೆ, ಇಷ್ಟ ಆರಾಧ್ಯದೈವ, ಭೈರವೇಶ್ವರ, ತ್ಯಾಗಿ ಲಕ್ಷ್ಮಮ್ಮನ ಆತ್ಮ ಈ ನಗರವನ್ನು ಧೀರ್ಘಕಾಲ ರಕ್ಷಿಸಿಕೊಂಡು ಬರುವುದರಲ್ಲಿ ಯಾವ ಸಂಶಯವೂ ಇಲ್ಲ.

ಅನುಬಂಧ

ಮಹಾತ್ಯಾಗಿ ಲಕ್ಷ್ಮಾಂಬೆ

ನಾನು (ಲೇಖಕ) ಹಾಗೂ ಬಿ. ವಿ. ಲಕ್ಷ್ಮಣ್‌ರವರು 6–4–1986ನೇ ಭಾನುವಾರ ಸಂಜೆ 4 ಘಂಟೆಗೆ ಕೋರಮಂಗಲಕ್ಕೆ ಲಕ್ಷ್ಮಮ್ಮನ ಬಗ್ಗೆ ವಿವರಗಳನ್ನು ಸಂಗ್ರಹಿಸಲು ಭೇಟಿ ಕೊಟ್ಟಿದ್ದೆವು. ಆ ಮಹಾತಾಯಿಯ ತವರೂರಿನ ಪರಿಸರಗಳನ್ನು ಅರಿತು, ಆಕೆಯ ಸಂತತಿಯವರಿಂದ ಹಾಗೂ ಅಲ್ಲಿನ ವಯೋವೃದ್ಧರಿಂದ ಇತಿಹಾಸ ವಿಷಯಗಳನ್ನು ಸಂಗ್ರಹಿಸುವುದೇ ಮುಖ್ಯ ಉದ್ದೇಶವಾಗಿತ್ತು. ಪೂರ್ವದಿಂದಲೂ ಕೋರಮಂಗಲದಲ್ಲಿ ವಾಸಿಸುತ್ತಿರುವ ಕುಟುಂಬಕ್ಕೆ ಸೇರಿದ ಕೆ.ಶಾಮಣ್ಣರೆಡ್ಡಿ ಮತ್ತು ರಾಮರೆಡ್ಡಿ ಮತ್ತು ಎಸ್.ರಾಮರೆಡ್ಡಿಯವರನ್ನು ಭೇಟಿಮಾಡಿ, ಅವರಿಂದ ಬಹಳಷ್ಟು ವಿವರಗಳನ್ನು ಪಡೆಯಲಾಯ್ತು. ಶ್ರೀ ನಂಜಾರೆಡ್ಡಿಯವರು ಅಲ್ಲಿನ ದೇವಸ್ಥಾನದ ಮೇಲ್ವಿಚಾರಕರಾಗಿದ್ದು, ಅವರು ಮತ್ತು ಶ್ರೀ ಕೃಷ್ಣಾರೆಡ್ಡಿಯವರಿಂದ ನಮಗೆ ಹೆಚ್ಚಿನ ಸಹಕಾರ ದೊರಕಿತು.

ತನ್ನನ್ನೇ ಬಲಿದಾನ ಮಾಡಿದ ಮಹಾಸತಿ ಲಕ್ಷ್ಮಮ್ಮನನ್ನು ಕೆಂಪ ಭೂಪಾಲರು ಭಕ್ತಿ ಗೌರವಗಳಿಂದ ಕೋರಮಂಗಲದಲ್ಲಿ ಸಮಾಧಿ ಮಾಡಿಸಿ, ಆಕೆಯ ಹೆಸರಿನಲ್ಲಿ ಒಂದು ದೇವಾಲಯವನ್ನು ಕಟ್ಟಿಸಿದರು. ಆ ದೇವಾಲಯ ಈಗಲೂ ಇದೆ. ಅದು 8 ಕಂಭಗಳಿಂದ ಕೂಡಿ, ಅಂಗಳ, ಚಿಕ್ಕಹಜಾರ, ಗರ್ಭಗುಡಿಗಳನ್ನು ಹೊಂದಿದೆ. ಲಕ್ಷ್ಮಾಂಬೆ ವಿಗ್ರಹದ ಬಲಗಡೆ ಶ್ರೀ ವಿನಾಯಕ ವಿಗ್ರಹವೂ, ಎಡಗಡೆ ಶ್ರೀ ಶಾರದಾದೇವಿಗಳ ವಿಗ್ರಹವೂ ಇವೆ. ಎದುರುಗಡೆ 25 ಅಡಿ ಎತ್ತರದ ಗರುಡಗಂಭವಿದೆ. ಈ ಕಂಭದ ತಳಭಾಗದಲ್ಲಿ ಶಾಸನಗಳಿದ್ದುವೆಂದು ತಿಳಿದುಬರುತ್ತದೆ. ಅವು ಕಂಬದ ಜಗುಲಿಯಲ್ಲಿ ಮುಚ್ಚಿಹೋಗಿವೆ ಎಂದು ಹೇಳುತ್ತಾರೆ. ದೇವಾಲಯದ ಬಲಗಡೆ ಒಂದು ವೀರಗಲ್ಲಿದೆ ಅದು 3 ಮಂದಿ ವೀರರ ಚಿತ್ರಗಳಿಂದ ಕೂಡಿದೆ. ಒಬ್ಬ ವೀರ ಕುದುರೆ ಮೇಲೆ ಸವಾರಿ ಮಾಡುತ್ತಿದ್ದರೆ, ಮತ್ತೊಬ್ಬ ವೀರ ಬಿಚ್ಚುಗತ್ತಿ ಹಿಡಿದು ನಿಂತಿದ್ದಾನೆ.

ಮೂರನೇ ವೀರ ಕಾಡುಪ್ರಾಣಿಯನ್ನು ಕೊಲ್ಲುತ್ತಿರುವುದು ಕಂಡು ಬರುತ್ತವೆ. ಲಕ್ಷ್ಮಮ್ಮನ ಸಮಾಧಿ ಇರುವುದು. ಈ ದೇವಾಲಯದ ಪಶ್ಚಿಮಕ್ಕೆ ಸ್ವಲ್ಪ ದೂರದಲ್ಲಿ ಉತ್ತರಕ್ಕೆ ವಿಶಾಲಕೆರೆ-ಗದ್ದೆಗಳಿವೆ. ಅಲಸೂರಿಗೆ ಈ ಕೆರೆ ಎರಡು ಮೈಲಿ ದೂರ ಅಷ್ಟೆ, ಲಕ್ಷ್ಮಮ್ಮನ ಇಷ್ಟ ದೇವರಾದ ಸೋಮೇಶ್ವರ ದೇವಾಲಯವಿರುವುದು ಅಲಸೂರಿನಲ್ಲಿ.

ಲಕ್ಷ್ಮಿಯ ಆಪ್ತ ಸ್ನೇಹಿತೆಯೊಬ್ಬಳು ಈಗಿನ ಆಡುಗೋಡಿಯಲ್ಲಿ ಇದ್ದಳಂತೆ. ಆಕೆ ಪ್ರತಿನಿತ್ಯ ಕೋರಮಂಗಲಕ್ಕೆ ಬಂದು ಲಕ್ಷ್ಮಿಯೊಡನೆ ಪಗಡೆಯಾಟವಾಡುತ್ತಿದ್ದಳಂತೆ ಮದುವೆಯಾಗಿ ಗಂಡನ ಮನೆಯಲ್ಲಿದ್ದಾಗಲೂ ಲಕ್ಷ್ಮಿಯ ಮನೆಗೆ ಬರುತ್ತಿದ್ದಳಂತೆ, ಸಂಶಯ ಸ್ವಭಾವದ ಆಕೆಯ ಗಂಡ ತನ್ನ ಹೆಂಡತಿ ಎಲ್ಲಿಗೆ ಹೋಗುತ್ತಾಳೋ ನೋಡೋಣ ಎಂದು ಹೆಂಡತಿಯನ್ನು ಹಿಂಬಾಲಿಸಿದನಂತೆ. ಇದನ್ನರಿತ ಲಕ್ಷ್ಮಿ 'ಇನ್ನು ಮುಂದೆ ಬರಬೇಡ' ವೆಂದು ಸ್ನೇಹಿತಳಿಗೆ ಹೇಳಿದಳಂತೆ. ಲಕ್ಷ್ಮಿಯ ಸ್ನೇಹಿತಳ ವಂಶಸ್ಥರು ಈಗಲೂ ಆಡುಗೋಡಿಯಲ್ಲಿದ್ದಾರೆಂದು ತಿಳಿದು ಬರುತ್ತದೆ.

ಸರ್ವರ ಗೌರವಕ್ಕೂ ಪಾತ್ರಳು ಮಹಾಸತಿ ಲಕ್ಷ್ಮಮ್ಮ. ಆಕೆಯ ಮೇಲಿನ ಭಕ್ತಿಯಿಂದ ಆ ಪ್ರಾಂತ್ಯದ ನಿವಾಸಿಗಳು, ಜಾತಿ ಭೇದಗಳಿಲ್ಲದೆ ಸರ್ವರೂ ಒಟ್ಟುಗೂಡಿ, ವರ್ಷಕ್ಕೊಮ್ಮೆ ಜಾತ್ರೆ ನಡೆಯಿಸುತ್ತಾರೆ. ಜಾತ್ರೆಯು 3 ದಿನಗಳ ಕಾಲವೂ ಜನರ ಸಡಗರ-ಸಂಭ್ರಮಗಳಿಂದ ತುಂಬಿರುತ್ತದೆ. ಕತ್ರಾಳಿ ಪಾಳ್ಯದಲ್ಲಿ ಈಗಿರುವ ಕೆನರಾ ಬ್ಯಾಂಕ್ ಹತ್ತಿರದ ಸ್ಥಳವನ್ನು ಗೌರಿ ಬೆಟ್ಟ ಎಂದು ಕರೆಯುತ್ತಾರೆ. ಜಾತ್ರೆಯ ಸಮಯದಲ್ಲಿ. ಭಕ್ತರು ಗೌರಿ ಬೆಟ್ಟಕ್ಕೆ ಹೋಗಿ, ಕರಗವನ್ನಿಟ್ಟು ಲಕ್ಷ್ಮಿಯನ್ನು ಪೂಜಿಸಿ, ದೇವರನ್ನು ಮೆರವಣಿಗೆಯಲ್ಲಿ ಹೊತ್ತು ತರುತ್ತಾರೆ. ಬೆಲ್ಲದ ಆರತಿ ಹೊತ್ತು ಅರಿಕೆ ಹೊತ್ತ ಹೆಣ್ಣು ಮಕ್ಕಳೂ, ಬಾಯಿಗೆ ಬೆಳ್ಳಿ-ಬೀಗ ಹಾಕಿಕೊಂಡವರು, ದೇವರನ್ನೂ ಹೊತ್ತು ತರುವ ಭಕ್ತರು, ಆವೇಶದಿಂದ ಬೆಂಕಿ ಕೆಂಡವನ್ನು ತುಳಿದುಕೊಂಡು ಹೋಗುವ ಭಕ್ತರು-ಇವರನ್ನು ನೋಡುವುದೇ ಒಂದು ಚೆಂದ. ತ್ಯಾಗಿ ಲಕ್ಷ್ಮಮ್ಮನ ಕೃಪಾನುಗ್ರಹದಿಂದ ಕೆಂಡ ತುಳಿಯುವವರಿಗೆ ಕೆಂಡದ ತಾಪ ಸ್ವಲ್ಪವೂ ತಾಗುವುದಿಲ್ಲವೆಂದು

ಹೇಳುತ್ತಾರೆ, ಮಾರನೆಯ ದಿನ ಭಕ್ತರು ದೇವರನ್ನು ಅಲಂಕರಿಸಿದ ತೇರಿನಲ್ಲಿಟ್ಟು (ಉತ್ಸವ ಮೂರ್ತಿ) ರಾಜ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತಾರೆ.

ಮುಮ್ಮಡಿ ಮಾಗಡಿ ಕೆಂಪೇಗೌಡರ ಕಾಲದವರೆವಿಗೂ, ಕೆಂಪೇಗೌಡರ ವಂಸಸ್ಥರು, ಇಲ್ಲಿಗೆ ಬಂದು, ಅರವಟಿಗೆಗಳನ್ನು ಇಡಿಸಿ, ದಾನ, ಧರ್ಮ, ಅನ್ನ ಸಂತರ್ಪಣೆಗಳನ್ನು ಮಾಡಿ, ಭಕ್ತಿಯಿಂದ ಪೂಜೆ ಸಲ್ಲಿಸಿ ಹೋಗುತ್ತಿದ್ದರು. ಕೆಂಪಭೂಪಾಲರ ಕಾಲದಲ್ಲಿ ಈ ದೇವಾಲಯಕ್ಕೆ ಅನೇಕ ಎಕರೆಗಳ ಭೂಮಿಯನ್ನೂ ಮಾನ್ಯವಾಗಿ ಕೊಟ್ಟಿದ್ದರು. ಇಲ್ಲಿ ನಡೆಯುವ ಜಾತ್ರೆ ಈಗ್ಗೆ 60 ವರ್ಷಗಳ ಹಿಂದೆ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು.

ಕೆಂಪ ಭೂಪಾಲರು ಕಟ್ಟಿಸಿದ ದೇವಾಲಯ 1936ರಲ್ಲಿ ಶಿಥಿಲಗೊಂಡಿತ್ತು. ಆಗ ಈ ಗ್ರಾಮದ ಜೋಡಿದಾರರಾಗಿದ್ದ ಶ್ರೀಗರುಡಾಚಾರ್ ವಂಶಸ್ಥರು ಅಪಾರ ದ್ರವ್ಯವನ್ನು ಖರ್ಚು ಮಾಡಿ, ಗ್ರಾಮಸ್ಥರಿಂದ ದೇವಾಲಯಕ್ಕೆ ದುರಸ್ಥಿ ಮಾಡಿಸಿದರೆಂದು ತಿಳಿದು ಬರುತ್ತದೆ. ಗುಡಿಯ ಬಗ್ಗೆ ಪ್ರಚಲಿತವಾಗಿರುವ ಒಂದು ದಂತ ಕತೆ ಈ ರೀತಿ ಇದೆ. ಗುಡಿ ಕಟ್ಟುವ ಕರ್ತರು, ಗುಡಿಯನ್ನು ಹೊಸದಾಗಿ ಕಟ್ಟಲು, ದೇವರ ವಿಗ್ರಹವನ್ನೂ ಕದಲಿಸಿ, ದೇವಸ್ಥಾನ ಮುಗಿಸುವವರೆಗೆ ಜಲದಲ್ಲಿ ಪವಿತ್ರ ಸ್ಥಳದಲ್ಲಿ ಇಡಬೇಕೆಂದೂ ನಿಶ್ಚಯಿಸಿದರು. ಆದರೆ ಅಲಸೂರಿನ ಪ್ರಸಿದ್ಧಗಾರೆಯವನೊಬ್ಬ ಇತರರಿಗೆ ಅರಿಯದಂತೆ ಮಧ್ಯರಾತ್ರಿಯಲ್ಲಿ ಮೂಲ ವಿಗ್ರಹವನ್ನು ಕದಲಿಸಲು ದೇವೀ ವಿಗ್ರಹ ತಳಭಾಗದಲ್ಲಿ ಅಪಾರ ಹಣ ಅವನಿಗೆ ದೊರೆಯಿತಂತೆ, ಇವನು ಕೆಲವೇ ದಿನಗಳಲ್ಲಿ ಮರಣ ಹೊಂದಿದನೆಂದೂ, ಒಂದೇ ವರ್ಷದೊಳಗೆ ಇವನ ವಂಶಸ್ಥರೆಲ್ಲಾ ನಿರ್ನಾಮವಾದರೆಂಬ ಪ್ರತೀತಿ ಇದೆ. ಗ್ರಾಮದ ನಿವಾಸಿಗಳು ದೇವಿಯ ವಿಗ್ರಹವನ್ನು ಕಾಪಾಡಿಕೊಂಡು ದೇವಾಲಯವನ್ನು ಮೊದಲಿನಂತೆ ಕಟ್ಟಿಸಿ ದೇವಿಯನ್ನು ಪ್ರತಿಷ್ಠಾಪಿಸಿದರು.

ಲಕ್ಷ್ಮಮ್ಮನಿಗೆ ಅರಿಕೆ ಹೊತ್ತ ಭಕ್ತರು. ತಮ್ಮ ಕೋರಿಕೆಗಳನ್ನು ಆ ದೇವಿ ಈಡೇರಿಸುತ್ತಾಳೆಂದು ಆಕೆಯ ಗುಣಗಾನವನ್ನು ಸದಾ ಮಾಡುತ್ತಾರೆ, ಶಾಲಿ ವಾಹನ ಶಕ 1893ರಲ್ಲಿ ರಾಮನಗರ ತಾಲ್ಲೂಕ್. ಲಕ್ಕಪ್ಪನ ಹಳ್ಳಿಯ ಸಿದ್ದೇಗೌಡರ ಮಗ ಶ್ರೀ ಎಲ್. ಎಸ್ ರಾಮಲಿಂಗಯ್ಯನವರು ಲಕ್ಷ್ಮಮ್ಮನ ಸಮಾಧಿಗೆ 4 ಕಂಭಗಳ ಮಂಟಪವನ್ನೂ ಕಟ್ಟಿಸಿದರು.

ಆಗಿನ ಮೈಸೂರಿನ ಪ್ರಥಮ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆ.ಸಿ.ರೆಡ್ಡಿಯವರ ಘನ ಅಧ್ಯಕ್ಷತೆಯಲ್ಲಿ ಅವರ ಉದ್ಘಾಟನೆಯಾಯಿತು. 15-4-1970ರಲ್ಲಿ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಶ್ರೀ ಸಿ. ಹೊನ್ನಯ್ಯನವರು ದೇವಾಲಯದ ಗೋಪುರದ ಅಸ್ತಿಭಾರವನ್ನು ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಹಾಕಿದರು. 16-5-1971ರಲ್ಲಿ ರಾಜ್ಯಪಾಲರಾಗಿದ್ದ ಶ್ರೀ ಧರ್ಮವೀರರ ಅಧ್ಯಕ್ಷತೆಯಲ್ಲಿ ಶ್ರೀ ಶೃಂಗೇರಿ ಸಂಸ್ಥಾನ ಶಿವಗಂಗಾ ಮಠಾಧೀಶರು ಅದನ್ನು ಉದ್ಘಾಟನೆ ಮಾಡಿದರು.

ಸಾಧ್ವೀಮಣಿ ಲಕ್ಷ್ಮಮ್ಮನ ವಂಶಸ್ಥರು ಈಗಲೂ ಕೋರಮಂಗಲದಲ್ಲಿದ್ದಾರೆಂದೂ, ಅವರು ಸಾಮಾನ್ಯ ಕುಟುಂಬ ಜೀವನ ನಡೆಸುತ್ತಿದ್ದಾರೆಂದೂ ಅಲ್ಲಿನ ವೃದ್ಧರಿಂದ ತಿಳಿದು ಬರುತ್ತದೆ. ಅವರ ಪ್ರಕಾರ ಶ್ರೀಯುತರುಗಳಾದ ಸೊಣ್ಣೆಗೌಡ, ಬಚ್ಚೇಗೌಡ, ಪಿಳ್ಳಪ್ಪಗೌಡ, ಕೆಂಪಣ್ಣ ಇವರವಂಶಕ್ಕೆ ಸೇರಿದವರೆಂದೂ, ವಿಜಯ, ಮುನಿರಾಜು ಎಂಬ ಯುವಕರೂ ಈ ಮನೆತನಕ್ಕೆ ಸೇರಿದವರೆಂದೂ ತಿಳಿದು ಬಂದಿದೆ.

ಮಹಾಸತಿ ತ್ಯಾಗಿ ಲಕ್ಷ್ಮಮ್ಮ ತನ್ನನ್ನು ಬೆಂಗಳೂರು ನಗರ ನಿರ್ಮಾಣಕ್ಕೆ ಬಲಿದಾನ ಮಾಡಿಕೊಂಡರೆ ಬೆಂಗಳೂರಿನ ಬಡಾವಣೆಗಳಿಗಾಗಿ ಇವರ ಜಮೀನುಗಳು ಉಪಯೋಗವಾಗಿವೆ. ಈ ಮನೆತನದವರು ಹಾಲಿನ ವ್ಯಾಪಾರ ವೃತ್ತಿಯಿಂದ ಜೀವಿಸುತ್ತಿದ್ದಾರೆಂದು ತಿಳಿಸುತ್ತಾರೆ.

ಇತಿಹಾಸ ಪ್ರಸಿದ್ಧ, ಸ್ತ್ರೀ ಕುಲಕ್ಕೇ ತ್ಯಾಗಮಯಿ ಸಾಧ್ವೀಮಣಿ ಎನಿಸಿದ ಲಕ್ಷ್ಮಮ್ಮನ ಗುಡಿ ಸಮಾಧಿಗಳನ್ನು ನೋಡಿದಾಗ, ಅದರ ಸುತ್ತಲ ಪರಿಸರ, ವಾತಾವರಣ ಬೇಗಳೂರಿನ ಯಾರೇ ಆಗಲಿ, ಅವರು ತಲೆತಗ್ಗಿಸಿ ನಾಚುವಂತೆ ಮಾಡುತ್ತದೆ. ಲಕ್ಷ್ಮಿದೇವಿ ಸಮಾಧಿಯು ಸುತ್ತಲ ಪ್ರದೇಶ ಮಲವಿಸರ್ಜನೆ ಸ್ಥಳವಾಗಿದೆ, (ಹೇಸಿಗೆ ಸ್ಥಳ) ಬೇರೆಯವರ ಸಮಾಧಿಗಳೂ ತಲೆ ಎತ್ತಿ ಕುರುಚಲು ಗಿಡಗಳು ಬೆಳೆದಿವೆ. ಎಲ್ಲಿ ನೋಡಿದರೂ ದುರ್ಗಂಧ ನಾಥ ಬೆಂಗಳೂರಿನ ಹೆಮ್ಮೆ ಎನಿಸುವ ಈ ಸ್ಥಳವನ್ನು ಸುಂದರ ಸ್ಮಾರಕ ಎನಿಸುವ ಈ ಸ್ಥಳವನ್ನು ಸುಂದರ ಸ್ಮಾರಕವನ್ನಾಗಿ ಮಾಡುವುದು, ಸರ್ಕಾರದ, ಸಮಾಜದ, ಬೆಂಗಳೂರು ಅಭಿವೃದ್ಧಿನಗರ ಮಂಡಳಿ ಹಾಗೂ

ಇತರೇ ಸಂಸ್ಥೆಗಳ ಆದ್ಯ ಕರ್ತವ್ಯ. ಆ ಸ್ಥಳವನ್ನು ಸ್ವಚ್ಛಗೊಳಿಸಿ, ಕಾಂಪೌಂಡು ನಿರ್ಮಾಣ ಮಾಡಿ ಫಲಪುಷ್ಪ ಗಿಡ-ಸಸ್ಯಗಳಿಂದ ಕಂಗೊಳಿಸು ವಂತೆ ಮಾಡಿದರೇ ಭಕ್ತರ, ಪ್ರವಾಸಿಗಳ ಕೇಂದ್ರವಾಗಿ ಬೆಂಗಳೂರಿನ ಕೀರ್ತಿ ಕಳಶಕ್ಕೆ ಹೆಗ್ಗಳಿಯ ಒಂದು ಗುರಿಯನ್ನು ಮಾಡಿಸಿದಂತಾಗುತ್ತದೆ, ಕರ್ನಾಟಕ ಮಾತೆ ಶ್ರೀ ಭುವನೇಶ್ವರಿ ಈ ಪುಣ್ಯ ಕಾರ್ಯಕ್ಕೆ ಸಂಬಂಧಿಸುವ ಎಲ್ಲರಿಗೂ ಸಕಲ ಶಕ್ತಿ-ಸಾಮರ್ಥ್ಯಗಳನ್ನು, ಸನ್ಮಂಗಳವನ್ನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಜೈ ಲಕ್ಷ್ಮಾಂಬ

ಆವತಿ ನಾಡ ಪ್ರಭು

ರಣಭೈರೇ ಗೌಡ

ಐತಿಹಾಸಿಕ ನಾಟಕ